ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 7 ಬುಧವಾರ 2022

ಸಂಪುಟ: 43 | ಸಂಚಿಕೆ: 230 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಸಂವಿಧಾನ ಶಿಲ್ಪಿಗೆ ಸಿಎಂ ನಮನ....



ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ಅಂಗವಾಗಿ ಬೆಂಗಳೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಾ.ಅಂಬೇಡ್ಕರ್ ಪುತ್ಥಳಿಗೆ ಗೌರವ ನಮನ ಸಲ್ಲಿಸಿದರು. ಈ ವೇಳೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಉಪಸ್ಥಿತರಿದ್ದರು.

ಕೈಗಾರಿಕಾ ಪ್ರದೇಶಕ್ಕೆ ರೈತರಿಂದ ಬಲವಂತವಾಗಿ

ಜಮೀನು ಸ್ವಾಧೀನ ಇಲ್ಲ

- ಭಾರೀ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸ್ಪಷ್ಟನೆ
- ಸ್ವಯಂಪ್ರೇರಿತವಾಗಿ ನೀಡುವ ಭೂಮಿಯಲ್ಲಿ ಮಾತ್ರವೇ ಕೈಗಾರಿಕೆ ಸ್ಥಾಪನೆ
- ಜಾಗತಿಕ ಹೂಡಿಕೆದಾರರ ಸಮಾವೇಶದ ಒಪ್ಪಂದ ಐದು ವರ್ಷದಲ್ಲಿ ಶೇ.75ರಷ್ಟು ಅನುಷ್ಠಾನ
- 10 ವರ್ಷದಲ್ಲಿ ಡೀಸೆಲ್ ವಾಹನ ಬಳಕೆ ಸಂಪೂರ್ಣ ನಿಷೇಧ






ಬೆಂಗಳೂರು,ಡಿ. 6(ಕೆಎಂಶಿ)– ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ರೈತರಿಂದ ಬಲವಂತವಾಗಿ ಜಮೀನು ಭೂಸ್ವಾಧೀನ ಮಾಡುವುದಿಲ್ಲ ಎಂದು ಭಾರೀ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ಪ್ರೆಸ್ ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ಕೈಗಾರಿಕಾ ಉದ್ದೇಶಗಳಿಗೆ ನಾವು ಯಾವುದೇ ರೈತರಿಂದಲೂ ಬಲವಂತವಾಗಿ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳುತ್ತಿಲ್ಲ. ಸ್ವಯಂಪ್ರೇರಿತರಾಗಿ ಯಾರು ಜಮೀನು ಕೊಡಲು ಮುಂದೆ ಬರುತ್ತಾರೋ ಅಂತಹವರಿಂದ ಮಾತ್ರ ಜಮೀನು ಪಡೆದುಕೊಳ್ಳುತ್ತಿದ್ದೇವೆ ಎಂದರು.

ಯಾವುದೇ ಕಾರಣಕ್ಕೂ ಕೃಷಿಯೋಗ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಕೆಲವು ಕಡೆ ರೈತರು ಸ್ವಯಂಪ್ರೇರಿತರಾಗಿ ಬಂದು ತಮ್ಮ ಜಮೀನನ್ನು ಮಾರುಕಟ್ಟೆ ದರದಂತೆ ಖರೀದಿ ಮಾಡಬೇಕೆಂದು ಮನವಿ ಮಾಡಿದ್ದಾರೆ. ಕೆಲವು ಕಡೆ ಜಮೀನೇ ಇಲ್ಲದ ರೈತರು ಪ್ರತಿಭಟನೆ ನಡೆಸುತ್ತಾರೆ. ಇದರ ಹಿಂದೆ ರಾಜಕೀಯ ಉದ್ದೇಶವೂ ಇದೆ. ರಾಜ್ಯದಲ್ಲಿ ಇದುವರೆಗೂ ನಾವು ಕೈಗಾರಿಕೆಗಳಿಗೆ ಕೇವಲ ಶೇ. 0.61 ಭೂಮಿಯನ್ನು ಮಾತ್ರ ಬಳಸಿಕೊಂಡಿದ್ದೇವೆ ಎಂದು ಅಂಕಿ ಸಂಖ್ಯೆಗಳನ್ನು ವಿವರಿಸಿದರು.

ನವೆಂಬರ್ ತಿಂಗಳಿನಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡಿರುವ ಒಪ್ಪಂದಗಳು ಮುಂದಿನ 5 ವರ್ಷಗಳಲ್ಲಿ ಶೇ.75ರಷ್ಟು ಅನುಷ್ಠಾನಕ್ಕೆ ಬರಲಿದ್ದು, ಯಾವುದೇ ರೀತಿಯ ಅನುಮಾನ ಬೇಡ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ನಾವು ಕೇವಲ ವೈಭವೀಕರಣ ಮಾಡಿಕೊಳ್ಳಲು ಅಥವಾ ಬಂಡವಾಳ ಹೆಚ್ಚಿಸಿಕೊಳ್ಳಲು ಇಲ್ಲವೇ ಅಂಕಿ–ಸಂಖ್ಯೆಗಳನ್ನು ತೋರಿಸಿಕೊಳ್ಳಲು ಒಪ್ಪಂದ ಮಾಡಿಕೊಂಡಿಲ್ಲ. ಯೋಜನೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸುವವರಿಗೆ ಮಾತ್ರ ಅನುಮೋದನೆ ನೀಡಿದ್ದೇವೆ. ಇನ್ನು 5 ವರ್ಷದೊಳಗೆ ಶೇ.75ರಷ್ಟು ಎಂಓಯು ಅನುಷ್ಠಾನಕ್ಕೆ ಬರಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ನವೆಂಬರ್ ತಿಂಗಳಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ ಸುಮಾರು 9.81 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯಾಗಿವೆ. ಉದ್ದಿಮೆಗಳಿಗೆ ಬೇಕಾದ ನೀರು, ಭೂಮಿ, ವಿದ್ಯುತ್, ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲು ಈಗಾಗಲೇ ಸಂಬಂಧಪಟ್ಟ ಇಲಾಖೆಗಳ ಜೊತೆ ಸಮನ್ವಯ ಸಮಿತಿಯನ್ನು ರಚಿಸಿದ್ದೇವೆ. ಇದು ನಮ್ಮ ನಿರೀಕ್ಷೆಗೂ ಮೀರಿ ಅನುಷ್ಠಾನವಾಗುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು. ರಾಜ್ಯದಲ್ಲಿ 2 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಮಾಡಲು ಉದ್ಯಮಿಗಳು ಮುಂದೆ ಬಂದಿದ್ದರೂ ನಾವು ಅವರ ಜೊತೆ ಎಂಓಯು ಮಾಡಿಕೊಂಡಿಲ್ಲ. ಈಗಾಗಲೇ ▶ 6ನೇ ಪುಟಕ್ಕೆ

ಗುಜರಾತ್ ಫಲಿತಾಂಶ ಕರ್ನಾಟಕದ ಮೇಲೂ ಪರಿಣಾಮ ಬೀರಲಿದೆ...



ಬೆಂಗಳೂರು, ಡಿ. 6(ಕೆಎಂಶಿ)– ಗುಜರಾತ್ ಚುನಾವಣೋತ್ತರ ಸಮೀಕ್ಷೆಯಲ್ಲಿ ಬಿಜೆಪಿಗೆ ಬಹುಮತ ಬರಲಿದ್ದು, ಕರ್ನಾಟಕದಲ್ಲಿಯೂ ಇದರ ಪರಿಣಾಮ ಬೀರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ನಾವು ನೂರಕ್ಕೆ ನೂರರಷ್ಟು ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯವುದು ಖಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಮೂರು ವರ್ಷಗಳಲ್ಲಿ ನಾವು ನೀಡಿರುವ ಕಾರ್ಯಕ್ರಮಗಳು ಜನಮನ್ನಣೆಯನ್ನು ಗಳಿಸಿವೆ. ಪ್ರತಿಪಕ್ಷದ ನಾಯಕರ ಸುಳ್ಳುಗಳ ಸರಮಾಲೆ ಜನರ ದಾರಿ ತಪ್ಪಿಸಲು ಸಾಧ್ಯವಾಗಿಲ್ಲ. ಗುಜರಾತ್ ಆಡಳಿತದ ಮೇಲೂ ಆರೋಪಗಳ ಸುರಿಮಳೆಯೇ ನಡೆದಿತ್ತು. ಆದರೆ ಮತದಾರರು ಸತತವಾಗಿ ಬಿಜೆಪಿಯನ್ನು ಅಲ್ಲಿ ಅಧಿಕಾರಕ್ಕೆ ತಂದಿದ್ದಾರೆ. ಅದೇ ಫಲಿತಾಂಶ ಕರ್ನಾಟಕದ ಮುಂದಿನ ವಿಧಾನಸಭೆ ಚುನಾವಣೆಯಲ್ಲೂ ಬರಲಿದೆ ಎಂದರು. ಜನ ಇಂದು ಸುಶಾಸನ, ಅಭಿವೃದ್ಧಿ ಕಾರ್ಯಗಳನ್ನು ಬೆಂಬಲಿಸುತ್ತಾರೆ. ಸುಳ್ಳು ಹಾಗೂ ರಾಜಕೀಯ ▶ 6ನೇ ಪುಟಕ್ಕೆ

ಇಂದಿನಿಂದ ಸಂಸತ್ತಿನ ಚಳಿಗಾಲದ ಅಧಿವೇಶನ

16 ಮಸೂದೆ ಮಂಡಿಸಲು ಕೇಂದ್ರ ಸರ್ಕಾರ ಸಿದ್ಧತೆ

ನವದೆಹಲಿ: ಸಂಸತ್‌ನ ಚಳಿಗಾಲದ ಅಧಿವೇಶನ ನಾಳೆ(ಡಿ.7)ಯಿಂದ ಆರಂಭವಾಗಲಿದ್ದು, 16 ಹೊಸ ಮಸೂದೆಗಳನ್ನು ಮಂಡಿಸಲು ಕೇಂದ್ರ ಸರಕಾರ ಸಿದ್ಧತೆ ನಡೆಸಿದೆ. ಈ ಬಾರಿ ಚಳಿಗಾಲ ಅಧಿವೇಶನದ ಸಂದರ್ಭದಲ್ಲಿ ಟ್ರೇಡ್‌ಮಾರ್ಕ್ (ತಿದ್ದುಪಡಿ) ಮಸೂದೆ–2022 ಮತ್ತು ಬಹು–ರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ– 2022 ಸೇರಿದಂತೆ 16 ಮಸೂದೆಗಳ ಮಂಡಿಸಲಾಗುತ್ತಿದೆ.


ಕೆಲವು ಮಸೂದೆಗಳನ್ನು ಈಗಾಗಲೇ ಸದನಗಳಲ್ಲಿ ಅಂಗೀಕರಿಸಲಾಗಿದೆ ಅಥವಾ ಸಂಸದೀಯ ಸಮಿತಿಗಳು ಪರಿಶೀಲಿಸಿವೆ. ಚಳಿಗಾಲದ ಅಧಿವೇಶನವು ಡಿಸೆಂಬರ್ 29 ರವರೆಗೆ ನಡೆಯಲಿದ್ದು, ಒಟ್ಟು 17 ಕೆಲಸದ ದಿನಗಳು ಇರುತ್ತವೆ. ಇದರ ಮಧ್ಯೆ ದತ್ತಾಂಶ ಸಂರಕ್ಷಣಾ ಮಸೂದೆ ಮತ್ತು ಬ್ಯಾಂಕಿಂಗ್ ▶ 6ನೇ ಪುಟಕ್ಕೆ

ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ತಪ್ಪಿಸಲು ಹೊಸ ವೈನ್ ಶಾಪ್ ತೆರೆಯುವುದು ಅನಿವಾರ್ಯ



ಬೆಂಗಳೂರು, ಡಿ. 6(ಕೆಎಂಶಿ)– ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುವುದನ್ನು ತಪ್ಪಿಸಲು ಹೊಸ ವೈನ್ ಶಾಪ್‌ಗಳನ್ನು ತೆರೆಯುವುದು ಅನಿವಾರ್ಯ ಎಂದು ಅಬಕಾರಿ ಸಚಿವ ಕೆ. ಗೋಪಾಲಯ್ಯ ಇಂದಿಲ್ಲಿ ತಿಳಿಸಿದ್ದಾರೆ. ಆದರೆ ರಾಜ್ಯ ವಿಧಾನಸಭಾ ಚುನಾವಣೆ ನಮ್ಮ ಮುಂದಿರುವುದರಿಂದ ಸದ್ಯಕ್ಕೆ ಅದು ಸಾಧ್ಯವಿಲ್ಲ ಎಂದರು. ನಾವೇ ಮತ್ತೆ 2023ರ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ. ನಮ್ಮ ನೇತೃತ್ವದ ಸರ್ಕಾರದಲ್ಲೇ ಎಲ್ಲ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು ನೂತನ ಅಬಕಾರಿ ನೀತಿ ಅಳವಡಿಸಿ, ಕಿರಾಣಿ ಅಂಗಡಿಗಳಲ್ಲಿ ಮದ್ಯ ದೊರೆಯುವುದನ್ನು ತಪ್ಪಿಸಲು ಹೊಸ ವೈನ್‌ಶಾಪ್‌ಗಳನ್ನು ತೆರೆಯಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅಕ್ರಮ ಮದ್ಯ ಮಾರಾಟ ಮತ್ತು ನೆರೆ ರಾಜ್ಯಗಳಿಂದ ಅಕ್ರಮವಾಗಿ ಬರುತ್ತಿರುವ ಮದ್ಯವನ್ನು ತಡೆಯಲು ನಾಳೆ ಅಬಕಾರಿ ಜಿಲ್ಲಾಧಿಕಾರಿಗಳ ಮಹತ್ವದ ಸಭೆ ಕರೆದಿದ್ದೇನೆ. ಕೆಲವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಮೂಲಕ ಅಕ್ರಮ ಮದ್ಯ ಮಾರಾಟಕ್ಕೆ ತಡೆಯೊಡ್ಡಿ, ಇಲಾಖೆಯಲ್ಲಿ ಆದಾಯ ವೃದ್ಧಿಸಲು ಕ್ರಮ ಜರುಗಿಸಲಾಗುವುದು ಎಂದರು. ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ, ರಾಜ್ಯಗಳಿಂದ ರಾಜ್ಯಕ್ಕೆ ಮದ್ಯ ಬರುತ್ತಿದ್ದು ಇದನ್ನು ಕಟ್ಟುನಿಟ್ಟಾಗಿ ತಡೆಯಲು ಗಡಿ ಭಾಗಗಳಲ್ಲಿ ಹೊಸದಾಗಿ 25 ಚೆಕ್‌ಪೋಸ್ಟ್‌ಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ.

ಹಳೆ ವಿದ್ಯಾರ್ಥಿ ಸೋಗಿನಲ್ಲಿ ಶಿಕ್ಷಕಿಯರ ವ್ಯಾನಿಟಿ ಬ್ಯಾಗ್ ಕದ್ದ ಯುವಕ ಕಾವೇರಿ ನದಿಗೆ ಹಾರಿದರೂ ಬೆನ್ನತ್ತಿ ಹಿಡಿದ ಜನ!



ವಿರಾಜಪೇಟೆ, ಡಿ.6– ಹಳೆ ವಿದ್ಯಾರ್ಥಿ ಸೋಗಿನಲ್ಲಿ ವರ್ಗಾವಣೆ ಪತ್ರ (ಟಿಸಿ) ಕೇಳುವ ನೆಪದಲ್ಲಿ ಶಾಲೆಗೆ ಬಂದು ಶಿಕ್ಷಕಿಯರಿಬ್ಬರ ಹಣ, ಬೆಳ್ಳಿ ಬ್ರೇಸ್‌ಲೇಟ್ ಮತ್ತು ಎಟಿಎಂ ಕಾರ್ಡ್ ಇದ್ದ ವ್ಯಾನಿಟಿ ಬ್ಯಾಗ್ ಕದ್ದು, ಕಾವೇರಿ ನದಿಗೆ ಹಾರಿ ಈಜಿ ಪರಾರಿಯಾಗಲೆತ್ನಿಸಿದರೂ ಬಿಡದೆ ಹಳೆ ಕಳ್ಳನನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೊಪ್ಪಿಸಿದ್ದಾರೆ. ಈ ಘಟನೆ ತಾಲೂಕಿನ ಬೇತ್ರಿ ಗ್ರಾಮದ ಬಳಿ ನಡೆದಿದೆ. ಮೂರ್ನಾಡು ವಾಸಿ ಶಿವಕುಮಾರ್ ಹಳೇ ವಿದ್ಯಾರ್ಥಿ ಸೋಗಿನಲ್ಲಿ ಶಿಕ್ಷಕಿಯರ ಬ್ಯಾಗ್ ಕಳ್ಳತನ ಮಾಡಿ, ಪೊಲೀಸರ ಅತಿಥಿಯಾದವನು.

ತಾಲೂಕಿನ ಕಾಕೋಟು ಪರಂಬುವಿನ ಪ್ರಾಥಮಿಕ ಶಾಲೆಯ ಶಿಕ್ಷಕಿ ಮಾಲತಿ ಅವರು ಸೋಮವಾರ(ಡಿ.5) ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಶಾಲೆಯ ಕಚೇರಿಯಲ್ಲಿ ತಮ್ಮ ಸಹೋದ್ಯೋಗಿಗಳಾದ ಕೆ.ವಿ.ಕುಸುಮಾವತಿ, ಶ್ರೀಮತಿ ತಂಗಮ್ಮ ಹಾಗೂ ಶ್ರೀಮತಿ ಕೆ.ಆರ್.ಗ್ರೇಸಿ ಅವರೊಂದಿಗೆ ಊಟ ಮಾಡಿ ಕೈ ತೊಳೆಯಲು ಹೋಗುತ್ತಿದ್ದಾಗ ಅಲ್ಲಿಗೆ ಬಂದ ಸುಮಾರು 25 ವರ್ಷದ ಅಪರಿಚಿತ ಯುವಕ ತಾನು ಶಿವಕುಮಾರ್, ಮೂರ್ನಾಡು ವಾಸಿ, ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದು, ಟಿಸಿ ಬೇಕಾಗಿದೆ ಎಂದು ಕೇಳಿದ್ದಾನೆ.

ಆಗ ಮಾಲತಿಯವರು ನೀವು ಹೊರಗಡೆ ಇರಿ. ನಾವು ಕೈತೊಳೆದುಕೊಂಡು ಬರ್ತೀವಿ ಎಂದು ಅತ್ತ ಹೋಗುತ್ತಿದ್ದಂತೆ ಇತ್ತ ಆ ಅಪರಿಚಿತ ಮಾಲತಿ ಮತ್ತು ಗ್ರೇಸಿ ಅವರ ವ್ಯಾನಿಟಿ ಬ್ಯಾಗ್ ಎತ್ತಿಕೊಂಡು ಓಡಿದ್ದಾನೆ. ಇದನ್ನು ಕಂಡ ಮಾಲತಿ ಅವರು ಜೋರಾಗಿ ಕಳ್ಳ.. ಕಳ್ಳ.. ▶ 6ನೇ ಪುಟಕ್ಕೆ

ಕರ್ನಾಟಕ ಮುಕ್ತ ವಿವಿ ಸೇರಿದಂತೆ ಪ್ರತಿಷ್ಠಿತ ವಿವಿಗಳ ನಕಲಿ ಅಂಕಪಟ್ಟಿ ತಯಾರಿಕಾ ಜಾಲ ಪತ್ತೆ

4 ಮಂದಿ ಸಿಸಿಬಿ ಬಲೆಗೆ

ಬೆಂಗಳೂರು: ಹಣ ಪಡೆದು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವು ಸೇರಿದಂತೆ ದೇಶದ ನಾನಾ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿ ನೀಡುತ್ತಿದ್ದ ಬೃಹತ್ ಜಾಲವನ್ನು ಬೆಂಗಳೂರು (ಕೇಂದ್ರೀಯ ಅಪರಾಧ ವಿಭಾಗ) ಸಿಸಿಬಿ ಪೊಲೀಸರು ಮಂಗಳವಾರ ಭೇದಿಸಿದ್ದಾರೆ.

ದೇಶದ 25 ಕ್ಕೂ ಹೆಚ್ಚು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿ (ಮಾರ್ಕ್ಸ್ ಕಾರ್ಡ್) ತಯಾರಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಇಬ್ಬರು ಮಹಿಳೆಯರು ಸೇರಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಕಲಿ ಮಾರ್ಕ್ಸ್ ಕಾರ್ಡ್ ಮಾರಾಟದ ಜಾಲದಲ್ಲಿದ್ದ ಶಿಲ್ಪ, ಸುರೇಂದ್ರ ಕುಮಾರ್, ಶಾರದ ಹಾಗೂ ರಾಜಣ್ಣ ಬಂಧಿತ ಆರೋಪಿಗಳಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಕಲಿ ಮಾರ್ಕ್ಸ್ ಕಾರ್ಡ್ ತಯಾರಿಸಿ ಮಾರಾಟ ಮಾಡುತ್ತಿದ್ದ ವೆಂಕಟೇಶ್ವರ ಇನ್ಸ್ಟಿಟ್ಯೂಟ್‌ಗೆ ಸೇರಿದ ಮಹಾಲಕ್ಷ್ಮಿ ಲೇಔಟ್, ಕೊಡಿಗೇಹಳ್ಳಿ ಹಾಗೂ ಮಾರತ್ ಹಳ್ಳಿಯ ಮೂರು ಇನ್ಸ್ಟಿಟ್ಯೂಟ್‌ಗಳ ಮೇಲೆ ಸಿಸಿಬಿಯ ಮೂರು ವಿಶೇಷ ತಂಡಗಳು ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದುಕೊಂಡು ಏಕಕಾಲದಲ್ಲಿ ದಾಳಿ ನಡೆಸಿ ಸುಮಾರು 12 ಗಂಟೆಗಳ ಕಾಲ ಶೋಧ ನಡೆಸಿ ಜಾಲವನ್ನು ಭೇದಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳಿಂದ 3 ಇನ್ಸ್ಟಿಟ್ಯೂಟ್‌ಗಳಲ್ಲಿದ್ದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿಎ, ಬಿಎಸ್ಸಿ, ಬಿಕಾಂ, ▶ 6ನೇ ಪುಟಕ್ಕೆ

ನಾಳೆಯಿಂದ ಆಯುಷ್ಮಾನ್ ಭಾರತ್ ಗುರುತಿನ ಚೀಟಿ ವಿತರಣೆಗೆ ಚಾಲನೆ

ಬೆಂಗಳೂರು: ದೇಶದ ಯಾವುದೇ ನೋಂದಾಯಿತ ಆಸ್ಪತ್ರೆಯಲ್ಲೂ ಚಿಕಿತ್ಸೆ ಸಾಧ್ಯವಾಗಿಸುವ ಆಯುಷ್ಮಾನ್ ಕಾರ್ಡನ್ನು ಡಿಸೆಂಬರ್ 8 ರಿಂದ 5.09 ಕೋಟಿ ಜನರಿಗೆ ಹಂಚಲು ಚಾಲನೆ ನೀಡಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ. 3 ತಿಂಗಳ ಒಳಗಾಗಿ 4 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ಕಾರ್ಡ್ ತಲುಪಲಿದೆ. ಸಾರ್ವಜನಿಕರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡುವ ಆಯುಷ್ಮಾನ್ ಭಾರತ್–ಪ್ರಧಾನ ಮಂತ್ರಿ ಜನಾರೋಗ್ಯ–ಆರೋಗ್ಯ ಕರ್ನಾಟಕ ಯೋಜನೆಯ ಗುರುತಿನ ಚೀಟಿಗಳ ವಿತರಣೆಗೆ ▶ 6ನೇ ಪುಟಕ್ಕೆ

ಕ್ರೀಡಾ ಸಾಧಕರಿಗೆ ಸರ್ಕಾರಿ ಉದ್ಯೋಗ

- ಸದ್ಯದಲ್ಲೇ ಸಂಪುಟದಲ್ಲಿ ತೀರ್ಮಾನ
- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ
- ಸಾಧನೆ ಮಟ್ಟ ಆಧರಿಸಿ ಹುದ್ದೆಗಳ ನಿರ್ಧಾರ
- ಪ್ಯಾರೀಸ್ ಒಲಂಪಿಕ್ಸ್‌ಗೆ 75 ಕ್ರೀಡಾಪಟುಗಳ ತಯಾರಿ



ಬೆಂಗಳೂರು, ಡಿ. 6(ಕೆಎಂಶಿ)– ಕ್ರೀಡಾಪಟುಗಳಿಗೆ ನೇರ ನೇಮಕಾತಿ ಮೂಲಕ ಸರ್ಕಾರಿ ಉದ್ಯೋಗ ನೀಡುವ ಯೋಜನೆಗೆ ಮುಂದಿನ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಪದವೀಧರರಾದ ಒಲಂಪಿಕ್ಸ್ ಹಾಗೂ ಪ್ಯಾರಾ ಒಲಂಪಿಕ್ಸ್ ಪದಕ ವಿಜೇತರಿಗೆ ಗ್ರೂಪ್ ಎ ಉದ್ಯೋಗ ನೀಡಲಾಗುವುದು ಎಂದು ತಿಳಿಸಿದರು. ಏಕಲವ್ಯ ಸೇರಿದಂತೆ ಇತರ ಕ್ರೀಡಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿ ಮಾತನಾಡಿದ ಅವರು, ಕ್ರೀಡಾಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಆಯ್ಕೆ ಸಮಿತಿಯ ಮೂಲಕ ಪಟುಗಳನ್ನು ಆಯ್ಕೆ ಮಾಡಿ, ಸರ್ಕಾರಿ ಉದ್ಯೋಗ ಕಲ್ಪಿಸಲಾಗುವುದು. ಪದವೀಧರರಾಗಿರುವ ಏಷಿಯನ್ ಗೇಮ್ಸ್ ಹಾಗೂ ಕಾಮನ್‌ವೆಲ್ತ್ ಪದಕ ವಿಜೇತರಿಗೆ ಗ್ರೂಪ್ ಬಿ ಉದ್ಯೋಗ, ಇದಕ್ಕಿಂತ ಕಡಿಮೆ ಸ್ತರದ ಕ್ರೀಡಾಕೂಟದ ಪದಕವಿಜೇತರಿಗೆ ಗ್ರೂಪ್ 'ಸಿ' ಹಾಗೂ ಗ್ರೂಪ್ 'ಡಿ' ಉದ್ಯೋಗವನ್ನು ನೀಡಲಾಗುವುದು. ಕ್ರೀಡಾಪಟುಗಳಿಗೆ ಸರ್ಕಾರದ ಉದ್ಯೋಗ ನೀಡುವ ನೀತಿ ಕರ್ನಾಟಕದ ಹೊರತು ಬೇರೆ ಯಾವುದೇ ರಾಜ್ಯದಲ್ಲಿಲ್ಲ ಎಂದರು. ಕಳೆದ ಆಗಸ್ಟ್ 15 ರಂದು 75 ಕ್ರೀಡಾಪಟುಗಳನ್ನು ದತ್ತುಪಡೆದು, ಮುಂದಿನ ಪ್ಯಾರೀಸ್ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ತರಬೇತಿ ನೀಡಲಾಗುತ್ತಿದೆ. 4 ವರ್ಷದ ತರಬೇತಿ, ಉತ್ತಮ ತರಬೇತಿದಾರರು, ಶಾಲಾ ವ್ಯವಸ್ಥೆಗಳನ್ನು ಒದಗಿಸಲಾಗುತ್ತಿದೆ. ಇದಕ್ಕಾಗಿ ತಲಾ 10 ಲಕ್ಷ ವಿನಿಯೋಗಿಸಲಾಗಿದ್ದು, ಅವಶ್ಯಕತೆಗೆ ಅನುಸಾರ ಇನ್ನೂ ಹೆಚ್ಚಿನ ಅನುದಾನವನ್ನು ಒದಗಿಸಲಾಗುವುದು. ಕಾಮನ್‌ವೆಲ್ತ್, ಏಷಿಯನ್ ಗೇಮ್ಸ್, ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ನಮ್ಮ ಕ್ರೀಡಾಪಟುಗಳು ಉತ್ತಮ ▶ 6ನೇ ಪುಟಕ್ಕೆ

ಯಾರೊಬ್ಬರೂ ಹಸಿವಿನಿಂದ ಮಲಗಬಾರದು: ಕೇಂದ್ರಕ್ಕೆ ಸುಪ್ರೀಂಕೋರ್ಟ್ ಸಲಹೆ



ನವದೆಹಲಿ: ದೇಶದಲ್ಲಿ ಯಾರೊಬ್ಬರೂ ಖಾಲಿ ಹೊಟ್ಟೆಯಲ್ಲಿ ಮಲಗಬಾರದು ಎಂಬುದು ನಮ್ಮ ಸಂಸ್ಕೃತಿಯಾಗಿದೆ. ಹಾಗಾಗಿ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಆಹಾರ ಧಾನ್ಯ ತಲುಪುವುದರತ್ತ ಗಮನಹರಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಹೇಳಿದೆ. 'ಇ ಶ್ರಮ್' ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ಅಸಂಘಟಿತ ಮತ್ತು ವಲಸೆ ಕಾರ್ಮಿಕರ ಕುರಿತ ಹೊಸ ಚಾರ್ಟ್ ಅನ್ನು ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಹಿಮ ಕೊಹ್ಲಿ ನೇತೃತ್ವದ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಹೇಳಿದೆ.

ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023

ಮೈಸೂರು ಜಿಲ್ಲೆಯ 9,276 ಹೊಸ ಇವಿಎಂ ಕಾರ್ಯಕ್ಷಮತೆ ಖಾತರಿ

- ಮೈಸೂರಿನ ಸಿದ್ಧಾರ್ಥ ಬಡಾವಣೆ ಬಳಿಯ ಜಿಲ್ಲಾ ಕಚೇರಿಗಳ ಸಂಕೀರ್ಣ ಆವರಣದ ಹೊಸ ಭದ್ರತಾ ಕೊಠಡಿಯಲ್ಲಿ ಸುರಕ್ಷಿತ ದಾಸ್ತಾನು
- ದೋಷಪೂರಿತ 4 ವಿದ್ಯುನ್ಮಾನ ಮತಯಂತ್ರಗಳು ಹೈದರಾಬಾದ್ ಕಾರ್ಖಾನೆಗೆ ವಾಪಸ್
- ಜನವರಿಯಲ್ಲಿ ವಿವಿ ಪ್ಯಾಟ್ ಉಪಕರಣಗಳು ಮೈಸೂರಿಗೆ



ಮೈಸೂರು, ಡಿ. 6(ಆರ್‌ಕೆ)–ಮುಂಬರುವ 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಹೈದರಾಬಾದ್‌ನಿಂದ ತಂದಿರುವ ವಿದ್ಯುನ್ಮಾನ ಮತಯಂತ್ರಗಳ ಪೈಕಿ 9,276ರ ಕಾರ್ಯಕ್ಷಮತೆ ಖಾತರಿಯಾಗಿದ್ದು, ಉಳಿದ 4 ದೋಷಪೂರಿತವಾಗಿವೆ. ಅವುಗಳನ್ನು ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ಗೆ ಕಳಿಸಲಾಗಿದೆ.

ಹೊಸ 9,280 ವಿದ್ಯುನ್ಮಾನ ಮತಯಂತ್ರ (ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್)ಗಳನ್ನು ನೋಡಲ್ ಅಧಿಕಾರಿಯೂ ಆದ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ನೇತೃತ್ವದಲ್ಲಿ ಭಾರೀ ಭದ್ರತೆಯೊಂದಿಗೆ ಹೈದರಾಬಾದ್‌ನಿಂದ ಮೈಸೂರಿಗೆ ತರಲಾಗಿತ್ತು. ಮೈಸೂರಿನ ಸಿದ್ಧಾರ್ಥ ಬಡಾವಣೆಯ ಬನ್ನೂರು ರಸ್ತೆಯಲ್ಲಿನ ನೂತನ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ನಿರ್ಮಿಸಿರುವ ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿಯಲ್ಲಿ ಈ ಮತಯಂತ್ರಗಳನ್ನು ಶೇಖರಿಸಲಾಗಿದ್ದು, ದಿನದ 24 ಗಂಟೆಯೂ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ.

50 ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ನೋಡಲ್ ಅಧಿಕಾರಿ ಜಿ.ಟಿ. ದಿನೇಶ್ ಕುಮಾರ್, ಎಲ್ಲಾ ವಿದ್ಯುನ್ಮಾನ ಮತಯಂತ್ರಗಳನ್ನು ನಾಲ್ಕು ದಿನಗಳ ಕಾಲ ಪರಿಶೀಲಿಸಿದರು. ಚಲಾಯಿಸುವ ಮತಗಳು ಆಯಾಯ ಅಭ್ಯರ್ಥಿಗಳ ಮತ ಲೆಕ್ಕಕ್ಕೆ ಬರುತ್ತಿದೆಯೇ, ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಪರೀಕ್ಷಿಸಿದಾಗ 9,280ರಲ್ಲಿ ಕೇವಲ 4 ಇವಿಎಂಗಳು ದೋಷಪೂರಿತ ಎಂದು ಕಂಡುಬಂದ ಹಿನ್ನೆಲೆಯಲ್ಲಿ ಅವುಗಳನ್ನು ಹೈದರಾಬಾದ್‌ನ ಕಾರ್ಖಾನೆಗೆ ಹಿಂದಿರುಗಿಸಿ, ಸುರಕ್ಷಿತ ಮತಯಂತ್ರ ಕಳುಹಿಸುವಂತೆ ಕೋರಿ ಪತ್ರ ವ್ಯವಹಾರ ಮಾಡಲಾಗಿದೆ.

ತಪಾಸಣೆ ವೇಳೆ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಹಾಗೂ ಇತರ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ ಆಹ್ವಾನಿಸಿದ್ದರಲ್ಲದೇ, ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದ್ದು, ಇವಿಎಂಗಳ ಕಾರ್ಯಕ್ಷಮತೆಯನ್ನು ಸಾಕ್ಷೀಕರಿಸಿಕೊಳ್ಳಲಾಗಿದೆ. ಬಟನ್‌ಗಳು, ಲೈಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ದೃಢಪಡಿಸಿಕೊಂಡಿರುವ ಅಧಿಕಾರಿಗಳು, ಪ್ರತಿಯೊಂದು ಯಂತ್ರದ ಮೇಲೆ ಸರ್ಟಿಫೈ ಮಾಡಿ ಮುದ್ರೆ ಹಾಕಿದ್ದಾರೆ. ಭದ್ರತಾ ಕೊಠಡಿಯಲ್ಲಿ ಮೈಸೂರು ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಇವಿಎಂಗಳನ್ನು ಗುರುತು ಮಾಡಿ ಸುರಕ್ಷಿತವಾಗಿರಿಸಲಾಗಿದೆ. ಭಾರತ ಚುನಾವಣಾ ಆಯೋಗ (ECI) ಮಾರ್ಗಸೂಚಿಯನ್ವಯ ಮೊದಲ ಹಂತದ ತಪಾಸಣೆ ನಂತರ ಬಿಗಿ ಪೊಲೀಸ್ ಭದ್ರತೆಯಲ್ಲಿ ಇರಿಸಲಾಗಿದ್ದು, ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆಯೇ ಅಭ್ಯರ್ಥಿಗಳೆದುರು ಇವಿಎಂಗಳ ಮುದ್ರೆ ತೆರೆದು ಮತ್ತೊಮ್ಮೆ ಅವುಗಳ ಕಾರ್ಯವೈಖರಿ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸಲಾಗುವುದು. ಜನವರಿ 2ನೇ ವಾರ ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನಿಂದ 9,280 ವಿವಿ ಪ್ಯಾಟ್ ಯಂತ್ರಗಳನ್ನು ತಂದು ಅವುಗಳ ಕಾರ್ಯವಿಧಾನದ ಬಗ್ಗೆಯೂ ತೋರಿಸಲಾಗುವುದು. ವಿದ್ಯುನ್ಮಾನ ಮತಯಂತ್ರಗಳ ಭದ್ರತಾ ಕೊಠಡಿಗೆ ಬೀಗಮುದ್ರೆ ಮಾಡಿದ್ದು, ಆವರಣಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಸದ್ಯದಲ್ಲೇ ಒಳ ಹಾಗೂ ಹೊರ ಆವರಣಕ್ಕೆ ಸಿಸಿ ಟಿವಿ ಕ್ಯಾಮರಾ ಅಳವಡಿಸಿ, ಅಲ್ಲಿಯೇ ಇರುವ ಎಲೆಕ್ಟ್ರಿಕಲ್ ಕಂಟ್ರೋಲ್ ರೂಂನಲ್ಲಿ ಕ್ಯಾಮರಾದಲ್ಲಿ ಸೆರೆಯಾಗುವ ದೃಶ್ಯಾವಳಿಯನ್ನು ವೀಕ್ಷಿಸಿ, ನಿಗಾ ವಹಿಸಲಾಗುವುದು. ಪ್ರತೀದಿನ ವ್ಯಾಪ್ತಿಯ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಭೇಟಿ ನೀಡಿ ಭದ್ರತಾ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸುವರಲ್ಲದೆ, ಗರುಡ ಮತ್ತು ಪಿಸಿಆರ್ ವಾಹನದ ಸಿಬ್ಬಂದಿಯೂ ಗಸ್ತು ನಡೆಸುತ್ತಿದ್ದಾರೆ.

ಕೈ ಹಿಡಿತಾರಾ ವಿಶ್ವನಾಥ್; ಖರ್ಗೆ ಭೇಟಿ ಬೆನ್ನಲ್ಲೇ ಸಿದ್ದರಾಮಯ್ಯ ಭೇಟಿ





ಬೆಂಗಳೂರು: ನಿನ್ನೆಯಷ್ಟೇ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮಹತ್ವದ ರಾಜಕೀಯ ಬೆಳವಣಿಗೆಯಲ್ಲಿ ವಿಧಾನ ಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಇಂದು ಭೇಟಿ ಮಾಡಿದ್ದಾರೆ.

ಬೆಂಗಳೂರು ಶಿವಾನಂದ ಸರ್ಕಲ್‌ನಲ್ಲಿರುವ ಕಾವೇರಿ ಗೆಸ್ಟ್ ಹೌಸ್‌ನಲ್ಲಿ ಸಿದ್ದರಾಮಯ್ಯ ಅವರನ್ನು ವಿಶ್ವನಾಥ್ ಭೇಟಿ ಮಾಡಿದ್ದಾರೆ. ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ ಸಿದ್ದರಾಮಯ್ಯ ಅವರ ಆರೋಗ್ಯ ವಿಚಾರಿಸಿದ ವಿಶ್ವನಾಥ್ ಅವರ ನಡೆ ಈಗ ಕುತೂಹಲಕ್ಕೆಡೆ ಮಾಡಿದೆ. ಆರೋಗ್ಯ ವಿಚಾರಿಸಿ ಸುಮಾರು ಅರ್ಧ ಗಂಟೆಗಳ ಕಾಲ ಸಿದ್ದರಾಮಯ್ಯ ಅವರ ಜೊತೆ ವಿಶ್ವನಾಥ್ ಮಾತುಕತೆ ನಡೆಸಿದರು. ಸಿದ್ದರಾಮಯ್ಯ ಜೊತೆಗೆ ಇದ್ದ ಮುನಿಸಿನಿಂದ ಕೈ ಪಡೆ ತೊರೆದು ಜೆಡಿಎಸ್‌ಗೆ ಹೋಗಿ, ನಂತರ ಬಿಜೆಪಿಗೆ ಹಾರಿದ್ದ ವಿಶ್ವನಾಥ್ ಈಗ ಮತ್ತೆ ಕಾಂಗ್ರೆಸ್ ಸೇರಲು ಸಿದ್ದರಾಗಿದ್ದಾರೆ. ನಿನ್ನೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದ ವಿಶ್ವನಾಥ್, ಇಂದು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿರುವುದು ಅವರು ಮತ್ತೆ ಕಾಂಗ್ರೆಸ್ ಸೇರುವುದನ್ನು ಪುಷ್ಟೀಕರಿಸಿದೆ. ಸದ್ಯ ಬಿಜೆಪಿ ನಾಯಕರಿಂದ ವಿಶ್ವನಾಥ್ ದೂರ ದೂರ ಸಾಗುತ್ತಿದ್ದಾರೆ. ಈ ಕಾರಣದಿಂದ ಕಾಂಗ್ರೆಸ್ ಸೇರಲು ಪ್ರಯತ್ನ ಮುಂದುವರಿಸಿದ್ದಾರೆ.

ಮಹಾಜನ ಕಾಲೇಜಲ್ಲಿ ಯುವ ಸೌರಭ ಸಂಭ್ರಮ

ಮೈಸೂರು,ಡಿ.6 (ಆರ್‌ಕೆಬಿ) –ಮೈಸೂರಿನ ಜಯಲಕ್ಷ್ಮಿಪುರಂ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಯುವಜನರು ಸಂಭ್ರಮದಿಂದ ನಲಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಗಮ ಸಂಗೀತ, ಜಾನಪದ ಗೀತೆ, ನೃತ್ಯರೂಪಕ, ಕಂಸಾಳೆ, ನಾಟಕ ಇತರೆ ಕಾರ್ಯಕ್ರಮಗಳು ನಡೆದವು.





ಯುವ ಸೌರಭ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳು.

ಕಾರ್ಯಕ್ರಮದಲ್ಲಿ ಮೈಸೂರಿನ ನಿಸರ್ಗ ಮತ್ತು ವಿಸ್ಮಯ ಸಹೋದರಿಯರಿಂದ ಸುಗಮ ಸಂಗೀತ, ಕಾಲೇಜಿನ ಸುಪ್ರೀತ್ ಎಸ್.ಭಾರದ್ವಾಜ್ ಮತ್ತು ತಂಡ ಸಾರಂತ ರಂಗ ತಂಡದ ವತಿಯಿಂದ ಜಾನಪದ ಗೀತೆ, ಕಾಲೇಜಿನ ವಿದ್ಯಾರ್ಥಿನಿಯರಾದ ಕೆ.ಅನ್ವಿತಾ ಮತ್ತು ತಂಡ ಪ್ರದರ್ಶಿಸಿದ ಮಹಿಳಾ ಕಂಸಾಳೆ ಗಮನ ಸೆಳೆಯಿತು. ಪೂಜಾ ಸುಗಮ ಮತ್ತು ತಂಡದಿಂದ ಕರ್ನಾಟಕ ಕಲಾ ದೀಪ್ತಿ ನೃತ್ಯ ರೂಪಕ, ತಿ.ನರಸೀಪುರ ತಾಲೂಕಿನ ಪುನೀತ್ ಕುಮಾರ್ ಪಿ. ಮೂಗೂರು ಮತ್ತು ತಂಡದ ಡೊಳ್ಳು ಕುಣಿತ, ಗೌತಮ್ ಮತ್ತು ತಂಡದಿಂದ 'ಬೇಕಾಗಿದ್ದಾರೆ! ಯಾಕೆ ಏನು ಕೇಳಬೇಡಿ' ನಾಟಕ ವಿದ್ಯಾರ್ಥಿಗಳ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಇದಕ್ಕೂ ಮುನ್ನ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ ಮುರಳೀಧರ ಭಾಗವತ್ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾಲೇಜಿನ ಸಾಂಸ್ಕೃತಿಕ ರಂಗತಂಡ ಸಂಚಾಲಕ ಎ.ರಾಜೇಶ್, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ್ ಉಪಸ್ಥಿತರಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಸ್ವಾಗತಿಸಿದರು.



ಮೈಸೂರು ತಾಲೂಕಿನ ಕಳಸ್ತವಾಡಿ ಗ್ರಾಮದಲ್ಲಿ ಸೋಮವಾರ ಭಜರಂಗಿ ಗೆಳೆಯರ ಬಳಗ ವತಿಯಿಂದ ಹನುಮ ಜಯಂತಿ ಆಚರಿಸಲಾಯಿತು. ಹನುಮ ಮಾಲೆ ಧಾರಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಆಂಜನೇಯಸ್ವಾಮಿ ವಿಗ್ರಹ ಮೆರವಣಿಗೆ ನಡೆಸಿದರು. ನಂತರ ಅನ್ನ ಸಂತರ್ಪಣೆ ನಡೆಯಿತು. ಈ ವೇಳೆ ಹನುಮನ ಭಕ್ತಾದಿಗಳು, ಗ್ರಾಮಸ್ಥರು ಭಾಗವಹಿಸಿ, ಪ್ರಸಾದ ಸ್ವೀಕರಿಸಿದರು.

ಅರ್ಜಿ ಆಹ್ವಾನ

ಮೈಸೂರು,ಡಿ.6–ರುಡ್‌ಸೆಟ್ ಸಂಸ್ಥೆ, ಮೈಸೂರಿನಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ ತರಬೇತಿಗಳನ್ನು ಡಿ.15ರಿಂದ ಪ್ರಾರಂಭಿಸಲಾಗುವುದು. ಆಸಕ್ತರು ಡಿ.14ರೊಳಗಾಗಿ ಸಂಸ್ಥೆಗೆ ಬಂದು ತರಬೇತಿಗೆ ಹೆಸರು ನೋಂದಾಯಿಸಲು ತಿಳಿಸಲಾಗಿದೆ. ಅಭ್ಯರ್ಥಿಗಳು 18ರಿಂದ 45 ವರ್ಷಗಳ ವಯೋಮಿತಿ ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು. ಊಟ ಮತ್ತು ವಸತಿ ಸಹಿತವಾಗಿ ಸಂಪೂರ್ಣ ಉಚಿತ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 0821–2519 663, 9844013948, 9964096406, 9880196581, 9740430061, 8746803006

ಮೈಸೂರಲ್ಲಿ ಮೆಟಾವರ್ಸ್ ಟೆಕ್ನಾಲಜೀಸ್ ಹಬ್ ಆರಂಭ




ಮೈಸೂರು,ಡಿ.6(ಆರ್‌ಕೆ)–ಬಿಯಾಂಡ್ ಬೆಂಗಳೂರು ಉಪಕ್ರಮಗಳ ಭಾಗವಾಗಿ ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸಹಯೋಗದಲ್ಲಿ ಕೆಡಿಇಎಂ ನೇತೃತ್ವದ ಮೆಟಾವರ್ಸ್ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಮೈಸೂರಿನಲ್ಲಿ ಆರಂಭಿಸಲು ಸಿದ್ಧತೆ ನಡೆದಿದೆ.

ಬೆಂಗಳೂರಲ್ಲಿ ನಡೆದ ಬೆಂಗಳೂರು ಟೆಕ್ ಸಮಿಟ್–2022 ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮೈಸೂರಲ್ಲಿ ಮೊದಲ ಮೆಟಾವರ್ಸ್ ಟೆಕ್ನಾಲಜೀಸ್ ಹಬ್ ಯೋಜನೆಯನ್ನು ಘೋಷಿಸಿದರು. ಕೆಡಿಇಎಂ ಮತ್ತು ಯುನೆಸ್ಕೋ ಮಹಾತ್ಮ ಗಾಂಧಿ ಎಜುಕೇಷನ್ ಫಾರ್ ಪೀಸ್ ಅಂಡ್ ಸಸ್ಟೇನಬಲ್ ಡೆವಲಪ್‌ಮೆಂಟ್ ಜೊತೆ ಮೆಟಾವರ್ಸ್ ಬಗ್ಗೆ ಜ್ಞಾನ ಹಂಚಿಕೊಳ್ಳಲು ಪ್ರಕ್ರಿಯೆಗಳು ಆರಂಭವಾಗಿವೆ. UNESCO MGIEP ದಶಮಾನೋತ್ಸವ ಆಚರಣೆ ಬಗ್ಗೆ ವಿಷನ್ ಡಾಕ್ಯುಮೆಂಟ್ ಬಿಡುಗಡೆ ಮಾಡಿ ಮಾತನಾಡಿದ ಉದ್ಯಮಿ ಡಾ. ಅನಂತ ದುರೈಯಪ್ಪ, ಮಿಕ್ಸೆಡ್ ರಿಯಾಲಿಟಿಯಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ. ನಾವು ಭೌತಿಕ ಮತ್ತು ವರ್ಚುಯಲ್ ಪ್ರಪಂಚದ ಮಿಕ್ಸೆಡ್ ರಿಯಾಲಿಟಿಯನ್ನು ಅಳವಡಿಸಿಕೊಳ್ಳಬೇಕು. ಈ ಡಿಜಿಟಲ್ ಶಿಕ್ಷಣವನ್ನು ವೈಜ್ಞಾನಿಕ ಪುರಾವೆಗಳ ಮೂಲಕ ತಿಳಿಸಬೇಕು ಎಂದರು.

ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ವ್ಯವಸ್ಥಾಪಕ ನಿರ್ದೇಶಕ ಸುಧನ್ವ ಧನಂಜಯ ಮಾತನಾಡಿ, ಎಕ್ಸೆಲ್ ಸಾಫ್ಟ್ ಮೆಟಾವರ್ಸ್‌ನಲ್ಲಿ ಪ್ರಸ್ತಾಪವಾಗಿರುವ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಪಾಲುದಾರರಾಗಿರುವುದು ಸಂತಸ ತಂದಿದೆ. ಶಿಕ್ಷಣ ಮತ್ತು ತಂತ್ರಜ್ಞಾನದಲ್ಲಿ ಎರಡು ದಶಕಗಳಿಗೂ ಹೆಚ್ಚು ಅನುಭವದೊಂದಿಗೆ ಪಾಲುದಾರಿಕೆ ಸಂಸ್ಥೆಗಳಾಗಿರುವ ಕೆಡಿಇಎಂ ಮತ್ತು ಯುನೆಸ್ಕೋದೊಂದಿಗೆ ಈ ಉಪಕ್ರಮ ಯಶಸ್ವಿಯಾಗಲಿದೆ ಎಂಬ ವಿಶ್ವಾಸವಿದೆ ಎಂದರು. ಕೆಡಿಇಎಂ ಸಿಇಓ ಸಂಜೀವ ಗುಪ್ತಾ, ಅಧ್ಯಕ್ಷ ಬಿ.ವಿ. ನಾಯ್ಡು, ಪ್ರಶಾಂತ ಹಂದಲೆ, ಕೆ.ಎಸ್.ಸುಧೀರ್ ಸೇರಿದಂತೆ ಹಲವು ಐಟಿ–ಬಿಟಿ ಉದ್ಯಮಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.6–ಚೆಸ್ಕಾಂ ವತಿಯಿಂದ ಡಿ.8ರಂದು ಗುರುವಾರ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿದ್ದು, ಈ ಸಂಬಂಧ ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1 ಮತ್ತು 2ನೇ ಹಂತ, ಗಣೇಶ್ ನಗರ, ಸತ್ಯನಗರ, ಮಹದೇವಪುರ ರಸ್ತೆ, ಜರ್ಮನ್ ಪ್ರೆಸ್, ಉಸ್ಮಾನಿಯಾ ಬ್ಲಾಕ್, ಗೌಸಿಯಾನಗರ, ರಾಘವೇಂದ್ರ ನಗರ, ಗಿರಿಯಾಬೋವಿ ಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.





ಮೈಸೂರು ದೊಡ್ಡ ಒಕ್ಕಲಗೇರಿ ಸ್ನೇಹ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಎಲ್.ಚೌಡಪ್ಪ, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಹರೀಶ್‌ಕುಮಾರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್.ಎನ್.ಪ್ರಶಾಂತ್, ಯಶವಂತ, ವಾಸುದೇವ, ಗಂಗಣ್ಣ, ಶಿವಕುಮಾರ್‌ಗೌಡ ಉಪಸ್ಥಿತರಿದ್ದಾರೆ.

ಅಂತಾರಾಷ್ಟ್ರೀಯ ಯೋಗಪಟು ಖುಷಿಗೆ ಕರ್ನಾಟಕ ಕ್ರೀಡಾ ರತ್ನ



ಮೈಸೂರು,ಡಿ.6(ಆರ್‌ಕೆಬಿ)–ಯೋಗ ಕ್ಷೇತ್ರದಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಯೋಗಾಸನ ಸ್ಪರ್ಧೆಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಗಳಿಸಿರುವ ಕು. ಹೆಚ್.ಖುಷಿ ಅವರ ಸಾಧನೆಯನ್ನು ಪರಿಗಣಿಸಿ ರಾಜ್ಯ ಸರ್ಕಾರ 2021ನೇ ಸಾಲಿನ 'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

ಬೆಂಗಳೂರು ರಾಜಭವನದಲ್ಲಿ ಮಂಗಳವಾರ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಖುಷಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಖುಷಿ ಅವರು 2016 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಯೂ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಮೈಸೂರಿನ ಆರ್‌ಬಿಐ ನೋಟು ಮುದ್ರಣಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಹೇಮಚಂದ್ರ ಹಾಗೂ ಕುಮುದ ದಂಪತಿಯ ಹಿರಿಯ ಪುತ್ರಿ ಕು.ಖುಷಿ, ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮೊದಲನೇ ವರ್ಷದ ಬ್ಯಾಚುಲರ್ ಆಫ್ ನ್ಯಾಚುರೋಪತಿ ಮತ್ತು ಯೋಗ ಮೆಡಿಕಲ್ ಸೈನ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಜೊತೆಯಲ್ಲೇ 10 ವರ್ಷಗಳಿಂದ ಮೈಸೂರು ವಿವೇಕಾನಂದ ಮತ್ತು ಸಂಶೋಧನಾ ಕೇಂದ್ರದಲ್ಲಿ ಡಾ.ಪಿ.ಎನ್.ಗಣೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಮಾಡುತ್ತಿದ್ದಾರೆ. ಯೋಗ ಕ್ಷೇತ್ರದಲ್ಲಿ ಅನೇಕ ಸಂಶೋಧನೆಗಳನ್ನು ಮಾಡಿ ಉತ್ತಮ ಯೋಗ ಶಿಕ್ಷಕಿ ಆಗುವುದೇ ಇವರ ಗುರಿಯಾಗಿದೆ.

ಫಾಸ್ಟ್‌ಫುಡ್ ಮಾಲೀಕ ನಾಪತ್ತೆ

ಮೈಸೂರು, ಡಿ. 6–ಫಾಸ್ಟ್‌ಫುಡ್ ನಡೆಸುತ್ತಿದ್ದ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಿನ್ನಸ್ವಾಮಿ(55) ಕಾಣೆಯಾದವರಾಗಿದ್ದಾರೆ. ಅವರಿಗೆ ಗೀತಾ ಮತ್ತು ಸುಧಾ ಎಂಬ ಇಬ್ಬರು ಪತ್ನಿಯರಿದ್ದು, ಮೊದಲನೇ ಪತ್ನಿ ಮೈಸೂರಿನಲ್ಲೂ, 2ನೇ ಪತ್ನಿ ಸುಧಾ ಚಾಮರಾಜನಗರದ ಛತ್ರದಹೊಸೂರಿನಲ್ಲಿ ವಾಸವಾಗಿದ್ದಾರೆ. ಇಬ್ಬರು ಪತ್ನಿಯರ ಮನೆಗೂ ಇವರು ಓಡಾಡಿಕೊಂಡಿದ್ದರು ಎನ್ನಲಾಗಿದೆ. ಸಂಗಮ್ ಟಾಕೀಸ್ ಬಳಿ ಫಾಸ್ಟ್‌ಫುಡ್ ನಡೆಸುತ್ತಿದ್ದ ಚಿನ್ನಸ್ವಾಮಿ ಡಿ.2ರಂದು ರಾತ್ರಿ 11 ಗಂಟೆಗೆ ವ್ಯಾಪಾರ ಮುಗಿಸಿ ಮನೆಗೆ ಬಂದಿದ್ದರು. ಮತ್ತೆ ರಾತ್ರಿ 12 ಗಂಟೆಯಲ್ಲಿ ಹೊರಗೆ ಹೋದವರು ಇದೂವರೆಗೂ ಮನೆಗೆ ಹಿಂತಿರುಗಿಲ್ಲ ಎಂದು ಮೊದಲನೇ ಪತ್ನಿ ಗೀತಾ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ದೊರೆತವರು ದೂ.: 0821–2418339, 2418313, 2418513, 9845586284 ಮೂಲಕ ತಿಳಿಸಲು ಮಂಡಿ ಪೊಲೀಸ್ ಠಾಣೆಯ ಪ್ರಕಟಣೆ ಕೋರಿದೆ.



ಮೈಸೂರು ಅಶೋಕರಸ್ತೆಯಲ್ಲಿರುವ ಶ್ರೀ ಬಲಿಜ ಬಾಲರಾಮ ಚಂದ್ರ ಮಂದಿರದಲ್ಲಿ ಟ್ರಸ್ಟ್ ವತಿಯಿಂದ ಭಕ್ತಿಪೂರ್ವಕವಾಗಿ ಹನುಮ ಜಯಂತಿ ಆಚರಿಸಲಾಯಿತು.

ನಾಳೆ ಶನಿ ಮಹಾಶಾಂತಿ

ಮೈಸೂರು,ಡಿ.6–ಇಲ್ಲಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಡಿ.8ರಂದು ಗುರುವಾರ ಹುಣ್ಣಿಮೆ ಪ್ರಯುಕ್ತ ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾಶಾಂತಿ ಏರ್ಪಡಿಸಲಾಗಿದೆ. ಇದಲ್ಲದೆ ಮಹಾ ಮೃತ್ಯುಂಜಯ ಹೋಮ, ಬಾಧಾ ನಿವಾರಕ ಸುದರ್ಶನ ಹೋಮ, ವಿದ್ಯಾ ಪ್ರದ ದಕ್ಷಿಣಾ ಮೂರ್ತಿ ಹೋಮ ನಡೆಯಲಿದೆ. ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ) ಅವರನ್ನು ಮೊ.ಸಂ. 9342183392, 9845183392 ಮೂಲಕ ಸಂಪರ್ಕಿಸಬಹುದು.

ಉಚಿತ ಮಧುಮೇಹ ತಪಾಸಣೆ, ಜಾಗೃತಿ ಶಿಬಿರ

ಮೈಸೂರು, ಡಿ.6–ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಯನ ಕುಮಾರ್ಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಿ.12ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉಚಿತ ಮಧುಮೇಹ ತಪಾಸಣೆ, ಜಾಗೃತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. ಸಂ. 9513310100, 9513310103 ಸಂಪರ್ಕಿಸಬಹುದು.

ನಿಧನ

ಪಳಂಗಂಡ ಎಸ್. ಕಾರ್ಯಪ್ಪ (ಕಬೀರ್)




ಮೈಸೂರು,ಡಿ.6–ಕೊಡಗು ಜಿಲ್ಲೆಯ ಕುಶಾಲನಗರದ ಗುಡ್ಡೆ ಹೊಸೂರು, #27, ಈಡನ್ ಗಾರ್ಡನ್ ನಿವಾಸಿ ಪಳಂಗಂಡ ಎಸ್.ಕಾರ್ಯಪ್ಪ (ಕಬೀರ್)ಮಂಗಳವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಸುಧಾ ಕಾರ್ಯಪ್ಪ (ಕುಪ್ಪಂಡ), ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕುಶಾಲನಗರದ ಕೊಡವ ಸಮಾಜದ ರುದ್ರಭೂಮಿಯಲ್ಲಿ ನಾಳೆ (ಡಿ.7) ಬೆಳಗ್ಗೆ 11 ಗಂಟೆ ನಂತರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಡಿ. ಮದನವಲ್ಲಿ



ಮೈಸೂರಿನ ಶಿವರಾಂಪೇಟೆ, ರಾಜಕಮಲ್ ಥಿಯೇಟರ್ ಸಮೀಪ, ವಿನೋಬಾ ರಸ್ತೆಯ ಎನ್‌ಪಿಡಿ ಕಾಂಪ್ಲೆಕ್ಸ್‌ನ 1117/8ರ ನಿವಾಸಿ ಪಾಲ್ ಬ್ರದರ್ಸ್ ಮಾಲೀಕರಾದ ಎನ್.ಡಿ.ಧನಪಾಲ್ ಅವರ ಪತ್ನಿ ಎನ್.ಡಿ.ಮದನವಲ್ಲಿ (70) ಸೋಮವಾರ ನಿಧನರಾದರು. ಮೃತರು ಪುತ್ರ ಎಂ.ಡಿ.ಪ್ರವೀಣ್‌ಪಾಲ್, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವಪ್ಪ



ಮೈಸೂರಿನ ಅಗ್ರಹಾರದಲ್ಲಿರುವ ಶ್ರೀ ಹೊಸಮಠದ ಅಧ್ಯಕ್ಷರಾದ ಶ್ರೀ ಚಿದಾನಂದ ಸ್ವಾಮೀಜಿಯವರ ಸಹೋದರ ಹಾಗೂ ಟಿ. ನರಸೀಪುರ ತಾಲೂಕಿನ ಮುಡುಕನಪುರ ಗ್ರಾಮದ ನಿವಾಸಿ ಮಹದೇವಪ್ಪ (78) ಸೋಮವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಎಸ್.ಗೌರಮ್ಮ



ಮೈಸೂರಿನ ಶಾರದಾದೇವಿನಗರದ ನಿವಾಸಿ ಹಾಗೂ ಕೃಷಿ ಇಲಾಖೆ ನಿವೃತ್ತ ನೌಕರರಾದ ಬಿ.ಎಸ್.ಗೌರಮ್ಮ(70) ಮಂಗಳವಾರ ನಿಧನರಾದರು. ಮೃತರು ಪುತ್ರರಾದ ಬಿಜೆಪಿ ಮುಖಂಡರಾದ ರಾಕೇಶ್ ಭಟ್ ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಚಾಮುಂಡಿಬೆಟ್ಟ ಪಾದದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.12.2022 ಬುಧವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ್ ಮಾತು, ಪ್ರಸ್ತುತಿ–ಯೋಗಶಿಕ್ಷಕ ಶ್ರೀಹರಿ, 6.40 ಅರಿವಿನ ಶಿಖರ, ಗಾಯನ–ಮತ್ತೂರು ಕುಮಾರಸ್ವಾಮಿ, ಜಯಂತಿ ಆರ್. ಭಟ್, ವ್ಯಾಖ್ಯಾನ–ಮೈಸೂರು ಕೃಷ್ಣಮೂರ್ತಿ, 8.30 ವೃತ್ತಿ ಮಾರ್ಗದರ್ಶನ, 10.00 ದೇವು ಚೌಧುರಿ–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ 'ಭಾಷೆ ಬೇರೆ, ಭಾವ ಒಂದೇ' ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಎಂ.ಎಸ್. ಲಕ್ಷ್ಮೀಶ, ಎ.ಎಸ್.ನಾಗಲಕ್ಷ್ಮಿ, ಡಾ. ಶಿಲ್ಪಾ ಹೆಗ್ಡೆ, 3.00 ಶಾಸ್ತ್ರೀಯ ಹಾಗೂ ಸಿನೆಮಾ ಸಂಗೀತದಲ್ಲಿ ಮೃದಂಗದ ಪಾತ್ರ ಭಾಗವಹಿಸುವವರು ಖ್ಯಾತ ಹಿನ್ನಲೆ ಗಾಯಕರಾದ ವಿಜಯ್ ಪ್ರಕಾಶ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಶಶಿರೇಖಾ ರಾಜು, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ, ತೋಟಗಾರಿಕೆ ಬೆಳೆಗಳ ನಿರ್ವಹಣೆಯಲ್ಲಿನ ಅನುಭವ ಕುರಿತು ಕೆ.ಎಂ. ರಾಜು ಅವರೊಡನೆ ಸಂದರ್ಶನ, 9.30 ಗಣಪತಿ ಭಟ್–ಗಾಯನ, 10.00 ಜನಪದಗೀತೆ–ಮಹದೇವಯ್ಯ ಮತ್ತು ತಂಡ, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ:** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ಶ್ರೀ ರಾಮತಾರಕ ಹೋಮ, ಶ್ರೀ ಸೀತಾಮಂತ್ರ ಹೋಮ, ನಿತ್ಯಾರಾಧನೆ, ವಿಶೇಷ ಅಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ಬೃಹತ್ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ತಪಾಸಣೆ, ಉದ್ಘಾಟನೆ : ಜಿಲ್ಲಾ ಗವರ್ನರ್ ರೋ. ಹೆಚ್.ಆರ್. ಕೇಶವ್, ಅಧ್ಯಕ್ಷತೆ : ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ. ಎನ್. ರಾಗಿಣಿ, ಮುಖ್ಯ ಅತಿಥಿಗಳು : ತಾಯಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ರೋ. ಡಾ. ಜಯಂತ್, ರೋ. ಎಸ್. ವಾಸುದೇವನ್, ರೋ. ಆರ್. ರವೀಂದ್ರ, ಉಪಸ್ಥಿತರು : ಪ್ರಾಂಶುಪಾಲ ಡಾ. ಮಹದೇವಸ್ವಾಮಿ, ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್‌ಗೌಡ, ಯುವ ರೆಡ್‌ಕ್ರಾಸ್ ಸಂಚಾಲಕ ಪ್ರೊ. ಎಂ.ಎಲ್. ಮಂಜುಳ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಎಸ್.ಜಿ. ರಾಮದಾಸ ರೆಡ್ಡಿ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಬೆಳಗ್ಗೆ 9 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಹನುಮ ಜಯಂತಿ ಹಾಗೂ ದತ್ತ ಜಯಂತಿ ಪ್ರಯುಕ್ತ ಬೆಳಗ್ಗೆ 9ಕ್ಕೆ ದತ್ತಾತ್ರೇಯ ಹೋಮ, ಶ್ರೀಚಕ್ರ ಹೋಮ ಪೂಜಾ, 10ಕ್ಕೆ ದತ್ತಾತ್ರೇಯ ಸ್ವಾಮಿಗೆ ಕ್ಷೀರಾಭಿಷೇಕ, 11ಕ್ಕೆ ಅನಘ ವ್ರತ. ಸಂಜೆ 4ಕ್ಕೆ ದತ್ತಾತ್ರೇಯ ಸ್ವಾಮಿ ರಥೋತ್ಸವ, ಸಂಜೆ 7ಕ್ಕೆ ನಾದಮಂಟಪದಲ್ಲಿ ದತ್ತಾತ್ರೇಯ ಭಜನೆ ಶ್ರೀ ಸ್ವಾಮೀಜಿಯವರಿಂದ. ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಯೂನಿಸೆಫ್, ಹೈದರಾಬಾದ್:** ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆ ಕುರಿತು ಕಾರ್ಯಾಗಾರ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಮುಖ್ಯ ಅತಿಥಿಗಳು: ಪ್ರೊಸನ್ ಸೇನ್, ಉಪಸ್ಥಿತರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ಡಾ.ಶ್ವೇತಾ ಆದರ್ಶ್, ಪ್ರಾಧ್ಯಾಪಕಿ ಪ್ರೊ. ಎಂ.ಎಸ್.ಸಪ್ನ, ಯೂನಿಸೆಫ್‌ನ ಡಾ.ಸಿ.ರಾಕೇಶ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ಹನುಮ ಜಯಂತಿ, ಬೆಳಗ್ಗೆ 10ಕ್ಕೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಹನುಮಂತನಗರ, ಬನ್ನಿಮಂಟಪ ಬಡಾವಣೆ.

■ **ಅಂತರ್ಗತ ಬೆಳವಣಿಗೆ ಮತ್ತು ಅಭಿವೃದ್ಧಿ ಸಂಶೋಧನಾ ಕೇಂದ್ರ:** ಮೈಸೂರು ವಿವಿ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ.ಡಿ.ಸಿ. ನಂಜುಂಡ ಅವರ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ, ಉಪಸ್ಥಿತರು: ಮೈಸೂರು ವಿವಿ ಸಮಾಜ ವಿಜ್ಞಾನದ ಡೀನ್ ಪ್ರೊ. ಮುಜಾಫರ್ ಅಸ್ಸಾದಿ, ತುಮಕೂರು ವಿವಿ ವಿಶ್ರಾಂತ ಉಪಕುಲಪತಿ ಪ್ರೊ. ಸಿದ್ದೇಗೌಡ, ಪತ್ರಕರ್ತ ವೀರಭದ್ರಪ್ಪ ಬಿಸ್ಲಳ್ಳಿ, ಪ್ರಾಧ್ಯಾಪಕ ಪ್ರೊ. ಜಿ.ಪ್ರೇಮ್‌ಕುಮಾರ್, ಕರ್ನಾಟಕ ಮುಕ್ತ ವಿವಿ ಅರ್ಥಶಾಸ್ತ್ರ ವಿಭಾಗದ ಡಾ. ಶಿವಕುಮಾರಸ್ವಾಮಿ, ಲೇಖಕ ಡಾ. ಡಿ.ಸಿ. ನಂಜುಂಡ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಮಹಿಳಾ ಕಾಲೇಜು:** 14ನೇ ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಧಾನ ಭಾಷಣ : 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ದೊಡ್ಡರಂಗೇಗೌಡ, ಅಧ್ಯಕ್ಷತೆ : ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮಹೇಶ್ ಜೋಷಿ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಡಿಎಫ್‌ಆರ್‌ಎಲ್–ಡಿಆರ್‌ಡಿಒ:** ವಿವಿಧ ಭೂ ಪ್ರದೇಶಗಳಲ್ಲಿ ರಕ್ಷಣಾ ಪಡೆಗಳ ಸುಸ್ಥಿರತೆಗಾಗಿ ಭವಿಷ್ಯದ ತಂತ್ರಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಮುಖ್ಯ ಅತಿಥಿಗಳು : ನವದೆಹಲಿ ಡಿಆರ್‌ಡಿಒ ಡೈರೆಕ್ಟರ್ ಜನರಲ್ ಡಾ. ಉಪೇಂದ್ರ ಕುಮಾರ್ ಸಿಂಗ್, ಗೌರವ ಅತಿಥಿಗಳು : ನವದೆಹಲಿ ಪಿಡಿಸಿವಿ, ಎನ್‌ಹೆಚ್‌ಕ್ಯೂ ನಿರ್ದೇಶಕ ಮನೋಜ್ ಶರ್ಮ, ಹೆಚ್‌ಎಸ್‌ಎಫ್‌ಸಿ, ಇಸ್ರೋ ನಿರ್ದೇಶಕ ಡಾ. ಆರ್. ಉಮಾಮಹೇಶ್ವರನ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ಸಂಜೆ 4ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಕಲಾಕೂಟ :** 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಡಾ. ದೊಡ್ಡರಂಗೇಗೌಡ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಷಿ, ಅಭಿನಂದಿತರು : ನಿಯೋಜಿತ ಸಮ್ಮೇಳನಾಧ್ಯಕ್ಷ ಡಾ. ದೊಡ್ಡರಂಗೇಗೌಡ, ಅಭಿನಂದನಾ ನುಡಿ : ಅಂಕಣಕಾರ ಡಾ. ಗುಬ್ಬಿಗೂಡು ರಮೇಶ್, ಮುಖ್ಯ ಅತಿಥಿಗಳು: ಕವಿಯತ್ರಿ ಡಾ. ಲತಾ ರಾಜಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 4.30ಕ್ಕೆ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಶ್ರೀ ವಿದ್ಯಾ ವಿಷ್ಣುಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಬೆ.ನಾ. ವಿಜಯೇಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ ಪ್ರವಚನ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.

■ **ಶ್ರೀ ಸದ್ಗುರು ಸೇವಾ ಮಂಡಲ :** 5ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹ, ಬೆಳಗ್ಗೆ 7 ಗಂಟೆಗೆ ಶ್ರೀಯವರಿಗೆ ರುದ್ರಾಭಿಷೇಕ, ಸರ್ವಾಲಂಕಾರ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 4ಕ್ಕೆ ಶ್ರೀಚಕ್ರಪೂಜೆ, ಲಕ್ಷಾರ್ಚನೆ, ಶ್ರೀ ದತ್ತ ಭಜನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ದತ್ತಾತ್ರೇಯ ತೊಟ್ಟಿಲು ಪೂಜೆ, ಸ್ಥಳ: ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪಕ್ಕ, ಹೊಸ ಸಯ್ಯಾಜಿರಾವ್ ರಸ್ತೆ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–249, ಸಾನ್ನಿಧ್ಯ : ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಜಿ.ಕೆ. ಮನಮೋಹನ್ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ –ವಯೋಲಿನ್, ವಿದ್ವಾನ್ ಎ. ರಾಧೇಶ್–ಮೃದಂಗ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟ ತಪ್ಪಲು, ಸಂಜೆ 6ಕ್ಕೆ.


■ **ಸ್ವರ್ಣ ನೃಸಿಂಹ ದತ್ತಸಾಹಿ ಪೀಠಿಕ ಸೇವಾ ಟ್ರಸ್ಟ್:** ಶ್ರೀ ಅರ್ಜುನ ಅವಧೂತ ಮಹಾರಾಜರ ಉಪಸ್ಥಿತಿಯಲ್ಲಿ ದತ್ತ ವೈಭವ ದತ್ತ ಜಯಂತಿ ಕಾರ್ಯಕ್ರಮ, ಸಾನ್ನಿಧ್ಯ : ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ ಪೀಠಾಧ್ಯಕ್ಷ ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮೀಜಿ, ಶ್ರೀ ನಂಜಾವಧೂತ ಸ್ವಾಮೀಜಿ, ಸಂಜೆ 6ಕ್ಕೆ ವಿದುಷಿ ಕು. ನಾಗಶ್ರೀಯವರಿಂದ ಭಕ್ತಿಗೀತೆ, ಸಂಜೆ 7ಕ್ಕೆ ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ತಂಡದವರಿಂದ ದತ್ತ ಲಯ ಲಹರಿ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ.

■ **ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ:** ಸೊಸೈಟಿ ಅಧ್ಯಕ್ಷ ಸಿ.ವಿ. ಪಾರ್ಥಸಾರಥಿ ಅವರಿಗೆ ಅಭಿನಂದನಾ ಸಮಾರಂಭ, ಸ್ಥಳ: ಶ್ರೀರಾಮ ಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.

■ **ದಸರಾ ವಸ್ತುಪ್ರದರ್ಶನ :** ಸಂಜೆ 6.30ಕ್ಕೆ ರಾಮಕೃಷ್ಣನಗರದ ಪನ್ನಗ ವಿಜಯಕುಮಾರ್ ಅವರಿಂದ ಜಾನಪದ ಗೀತೆ, 7 ರಿಂದ ರಮಾಬಾಯಿನಗರದ ಎಚ್.ಎಂ. ರವಿ ಅವರಿಂದ ಆರ್ಕೆಸ್ಟ್ರಾ, 8 ರಿಂದ ಮೈಸೂರಿನ ಗೀತಾ ರಸ್ತೆಯ ದೇವಿಕಾ ಅವರಿಂದ ಭರತನಾಟ್ಯ, ಸ್ಥಳ: ಪಿ. ಕಾಳಿಂಗರಾವ್ ಕಲಾ ಮಂಟಪ.

ಹುಣಸೂರಲ್ಲಿ ಇಂದು ಹನುಮ ಜಯಂತಿ
ಶಾಂತಿ ಕಾಯ್ದುಕೊಂಡು ಪೋಲೀಸರಿಗೆ ಸಹಕರಿಸುವಂತೆ ಜಿಲ್ಲಾಧಿಕಾರಿ ಮನವಿ

ಮೈಸೂರು,ಡಿ.6(ಎಂಟಿವೈ)– ಹುಣಸೂರಲ್ಲಿ ಹನುಮ ಜಯಂತಿ ಆಚರಣೆ ವೇಳೆ



ಶಾಂತಿ ಕದಡದೇ, ಪೊಲೀಸರೊಂದಿಗೆ ಸಹಕರಿಸುವಂತೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮನವಿ ಮಾಡಿದ್ದಾರೆ. ಮೈಸೂರಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೊರೊನಾ ಹಿನ್ನೆಲೆಯಲ್ಲಿ ಹುಣಸೂರಲ್ಲಿ ಸ್ಥಗಿತಗೊಂಡಿದ್ದ ಹನುಮ ಜಯಂತಿ ಕಾರ್ಯಕ್ರಮ ಈ ಬಾರಿ ಅದ್ದೂರಿಯಾಗಿ ಆಚರಿಸಲ್ಪಡುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಹೊರಗಿನಿಂದ ಬಂದು ಶಾಂತಿ ಕದಡುವ ಸಂಭವ ಇರುವುದರಿಂದ ಕಿಡಿಗೇಡಿಗಳ ಕೃತ್ಯ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಗುಪ್ತಚರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸೂಕ್ತ ಭದ್ರತೆ ಒದಗಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸರು ಹನುಮ ಜಯಂತಿ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದಾರೆ. ಯಾವುದೇ ಆಚರಣೆಗೆ ಅವಕಾಶವಿದೆ. ನಾವು ನಮ್ಮ ಆಚರಣೆಯನ್ನು ಮಾಡುವಂತೆ ಬೇರೆಯವರ ಆಚರಣೆಯನ್ನೂ ಗೌರವಿಸಬೇಕು. ಹಾಗಾಗಿ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಶಾಂತಿ ಕಾಪಾಡಲು ಎಲ್ಲರೂ ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಚಿರತೆ ಸೆರೆಗೆ ಕ್ರಮ: ತಿ.ನರಸೀಪುರದಲ್ಲಿ ಉಪಟಳ ನೀಡುತ್ತಿರುವ ಚಿರತೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಇಲಾಖೆ ನಾನಾ ವಿಧಾನವನ್ನು ಅನುಸರಿಸುತ್ತಾ ಚಿರತೆ ಸೆರೆ ಕಾರ್ಯಾಚರಣೆ ನಡೆಸುತ್ತಿದೆ. ಜನರಿಗೆ ತೊಂದರೆಯಾಗದಂತೆ ಹಗಲು ರಾತ್ರಿ ಕಾರ್ಯಾಚರಣೆ ನಡೆಸಲಾಗುತ್ತದೆ. ಆದರೆ, ಕಾರ್ಯಾಚರಣೆಗೆ ಕಬ್ಬಿನ ಗದ್ದೆ ಅಡಚಣೆಯಾಗುತ್ತಿರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಜಿಲ್ಲಾಡಳಿತದ ಗಮನಕ್ಕೆ ತಂದಿತ್ತು. ಈ ಹಿನ್ನೆಲೆಯಲ್ಲಿ ಬಣ್ಣಾರಿ ಅಮ್ಮನ್ ಕಾರ್ಖಾನೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಲಾಗಿದ್ದು, ಕಟಾವಿಗೆ ಬಂದಿರುವ ಕಬ್ಬು ಕಟಾವಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಕಬ್ಬು ಕಟಾವು ಆಗದಿದ್ದರೆ, ಕಬ್ಬಿನ ಗದ್ದೆಯಲ್ಲಿ ಚಿರತೆ ಅಡಗಿ ಕುಳಿತರೂ ಸೆರೆ ಕಾರ್ಯಾಚರಣೆ ಸಾಧ್ಯವಾಗುವುದಿಲ್ಲ ಎಂದರು.

ಡಿ.11ರಂದು ಮಂಡ್ಯದಲ್ಲಿ ರಾಜ್ಯಮಟ್ಟದ ಮ್ಯಾರಥಾನ್



ಮೈಸೂರು,ಡಿ.6(ಪಿಎಂ)– ಕಾಯಕಯೋಗಿ ಫೌಂಡೇಷನ್ ಮತ್ತು ಅಖಂಡ ಕರ್ನಾಟಕ ರಕ್ಷಣಾ ಸೇವಾದಳದ ಜಂಟಿ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ 'ಕನ್ನಡಕ್ಕಾಗಿ ಓಡು–ಕನ್ನಡಕ್ಕಾಗಿ ಬಾಳು' ಘೋಷವಾಕ್ಯದಡಿ ಡಿ.11ರಂದು ಮಂಡ್ಯದಲ್ಲಿ ರಾಜ್ಯಮಟ್ಟದ 'ಮಂಡ್ಯ ಮ್ಯಾರಥಾನ್' 5 ಕಿ.ಮೀ. ಸ್ಪರ್ಧೆ ಆಯೋಜಿಸಲಾಗಿದೆ ಎಂದು ಫೌಂಡೇಷನ್‌ನ ಅಧ್ಯಕ್ಷ ಎಂ.ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6ಕ್ಕೆ ಮಂಡ್ಯ ಪ್ರವಾಸಿ ಮಂದಿರದ ಪಕ್ಕದ ಶ್ರೀ ಕೆ.ವಿ.ಶಂಕರೇಗೌಡ ರಸ್ತೆಯಿಂದ ತಹಸೀಲ್ದಾರ್ ಕಚೇರಿ, ಜಿಲ್ಲಾ ಕಾರಾಗೃಹ, ಕ್ಯಾತಂಗೆರೆ ಬಡಾವಣೆ ಮಾರ್ಗವಾಗಿ ಬೇವನಹಳ್ಳಿ ಗ್ರಾಮದ ಪ್ರವೇಶ ದ್ವಾರದವರೆಗೆ ಮ್ಯಾರಥಾನ್ ನಡೆಯಲಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಈವರೆಗೆ 500 ಮಂದಿ ನೋಂದಣಿ ಮಾಡಿಕೊಂಡಿದ್ದು, ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಪುರುಷರ ವಿಭಾಗ, ಮಹಿಳೆಯರ ವಿಭಾಗ (18ರಿಂದ 49ವರ್ಷ) ಮತ್ತು ಹಿರಿಯರ ವಿಭಾಗದಲ್ಲಿ (50ರಿಂದ 80 ವರ್ಷ) ಸ್ಪರ್ಧೆಗಳು ನಡೆಯಲಿವೆ ಎಂದರು.

ಎಲ್ಲಾ ವಿಭಾಗಕ್ಕೂ 5 ಕಿ.ಮೀ. ನಿಗದಿ ಮಾಡಿದ್ದು, ಪುರುಷರು ಮತ್ತು ಮಹಿಳೆಯರ ವಿಭಾಗದಲ್ಲಿ 10 ಸಾವಿರ ರೂ., 7,500 ರೂ. ಮತ್ತು 5 ಸಾವಿರ ರೂ. ನಗದು ಬಹುಮಾನಗಳನ್ನು ಕ್ರಮವಾಗಿ ನೀಡಲಾಗುವುದು. ಹಿರಿಯರ ವಿಭಾಗಕ್ಕೂ ಆಕರ್ಷಕ ಬಹುಮಾನ ನೀಡಲಾಗುವುದು. ಆಸಕ್ತರು ನೋಂದಣಿಗಾಗಿ ಮೊ.ಸಂ. 97400 11624 ಅಥವಾ 99806 05484 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಕೆಆರ್ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್, ಅಖಂಡ ಕರ್ನಾಟಕ ರಕ್ಷಣಾ ಸೇವಾದಳದ ಅಧ್ಯಕ್ಷ ಅನಿಲ್‌ಕುಮಾರ್, ಮುಖಂಡ ಬಾಲಚಂದ್ರ ಗೋಷ್ಠಿಯಲ್ಲಿದ್ದರು.

ಮೆಜೆಸ್ಟಿಕ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಅಗ್ನಿ ಅವಘಡ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಅಗ್ನಿ ಅವಘಡ ಸಂಭವಿಸಿದೆ. ಇಂದು ಸಂಜೆ ಟರ್ಮಿನಲ್1 ರ ಪವರ್ ರೂಂನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ. ಬೆಂಕಿ ಕಂಡ ತಕ್ಷಣ ಸ್ಥಳದಲ್ಲಿದ್ದ ಪ್ರಯಾಣಿಕರು, ಅಂಗಡಿ ವ್ಯಾಪಾರಸ್ಥರನ್ನು ಸಿಬ್ಬಂದಿ ಬೇರೆಡೆಗೆ ಕಳುಹಿಸಿ ಸಮಯ ಪ್ರಜ್ಞೆ ತೋರಿಸಿದ್ದಾರೆ. ಸಾರಿಗೆ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

ವಿಧಾನಸಭೆ – 2023

ಚುನಾವಣಾ ಜಿದ್ದಾಜಿದ್ದಿ

ಕುಂಭಮೇಳ ಕ್ಷೇತ್ರದಲ್ಲಿ ಜೋರಾಗಿದೆ ರಾಜಕೀಯ ರಂಗು
ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪ್ರಾಬಲ್ಯ ಸಾಧಿಸಲು ಕಸರತ್ತು





ಇಲ್ಲಿವರೆಗಿನ ಶಾಸಕರ ಪರಂಪರೆ

1952	ಎಸ್.ಶ್ರೀನಿವಾಸ ಅಯ್ಯಂಗಾರ್ –ಕೆಎಂಪಿಪಿ
1957	ಎಂ.ರಾಜಶೇಖರ ಮೂರ್ತಿ –ಕಾಂಗ್ರೆಸ್
1962	ಎಂ.ರಾಜಶೇಖರಮೂರ್ತಿ –ಕಾಂಗ್ರೆಸ್
1967	ಎಂ.ರಾಜಶೇಖರಮೂರ್ತಿ –ಕಾಂಗ್ರೆಸ್
1972	ಎಂ.ರಾಜಶೇಖರಮೂರ್ತಿ –ಕಾಂಗ್ರೆಸ್
1978	ಪಿ.ವೆಂಕಟರಮಣ –ಕಾಂಗ್ರೆಸ್
1983	ವಿ.ವಾಸುದೇವ –ಜನತಾ ಪಕ್ಷ
1985	ಡಾ.ಹೆಚ್.ಸಿ. ಮಹದೇವಪ್ಪ –ಜನತಾ ಪಕ್ಷ
1989	ಹೆಜ್ಜಿಗೆ ಶ್ರೀನಿವಾಸಯ್ಯ –ಕಾಂಗ್ರೆಸ್
1994	ಡಾ.ಹೆಚ್.ಸಿ.ಮಹದೇವಪ್ಪ –ಜನತಾದಳ
1999	ಡಾ.ಎನ್.ಎಲ್.ಭಾರತಿ ಶಂಕರ್ – ಬಿಜೆಪಿ
2004	ಡಾ.ಹೆಚ್.ಸಿ.ಮಹದೇವಪ್ಪ –ಜೆಡಿಎಸ್
2008	ಡಾ.ಹೆಚ್.ಸಿ.ಮಹದೇವಪ್ಪ –ಕಾಂಗ್ರೆಸ್
2013	ಡಾ.ಹೆಚ್.ಸಿ.ಮಹದೇವಪ್ಪ– ಕಾಂಗ್ರೆಸ್
2018	ಎಂ.ಅಶ್ವಿನ್ ಕುಮಾರ್– ಜೆಡಿಎಸ್

■ ಎಸ್.ಕುಮಾರ್

ದಕ್ಷಿಣ ಭಾರತದ ಪ್ರಸಿದ್ಧ ಕುಂಭಮೇಳ ಕ್ಷೇತ್ರವೆನಿಸಿರುವ ದಕ್ಷಿಣ ಕಾಶಿಯ ಪ್ರಯಾಗ, ತ್ರಿವೇಣಿ ಸಂಗಮ ಎಂದೆಲ್ಲಾ ಹೆಸರು ಪಡೆದಿರುವ ತಿರುಮಕೂಡಲು ನರಸೀಪುರ ದೇಗುಲಗಳ ಬೀಡೆಂಬ ಖ್ಯಾತಿಯನ್ನು ಗಳಿಸಿದೆ. ಕ್ಷೇತ್ರದಲ್ಲಿ ಈಗ ವಿಧಾನಸಭಾ ಸಾರ್ವತ್ರಿಕ ಚುನಾವಣೆ ರಂಗೇರುತ್ತಿದ್ದು, ಚುನಾವಣೆ ಘೋಷಣೆಯಾಗುವ ಮುನ್ನವೇ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಆಕಾಂಕ್ಷಿಗಳು ಪೈಪೋಟಿ ನಡೆಸುತ್ತಿದ್ದಾರೆ. ಶತಾಯಗತಾಯ ನಾವೇ ಗೆಲ್ಲಬೇಕು ಎಂಬ ಕಸರತ್ತು ಆರಂಭವಾಗಿದೆ. ಕಾಂಗ್ರೆಸ್ ಕ್ಷೇತ್ರ ಪುನಃ ತೆಕ್ಕೆಗೆ ಪಡೆಯಲು ಲೆಕ್ಕಾಚಾರದಲ್ಲಿ ತೊಡಗಿದ್ದರೆ, ಹಾಲಿ ಜೆಡಿಎಸ್ ಶಾಸಕರು ಕೂಡ ಮತ್ತೊಮ್ಮೆ ಆಯ್ಕೆಯಾಗಲು ಮತದಾರರ ಮೊರೆ ಹೋಗುತ್ತಿದ್ದಾರೆ. ರಾಜ್ಯದಲ್ಲಿ ಆಡಳಿತರೂಢ ಬಿಜೆಪಿಯಲ್ಲಿ ಅಭ್ಯರ್ಥಿಯ ಆಯ್ಕೆಯ ಕಸರತ್ತು ಬಿರುಸುಗೊಂಡಿದೆ.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ನಾಲ್ಕು ಬಾರಿ ಹಿರಿಯ ಧುರೀಣ ಎಂ. ರಾಜಶೇಖರಮೂರ್ತಿರವರು ಗೆಲುವು ಸಾಧಿಸಿದರು. ನಂತರ 1978 ರಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾದ ಈ ಕ್ಷೇತ್ರವನ್ನು ವಿವಿಧ ಪಕ್ಷಗಳ ಪರಿಶಿಷ್ಟ ಜಾತಿ ಸಮುದಾಯದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾ ಬಂದಿದ್ದಾರೆ.

1952ರಲ್ಲಿ ನಂಜನಗೂಡು ತಾಲೂಕಿನ ಬಿಳಿಗೆರೆ ಹಾಗೂ ಛತ್ರ ಹೋಬಳಿ, ತಿ.ನರಸೀಪುರ ತಾಲೂಕಿನ ಕಸಬಾ ಹಾಗೂ ಮೂಗೂರು ಹೋಬಳಿ ಮತ್ತು ಪಟ್ಟಣ ಸೇರಿದಂತೆ ತಿ. ನರಸೀಪುರ ಮೀಸಲು ವಿಧಾನ ಸಭಾ ಕ್ಷೇತ್ರವಾಗಿ ಪರಿವರ್ತನೆಗೊಂಡಿತು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ 2004 ರಲ್ಲಿ ಬನ್ನೂರು ವಿಧಾನಸಭಾ ಕ್ಷೇತ್ರವನ್ನು ವಿಲೀನಗೊಳಿಸಿ ಬಿಳಿಗೆರೆ, ಕಸಬಾ ಹಾಗೂ ಛತ್ರ ಹೋಬಳಿಯನ್ನು ನೂತನ ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಿ, ತಿ.ನರಸೀಪುರ ವಿಧಾನಸಭಾ ಕ್ಷೇತ್ರಕ್ಕೆ ಬನ್ನೂರು, ತಲಕಾಡು, ಸೋಸಲೆ, ಮೂಗೂರು ಹೋಬಳಿ ಹಾಗೂ ಪಟ್ಟಣವನ್ನು ಸೇರಿಸಿ ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರವನ್ನು ಪುನರ್ ರೂಪಿಸಲಾಯಿತು. ಇಲ್ಲಿನ ಮತದಾರರು ಹೆಚ್ಚು ಬಾರಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಒಟ್ಟಾರೆ ಬಿಜೆಪಿ, ಜನತಾ ಪಕ್ಷ, ಜನತಾದಳ, ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಹಸಿ ಬತ್ತ–ಬಿಸಿ ಬೆಲ್ಲದ ಕ್ಷೇತ್ರದಲ್ಲಿ ಒಕ್ಕಲಿಗರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಕುರುಬರು, ವೀರಶೈವರು ಸೇರಿದಂತೆ ಇತರೆ ಹಿಂದುಳಿದ ಎಲ್ಲಾ ವರ್ಗದ ಮತದಾರರು ಇದ್ದಾರೆ. ಹೊಸ ಕ್ಷೇತ್ರ ರಚನೆಯಾಗುವ ಮುನ್ನ 11 ವಿಧಾನಸಭಾ ಚುನಾವಣೆಗಳು ನಡೆದಿದ್ದು, ಕೆಎಂಪಿಪಿ, ಕಾಂಗ್ರೆಸ್, ಜನತಾ ಪಕ್ಷ ಜೆಡಿಎಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಜಯಗಳಿಸಿದ್ದಾರೆ. ಹಾಲಿ ಶಾಸಕರಾಗಿರುವ ಜೆಡಿಎಸ್‌ನ ಎಂ.ಅಶ್ವಿನ್‌ಕುಮಾರ್ ಮತ್ತೆ ಕಣಕ್ಕಿಳಿಯುವುದು ಖಾತರಿ. 8 ಬಾರಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಕ್ಷೇತ್ರದ ಮತದಾರರು ಆಯ್ಕೆ ಮಾಡಿದ್ದಾರೆ. ಮೂರು ಬಾರಿ ಜನತಾ ಪಕ್ಷದ ಅಭ್ಯರ್ಥಿಗಳನ್ನು, ಒಂದು ಬಾರಿ ಬಿಜೆಪಿ ಅಭ್ಯರ್ಥಿಯನ್ನು ಹಾಗೂ ಎರಡು ಬಾರಿ ಜೆಡಿಎಸ್ ಅಭ್ಯರ್ಥಿಗಳನ್ನು ಆರಿಸಿ ಕಳುಹಿಸಿದ್ದಾರೆ. ಡಾ.ಹೆಚ್.ಸಿ.ಮಹದೇವಪ್ಪ ಐದು ಬಾರಿ ಆಯ್ಕೆಗೊಂಡರೆ, ಎಂ.ರಾಜಶೇಖರ ಮೂರ್ತಿರವರು ಸತತವಾಗಿ ನಾಲ್ಕು ಬಾರಿ ಆಯ್ಕೆಗೊಂಡಿದ್ದರು. ಉಳಿದಂತೆ ಎಸ್.ಶ್ರೀನಿವಾಸ ಅಯ್ಯಂಗಾರ್, ಪಿ. ವೆಂಕಟರಮಣ, ವಿ. ವಾಸುದೇವ, ಹೆಜ್ಜಿಗೆ ಎಂ.ಶ್ರೀನಿವಾಸಯ್ಯ, ಡಾ.ಎನ್.ಎಲ್. ಭಾರತಿ ಶಂಕರ್ ಒಮ್ಮೆ ಶಾಸಕರಾಗಿ ಆಯ್ಕೆಗೊಂಡಿದ್ದಾರೆ. ತಿ.ನರಸೀಪುರ ಪ್ರಸಿದ್ಧ ಪ್ರವಾಸೋದ್ಯಮ ಕ್ಷೇತ್ರವೂ ಆಗಿದೆ. ಇತ್ತೀಚೆಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಮಹಿಳಾ ಪದವಿ ಕಾಲೇಜು, ನೂತನ ಕಪಿಲಾ ಹಾಗೂ ಕಾವೇರಿ ಸೇತುವೆಗಳ ನಿರ್ಮಾಣ, ಸಾರ್ವಜನಿಕ ಆಸ್ಪತ್ರೆ, ಮಿನಿ ವಿಧಾನಸೌಧ, ಕೆಎಸ್‌ಐಸಿ, ವಿದ್ಯೋದಯ ಶಿಕ್ಷಣ ಸಂಸ್ಥೆಗಳು ಈ ಕ್ಷೇತ್ರದ ಪ್ರಮುಖ ಹೆಗ್ಗುರುತು. ಪಟ್ಟಣದ ಪ್ರಮುಖ ರಸ್ತೆಗಳು, ಒಳಚರಂಡಿ, ಖಾಸಗಿ ಬಸ್ ನಿಲ್ದಾಣ, ಮಹಾರಾಜರ ಕಾಲದಲ್ಲಿ ನಿರ್ಮಾಣವಾದ ಕಾವೇರಿ–ಕಪಿಲ ನದಿಗಳ ಹಳೆಯ ಸೇತುವೆಗಳು ಮುಂತಾದವುಗಳ ನವೀಕರಣ ಕಾರ್ಯ ನಡೆಯಬೇಕಾಗಿದೆ.


ಮಹದೇವಪ್ಪ


ಅಶ್ವಿನ್‌ಕುಮಾರ್


ಭಾರತೀಶಂಕರ್


ರೇವಣ್ಣ


ಮರಯ್ಯ


ಅರವಿಂದ್


ಸುನೀಲ್‌ಬೋಸ್


ದಾಸಯ್ಯ


ಪ್ರಫುಲ್ಲ


ನೂತನ್


ಅರ್ಜುನ್‌ರಮೇಶ್


ಸಾಮ್ರಾಟ್


ಪ್ರತಿಮಾ

ಮುಂಬರುವ 2023ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ವಿವಿಧ ಪಕ್ಷಗಳ ಸ್ಪರ್ಧಾಳುಗಳ ಪೈಪೋಟಿ ತಿ. ನರಸೀಪುರ ಮೀಸಲು ಕ್ಷೇತ್ರದಲ್ಲೂ ಜೋರಾಗಿದೆ. ಜಾತ್ಯತೀತ ಜನತಾದಳದಲ್ಲಿ ಹಾಲಿ ಶಾಸಕ ಎಂ.ಅಶ್ವಿನ್‌ಕುಮಾರ್ ಅವರಿಗೆ ಹಾಲಿ ಶಾಸಕರಿಗೆ ಟಿಕೆಟ್ ನೀಡುವ ಪಕ್ಷದ ಮಾನದಂಡದಂತೆ ಟಿಕೆಟ್ ಖಾತರಿ ಸಿಕ್ಕಿದೆ. ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಬೇಡಿಕೆ ಹೆಚ್ಚಾಗಿದ್ದು, ಬಿಜೆಪಿಯಲ್ಲಿ ಆಕಾಂಕ್ಷಿಗಳ ಸಂಖ್ಯೆ ಸ್ವಲ್ಪ ಹೆಚ್ಚಿದೆ. ಮಾಜಿ ಶಾಸಕ ಡಾ.ಎನ್.ಎಲ್. ಭಾರತಿಶಂಕರ್, ಗ್ರಾಮಾಂತರ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ವಕೀಲ ಎಂ.ದಾಸಯ್ಯ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಶಸ್ತ್ರಚಿಕಿತ್ಸಕ ಡಾ.ಎಂ.ರೇವಣ್ಣ, ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಕಳೆದ ಬಾರಿ ಸ್ಪರ್ಧಿಸಿದ್ದ ಎಸ್.ಶಂಕರ್, ಪುರಸಭಾ ಸದಸ್ಯ ಅರ್ಜುನ್ ರಮೇಶ್, ಮುಖಂಡರಾದ ಎಸ್.ಅರವಿಂದ್, ಸಾಮ್ರಾಟ್ ಸುಂದರೇಶನ್, ಲೋಕಸಭಾ ಸದಸ್ಯ ವಿ. ಶ್ರೀನಿವಾಸ್ ಪ್ರಸಾದ್ ಅವರ ಪುತ್ರಿ ಪ್ರತಿಮಾ ಹಾಗೂ ಮತ್ತೋರ್ವ ಮುಖಂಡ ಕರೋಹಟ್ಟಿ ಮಹದೇವಯ್ಯ ಬಿಜೆಪಿ ಟಿಕೆಟ್‌ಗಾಗಿ ತಮ್ಮದೇ ಆಪ್ತ ಬಳಗದ ಮೂಲಕ ಕಸರತ್ತು ನಡೆಸುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ಇದುವರೆಗೂ ಸ್ಪರ್ಧಿಸುತ್ತಿದ್ದ ಡಾ.ಹೆಚ್.ಸಿ.ಮಹದೇವಪ್ಪ ಕ್ಷೇತ್ರ ಬದಲಾವಣೆ ಚಿಂತನೆಯಲ್ಲಿದ್ದಾರೆ. ಮಗ ಸುನೀಲ್ ಬೋಸ್‌ಗೆ ರಾಜಕೀಯ ಭವಿಷ್ಯ ಕಲ್ಪಿಸಿ ಕೊಡಬೇಕೆಂಬ ಮಮಕಾರದ ಜವಾಬ್ದಾರಿಯೂ ಅವರಿಗೆ ಇದೆ. ಅವರು ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಬಯಸಿ, ಈಗಾಗಲೇ ಕೆಪಿಸಿಸಿಗೆ ಅರ್ಜಿ ಸಲ್ಲಿಸಿ, ತಮ್ಮ ಪುತ್ರ ಸುನೀಲ್ ಬೋಸ್‌ಗೆ ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಪ್ರಯತ್ನಶೀಲರಾಗಿದ್ದಾರೆ. ಕಾಂಗ್ರೆಸ್, ಒಂದೇ ಕುಟುಂಬದ ಇಬ್ಬರಿಗೆ ಟಿಕೆಟ್ ಕೊಡುವುದೇ ಇಲ್ಲವೇ ಎನ್ನುವುದರ ಮೇಲೆ ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾರು ಎನ್ನುವುದು ನಿರ್ಧಾರವಾಗಲಿದೆ. ಮಹದೇವಪ್ಪ ಅವರು ಪುತ್ರನಿಗಾಗಿ ಕ್ಷೇತ್ರ ತ್ಯಾಗ ಮಾಡಿ ಬೇರೆ ಕ್ಷೇತ್ರ ನೋಡಿಕೊಳ್ಳುವರೋ ಅಥವಾ ಮಗನೇ ತಂದೆಗಾಗಿ ಚುನಾವಣಾ ಕಣದಿಂದ ಹಿಂದೆ ಸರಿಯುವರೋ ಎನ್ನುವುದನ್ನು ಕಾದು ನೋಡಬೇಕಾಗಿದೆ. ಸುನೀಲ್ ಬೋಸ್ ತಮ್ಮ ತಂದೆ ಮಹದೇವಪ್ಪನವರೊಂದಿಗೆ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಚುನಾವಣೆಗಂತೂ ಸಜ್ಜಾಗುತ್ತಿದ್ದಾರೆ.

ಇದಲ್ಲದೆ ಕಾಂಗ್ರೆಸ್ ಪಕ್ಷದಲ್ಲಿ ಕಾಂಗ್ರೆಸ್ ಯುವ ಮುಖಂಡ ಎಂ.ನೂತನ್, ತಾ.ಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ವಿಧಾನಪರಿಷತ್ ಸದಸ್ಯ ದಿವಂಗತ ಎನ್.ಮಂಜುನಾಥ್ ಅವರ ಪುತ್ರ, ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ಪ್ರಫುಲ್ ಅವರುಗಳು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಟಿಕೆಟ್ ಪೈಪೋಟಿಯಲ್ಲಿ ಯಾರು ಯಶಸ್ವಿಯಾಗುತ್ತಾರೆ ಎನ್ನುವ ಲೆಕ್ಕಾಚಾರ ಕ್ಷೇತ್ರದ ರಾಜಕೀಯ ಪಡಸಾಲೆಯಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿರುವ ವಿಷಯವಾಗಿದೆ. ಕಾಂಗ್ರೆಸ್ ಹಾಗೂ ಜೆಡಿಎಸ್ ನಡುವೆಯೇ ಪೈಪೋಟಿ ನಡೆದಿರುವುದನ್ನು ಕ್ಷೇತ್ರದ ಇತಿಹಾಸ ಸಾರಿ ಹೇಳುತ್ತಿದ್ದು, ಒಮ್ಮೆ ಮಾತ್ರ ಬಿಜೆಪಿಯಿಂದ ಡಾ.ಎನ್.ಎಲ್. ಭಾರತಿಶಂಕರ್ ಗೆದ್ದಿದ್ದು, ಶಾಸಕರಾಗುವ ಅದೃಷ್ಟಶಾಲಿಯಾಗಿದ್ದರು.



ರಾಜ್ಯಮಟ್ಟದ ಕುಸ್ತಿ, ಕಬಡ್ಡಿ ಪಂದ್ಯಾವಳಿ; ಡಾ.ಸೂರಜ್ ರೇವಣ್ಣ ಕಪ್–3.0

ಮೈಸೂರು, ಡಿ.6(ಎಂಕೆ)– ನಗರದ ಲಲಿತಮಹಲ್ ಪ್ಯಾಲೇಸ್ ಆವರಣದಲ್ಲಿ ಡಾ.ಸೂರಜ್ ರೇವಣ್ಣ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಆಯೋಜಿಸುವ ರಾಜ್ಯಮಟ್ಟದ 'ಕುಸ್ತಿ ಮತ್ತು ಕಬಡ್ಡಿ'(ಡಾ.ಸೂರಜ್ ರೇವಣ್ಣ ಕಪ್–3.0) ಪಂದ್ಯಾವಳಿ 3ನೇ ಆವೃತ್ತಿಯ ಟ್ರೋಫಿ ಅನಾವರಣಗೊಳಿಸಲಾಯಿತು.

ಪದ್ಮಶ್ರೀ ಪುರಸ್ಕೃತರಾದ ಡಾ.ಸಾಲುಮರದ ತಿಮ್ಮಕ್ಕ ಟ್ರೋಫಿ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಇದೇ ವೇಳೆ ಒಲಂಪಿಕ್ ಮಾದರಿಯಲ್ಲಿ 5 ಕ್ರೀಡಾ ಜ್ಯೋತಿಯನ್ನು ಬೆಳಗಿಸಿ, ಕ್ರೀಡಾಪಟುಗಳಿಗೆ ಹಸ್ತಾಂತರಿಸಲಾಯಿತು. ಕುಸ್ತಿ ಮತ್ತು ಕಬಡ್ಡಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆ, ಟೀ ಶರ್ಟ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ದೇವೇಗೌಡರ ವಿಡಿಯೋ ಸಂದೇಶ: ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ವಿಡಿಯೋ ಸಂದೇಶ ನೀಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಗ್ರಾಮೀಣ ಕಲೆಯಾದ ಕಬಡ್ಡಿ ಹಾಗೂ ಕುಸ್ತಿ ಆಟವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದಲ್ಲಿ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಈಗಾಗಲೇ 2 ಆವೃತ್ತಿ ಯಶಸ್ವಿಯಾಗಿದ್ದು, ಮೂರನೇ ಆವೃತ್ತಿಯೂ ಯಶಸ್ವಿಯಾಗಲೀ ಎಂದು ಶುಭ ಕೋರಿದರು.


ಸನ್ಮಾನ: ಬಳಿಕ ನಾಡೋಜ ಡಾ.ಸಾಲುಮರದ ತಿಮ್ಮಕ್ಕ ಹಾಗೂ ಟ್ರೋಫಿ ವಿನ್ಯಾಸಕರು ಸೇರಿದಂತೆ ಪ್ರಮುಖರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಜಿ.ಟಿ. ದೇವೇಗೌಡ, ಶಾಸಕರಾದ ಸಿ.ಎಸ್. ಪುಟ್ಟರಾಜು, ಸಾ.ರಾ.ಮಹೇಶ್, ಎಲ್. ನಾಗೇಂದ್ರ, ಬಾಲಕೃಷ್ಣ, ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ, ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ, ಸಂಸದ ಪ್ರಜ್ವಲ್ ರೇವಣ್ಣ, ಜಿಪಂ ಮಾಜಿ ಸದಸ್ಯೆ ಭವಾನಿ ರೇವಣ್ಣ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ನಗರಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್, ಡಿಸಿಪಿ ಪ್ರದೀಪ್ ಗುಂಟಿ, ಅಂತರರಾಷ್ಟ್ರೀಯ ಕ್ರೀಡಾಪಟು ಬಿ.ಎನ್. ಉಷಾ ಮತ್ತಿತರರಿದ್ದರು.



ದೈಹಿಕ ಆರೋಗ್ಯ ಮುಖ್ಯ...: ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಕ್ರೀಡಾಕೂಟ ಆಯೋಜಿಸಲಾಗಿದೆ. ಹತ್ತು ಆಸ್ಪತ್ರೆ ಬದಲು ಒಂದು ಆಟದ ಮೈದಾನ ನಿರ್ಮಾಣ ಮಾಡಬೇಕು ಎಂಬ ಮಾತಿದೆ. ವೈದ್ಯನಾಗಿ ದೈಹಿಕವಾಗಿ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಹೇಳಿದರು. ಯುವ ಪೀಳಿಗೆ ಪಾಶ್ಚಾತ್ಯ ಸಂಸ್ಕೃತಿಯ ಕಡೆ ಗಮನಹರಿಸುವುದನ್ನು ಬಿಟ್ಟು ನಮ್ಮ ದೇಶಿಯ ಕ್ರೀಡೆಗೆ ಆದ್ಯತೆ ನೀಡಬೇಕು. ದೈಹಿಕವಾಗಿ ಶ್ರಮಪಡುವುದು ಕಡಿಮೆಯಾಗಿದೆ. ಹಾಗಾಗಿ ನಮ್ಮ ದೇಶೀಯ ಕ್ರೀಡೆಗೆ ಆದ್ಯತೆ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಮೂರನೇ ಆವೃತ್ತಿಯ ರಾಜ್ಯಮಟ್ಟದ ಕುಸ್ತಿ–ಕಬಡ್ಡಿ ಪಂದ್ಯಾವಳಿ ಜ.3 ಮತ್ತು 4ರಂದು ಚನ್ನರಾಯಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲೆ ಆವರಣದಲ್ಲಿ ನಡೆಯಲಿದೆ ಎಂದು ತಿಳಿಸಿದರು.

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ಪ್ರಕರಣ
ಎರಡನೇ ಆರೋಪಿ ಸಿ.ವರುಣ್ ಜಾಮೀನು ಅರ್ಜಿ ವಜಾ

ಮೈಸೂರು, ಡಿ.6(ಎಂಕೆ)– ನಿವೃತ್ತ ಐಬಿ



ಅಧಿಕಾರಿ ಆರ್.ಎನ್.ಕುಲಕರ್ಣಿ(82) ಹತ್ಯೆ ಪ್ರಕರಣದ 2ನೇ ಆರೋಪಿ ಸಿ.ವರುಣ್ ಅಲಿಯಾಸ್ ವರುಣ್ ಗೌಡ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮೈಸೂರು ಜಿಲ್ಲಾ ನ್ಯಾಯಾಲಯ ವಜಾಗೊಳಿಸಿದೆ. ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದಲ್ಲಿ ನ.4ರಂದು ವಾಯುವಿಹಾರದ ವೇಳೆ ಕಾರು ಹರಿಸಿ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರನ್ನು ಹತ್ಯೆ ಮಾಡಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಆರೋಪಿ ಮನು(30) ಹಾಗೂ ಹತ್ಯೆಗೆ ಸಹಕರಿಸಿದ್ದ ಆತನ ಸ್ನೇಹಿತ ಸಿ.ವರುಣ್ ಅಲಿಯಾಸ್ ವರುಣ್ ಗೌಡ (29)ನನ್ನು ಬಂಧಿಸಲಾಗಿತ್ತು.


ಈ ಸಂಬಂಧ ಜಾಮೀನು ಕೋರಿ ಸಿ.ವರುಣ್ ಸಲ್ಲಿಸಿದ್ದ ಅರ್ಜಿಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮಂಗಳವಾರ ವಜಾಗೊಳಿಸಿದೆ.

ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ನಾಳೆಯಿಂದ ವಿಶೇಷ ಕೈಮಗ್ಗ ಮೇಳ

ಮೈಸೂರು,ಡಿ.6(ಪಿಎಂ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಡಿ.8ರಿಂದ 25ರವರೆಗೆ 'ಸಂಸ್ಕೃತಿ 2022–ನನ್ನ ಕೈಮಗ್ಗ ನನ್ನ ಹೆಮ್ಮೆ' ಶೀರ್ಷಿಕೆಯಡಿ 'ವಿಶೇಷ ಕೈಮಗ್ಗ ಮೇಳ' ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ.ಹೆಚ್.ಆರ್.ಮಹದೇವಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸರ್ಕಾರದ ಅಭಿವೃದ್ಧಿ ಆಯುಕ್ತರು (ಕೈಮಗ್ಗ), ರಾಜ್ಯ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ಹಾಗೂ ಜೆಎಸ್‌ಎಸ್ ಅರ್ಬನ್ ಹಾತ್‌ನ ಸಂಯುಕ್ತಾಶ್ರಯದಲ್ಲಿ ಈ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ ಎಂದರು.

ನೇಕಾರರು, ನೇಕಾರರ ಸಹಕಾರ ಸಂಘಗಳು ತಯಾರಿಸುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚು ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕೈಮಗ್ಗ



ಉತ್ಪನ್ನಗಳು ನಶಿಸದಂತೆ ಕಾಪಾಡುವ ಉದ್ದೇಶದಿಂದ ಸರ್ಕಾರ ಈ ಮೇಳ ಆಯೋಜಿಸಿದೆ. ನೇಕಾರರಿಗೆ ಒಂದೇ ಸೂರಿನಡಿ ಮಾರುಕಟ್ಟೆ ಕಲ್ಪಿಸುವ ಉದ್ದೇಶವನ್ನೂ ಹೊಂದಲಾಗಿದೆ ಎಂದು ತಿಳಿಸಿದರು.

ಈ ಮೇಳದಲ್ಲಿ 60ಕ್ಕೂ ಹೆಚ್ಚು ನೇಕಾರರು, ನೇಕಾರರ ಸಹಕಾರ ಸಂಘಗಳು ಭಾಗವಹಿಸಲಿವೆ. ಮಧ್ಯಪ್ರದೇಶ, ಉತ್ತರಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ರಾಜ್ಯದ ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ವಿವಿಧ ಜಿಲ್ಲೆಗಳ ನೇಕಾರರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ರೇಷ್ಮೆ, ಹತ್ತಿ ಮತ್ತು ಉಣ್ಣೆ ಹಾಗೂ ವಿವಿಧ ಮಿಶ್ರಿತ ನೂಲುಗಳಿಂದ ತಯಾರಿಸಲಾದ ಕೈಮಗ್ಗ ಉತ್ಪನ್ನಗಳು ಮೇಳದಲ್ಲಿ ದೊರೆಯಲಿವೆ

> **"ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಈಗ 45 ಮಳಿಗೆಗಳಿದ್ದು, ಇದೀಗ ಹೆಚ್ಚುವರಿಯಾಗಿ 50 ಮಳಿಗೆ ನಿರ್ಮಾಣ ಕಾಮಗಾರಿಗೆ ನಿನ್ನೆ ಚಾಲನೆ ನೀಡಲಾಗಿದೆ. ಅಂದಾಜು 7 ಕೋಟಿ ರೂ. ವೆಚ್ಚದಲ್ಲಿ ಸದರಿ ಕಾಮಗಾರಿ ನಡೆಯುತ್ತಿದೆ. ಇದಕ್ಕಾಗಿ ರಾಜ್ಯ ಸರ್ಕಾರ 5 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು, ಈ ಪೈಕಿ 2 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದೆ.**
> **–ಡಾ.ಹೆಚ್.ಆರ್.ಮಹದೇವಸ್ವಾಮಿ, ಜಂಟಿ ನಿರ್ದೇಶಕರು, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗ.**

ಎಂದು ವಿವರಿಸಿದರು. ಶೇ.20ರಷ್ಟು ರಿಯಾಯಿತಿ ದರದಲ್ಲಿ ಕೈಮಗ್ಗದ ಉತ್ಪನ್ನಗಳು ಗ್ರಾಹಕರಿಗೆ ದೊರೆಯಲಿವೆ. ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ತಮಿಳುನಾಡಿನ ಕಾಂಚೀವರಂ ಸೀರೆ, ಬಿಹಾರದ ತಷರ್ ಸೀರೆ, ಕಾಂತ ಸೀರೆ, ಬಲಚುರಿ ಸೀರೆ, ಬುಟಿಕ್ ಸೀರೆ, ಪಶ್ಚಿಮ ಬಂಗಾಳದ ಬೆಂಗಾಲಿ ಕಾಟನ್ ಸೀರೆ, ಉತ್ತರ ಪ್ರದೇಶದ ಬನಾರಸ್ ಸೀರೆ, ಚಿಕನ್ ಎಂಬ್ರಾಯ್ಡರಿ ಸೀರೆ, ಮಧ್ಯಪ್ರದೇಶದ ಚಂದೇರಿ, ಮಹೇಶ್ವರಿ ಸೀರೆ ಲಭ್ಯವಿರಲಿವೆ. ಜೊತೆಗೆ ಡ್ರೆಸ್ ಮೆಟೀರಿಯಲ್, ಕಸೂತಿ ವಸ್ತ್ರ, ಟವಲ್, ಮೇಲುಹಾಸು ಮತ್ತು ಹೊದಿಕೆಗಳು, ನೆಲಹಾಸು ಮತ್ತು ಇತರೆ ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯಲಿವೆ ಎಂದರು. ಡಿ.8ರಂದು ಸಂಜೆ 4ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮೇಳಕ್ಕೆ ಚಾಲನೆ ನೀಡಲಿದ್ದಾರೆ.

ಕೈಮಗ್ಗ ಮತ್ತು ಜವಳಿ ಇಲಾಖೆ ಸಚಿವ ಶಂಕರ ಬ.ಪಾಟೀಲ ಮುನೇನಕೊಪ್ಪ ಘನ ಉಪಸ್ಥಿತಿ, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮೇಯರ್ ಶಿವಕುಮಾರ್ ಸೇರಿದಂತೆ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ಜನತೆ ಮೇಳಕ್ಕೆ ಭೇಟಿ ನೀಡಿ ಕೈಮಗ್ಗ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳನ್ನು ಖರೀದಿಸಿ ಕೈಮಗ್ಗ ಉದ್ದಿಮೆ ಮತ್ತು ಕರಕುಶಲ ಕರ್ಮಿಗಳನ್ನು ಉತ್ತೇಜಿಸಬೇಕೆಂದು ಕೋರಿದರಲ್ಲದೆ, ಮಾಹಿತಿಗಾಗಿ ಮೊ.ಸಂ. 96866 77232, 81975 83261 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ನಿಂಗ : ನಿಮ್ಮ ಸಿನಿಮಾಗೆ 'ಅತ್ತೆಯೋ ಮಹಾಲಕ್ಷ್ಮಿ' ಅಂತ ಹೆಸರು ಇಟ್ಟಿದ್ದು ಯಾಕೆ?
ನಿರ್ಮಾಪಕ : ಈ ಚಿತ್ರಕ್ಕೆ ಫೈನಾನ್ಸ್ ಎಲ್ಲಾ ಅವರದೇ. ಅವರಿಗೆ ಖುಷಿಯಾಗಲಿ ಅಂತ ಈ ಹೆಸರಿಟ್ಟೆ, ಒಂದು ವೇಳೆ ಚಿತ್ರ ಸೋತರೆ ಆ ಹೆಸರಿನಿಂದ ಚಿತ್ರ ಓಡಲಿಲ್ಲ ಅಂತ ಸೋಲನ್ನು ಅವರ ತಲೆಗೆ ಕಟ್ಟಿ ನಾನು ಪಾರಾಗಬಹುದಲ್ವಾ?!

ಮೈಸೂರು ಮಿತ್ರ
ಬುಧವಾರ, 7 ಡಿಸೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮನುಷ್ಯನನ್ನು ಪರಿಪೂರ್ಣವಾಗಿ ರೂಪಿಸುವುದು ಅವನ ಚಿಂತನೆಗಳು.
–ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಗುರಿನಲ್ಲಿ ಹೋಗೋದಕ್ಕೆ ಕೊಡಲಿ ತೆಗೆದುಕೊಂಡರು ಅನ್ನೋ ಹಾಗೆ

ನಿಮ್ಮ ಪತ್ರಗಳು

ಚಾಮುಂಡಿಬೆಟ್ಟ ದೇವಸ್ಥಾನದ ರಾಜಗೋಪುರ ವಿದ್ಯುತ್ ದೀಪದಿಂದ ಕಂಗೊಳಿಸಲಿ

ಮಾನ್ಯರೆ,



ಮಹಾಬಲಾದ್ರಿ ಬೆಟ್ಟದಲ್ಲಿ ಮಹಿಷನನ್ನು ಸಂಹರಿಸಿ ನೆಲೆಸಿರುವ ಯದುವಂಶದ ಒಡೆಯರ ಕುಲದೇವತೆ, ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ದೊಡ್ಡ ದೇವರಾಜ ಒಡೆಯರ್ ಅವರ ಕಾಲದಲ್ಲಿ ಒಂದು ಸಾವಿರ ಮೆಟ್ಟಿಲುಗಳನ್ನು ಕಟ್ಟಿಸಿದರು. ಜೊತೆಯಲ್ಲೇ 700ನೇ ಮೆಟ್ಟಿಲ ಬಳಿ ಬೃಹತ್ ಏಕಶಿಲಾ ನಂದಿಯನ್ನು ಸ್ಥಾಪಿಸಿದ್ದಾರೆ. 1827ರಲ್ಲಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚಾಮುಂಡಿ ದೇವಾಲಯಕ್ಕೆ ಬೃಹತ್ ಆದ ರಾಜಗೋಪುರವನ್ನು ಕಟ್ಟಿಸಲು ಪ್ರಾರಂಭಿಸಿದರು. ಸಪ್ತಮಾತೃಕೆಯರಿಂದ ಕೂಡಿದ 7 ಅಂತಸ್ತಿನ ರಾಜಗೋಪುರ ನಿರ್ಮಾಣದ ಬಗ್ಗೆ ದೇಗುಲದ ಪಕ್ಕದಲ್ಲೇ ಶಾಸನವನ್ನೂ ಹಾಕಿಸಿದ್ದಾರೆ. 1829ರಲ್ಲಿ ರಾಜಗೋಪುರ ನಿರ್ಮಾಣ ಪೂರ್ಣಗೊಂಡು, ಉತ್ಸವಮೂರ್ತಿ, ಪ್ರಾಂಗಣ, ಸೋಪಾನ ಸೇರಿದಂತೆ ದೇವಸ್ಥಾನದ ಜೀರ್ಣೋದ್ಧಾರ ಕೆಲಸಗಳು ಮಾಡಿಸಿದರು. ಪ್ರತಿ ಅಮಾವಾಸ್ಯೆ, ಮಂಗಳವಾರ ಮತ್ತು ಶುಕ್ರವಾರದಲ್ಲಿ ವಿಶೇಷ ಪೂಜಾ ಕೈಂಕರ್ಯ ಧಾರ್ಮಿಕ ಪೂಜೆಗಳಲ್ಲಿ ಕುಟುಂಬ ಸಮೇತ ಭಾಗವಹಿಸಿ ಲೋಕಕಲ್ಯಾಣಾರ್ಥಕ್ಕಾಗಿ ಪ್ರಾರ್ಥನೆ ಸಲ್ಲಿಸಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ರಾಜಗೋಪುರದಲ್ಲಿ ಕಾಣುತ್ತಿದ್ದ ಜ್ಯೋತಿಗೆ ಮೈಸೂರಿನ ಮಹಾಜನತೆ ತಮ್ಮ ಮೊಹಲ್ಲಾಗಳಿಂದಲೇ ನಮಸ್ಕರಿಸಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ನಂತರ ದಿನದಲ್ಲಿ ಪ್ರಜಾಪ್ರಭುತ್ವ ಬಂದ ಮೇಲೆ ಇಂಧನ ಇಲಾಖೆ ಚೆಸ್ಕಾಂನವರು ವಿದ್ಯುತ್ ದೀಪದ ಬಲ್ಬ್‌ಗಳನ್ನು ಅಳವಡಿಸಿದರು. ಪ್ರತಿ ಮಂಗಳವಾರ, ಶುಕ್ರವಾರ, ಆಷಾಡ ಮಾಸ, ನವರಾತ್ರಿ ಮತ್ತು ಬೆಟ್ಟದ ತೇರು ಸರ್ಕಾರಿ ದಿನಗಳಲ್ಲಿ ರಾಜಗೋಪುರವನ್ನು ವಿದ್ಯುತ್ ದೀಪದ ಮೂಲಕ ಚಾಮುಂಡಿ ಬೆಟ್ಟದಿಂದ ಕಂಗೊಳಿಸುವಂತೆ ಮಾಡಿದ್ದರು. ಇದರಿಂದ ಲಕ್ಷಾಂತರ ಭಕ್ತರು ಮಹಿಳೆಯರು ಹಿರಿಯ ನಾಗರೀಕರು ಅವರವರ ಮನೆಯಲ್ಲಿ ಪೂಜಾ ಕೈಂಕರ್ಯ, ಭಜನೆ, ಪಾರಾಯಣ, ಸಹಸ್ರಾಮ ಸೇವೆ ಸಲ್ಲಿಸಿ ರಾಜಗೋಪುರವನ್ನು ಕಂಡು ಭಕ್ತಿಯಿಂದ ಕೈ ಮುಗಿದು ಪ್ರಾರ್ಥಿಸುತ್ತಿದ್ದರು. ಆದರೆ ಕಳೆದ ಐದಾರು ತಿಂಗಳಿಂದ ಮೈಸೂರು ನಗರದಿಂದ ವಿದ್ಯುತ್ ದೀಪದ ಮೂಲಕ ರಾಜಗೋಪುರ ಕಾಣುತ್ತಿಲ್ಲ. ಅಭಿವೃದ್ಧಿ ಕಾಮಗಾರಿ ಟೆಂಡರ್ ಅನುಮೋದನೆ ವಿಳಂಬವೋ ಅಧಿಕಾರಿಗಳ ನಿರ್ಲಕ್ಷ್ಯವೋ ಎಂದು ವಿಚಾರಿಸಿದರೇ ಅದರ ಕಾರಣ ಯಾರಿಗೂ ತಿಳಿದಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಪುರಾತತ್ವ ಇಲಾಖೆ, ಮುಜರಾಯಿ ಇಲಾಖೆ ಮತ್ತು ಮೈಸೂರು ಜಿಲ್ಲಾಡಳಿತ ಭಕ್ತರಿಗೆ ಸಾರ್ವಜನಿಕ ಪ್ರಕಟಣೆ ಸ್ಪಷ್ಟನೆ ನೀಡಲು ಮುಂದಾಗಬೇಕಿದೆ. ಎಂದಿನಂತೆ ರಾಜಗೋಪುರ ಮತ್ತೆ ವಿದ್ಯುತ್ ದೀಪದಿಂದ ಕಂಗೊಳಿಸಿ ಲಕ್ಷಾಂತರ ಭಕ್ತರ ಪ್ರಾರ್ಥನೆಗೆ ಅವಕಾಶ ಮಾಡಿಕೊಡಲಿ.

–ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ, ಮೈಸೂರು.

ಗಡಿ ವಿವಾದದ ಹಿಂದೆ ಮಹಾರಾಷ್ಟ್ರ ರಾಜಕೀಯದ ಲಾಭವಷ್ಟೇ

ಮಾನ್ಯರೆ,

ಬೆಳಗಾವಿ ತನಗೆ ಸಿಗುವುದಿಲ್ಲ ಎಂದು ಮಹಾರಾಷ್ಟ್ರಕ್ಕೆ ಸ್ಪಷ್ಟವಾಗಿ ಗೊತ್ತಿದ್ದರೂ, ಪದೇ ಪದೆ ಗಡಿ ವಿವಾದವನ್ನು ಕೆದಕುತ್ತಾ ಕಾಲ್ಕೆರೆದುಕೊಂಡು ಕರ್ನಾಟಕದ ಜೊತೆ ಜಗಳಕ್ಕೆ ಬರುತ್ತಿದೆ. ಇದರ ಹಿಂದಿನ ಮರ್ಮ ರಾಜಕೀಯ ವೋಟ್ ಬ್ಯಾಂಕಿನ ಲಾಭವಷ್ಟೇ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಮರಾಠಿಗರು ಒಟ್ಟಾಗಿ ಮತ ಹಾಕುತ್ತಾರೆ. ಆ ಸಮುದಾಯದ ಮತಗಳನ್ನು ಯಾರು ಹೆಚ್ಚಾಗಿ ಪಡೆಯುತ್ತಾರೋ ಅವರು ಗೆಲ್ಲುತ್ತಾರೆ ಎಂಬುದು ರಾಜಕೀಯ ಲೆಕ್ಕಾಚಾರ. ಕರ್ನಾಟಕದಲ್ಲಿರುವ ಮರಾಠಿಗರಿಗೆ ಭಾಷೆಯನ್ನು ಮೀರಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕರ್ನಾಟಕವು ಒದಗಿಸುತ್ತಿದೆ. ಇದನ್ನು ಸಹಿಸಿಕೊಳ್ಳಲು ಮಹಾರಾಷ್ಟ್ರಕ್ಕೆ ಆಗುತ್ತಿಲ್ಲ. ಎಂಇಎಸ್ ಮೂಲಕ ಮರಾಠಿಗರನ್ನು ಕನ್ನಡಿಗರ ವಿರುದ್ಧ ಎತ್ತಿ ಕಟ್ಟುವ ಕೆಲಸವನ್ನು ಮಾಡುತ್ತಿದೆ. ಏನಾದರೂ ಮಾಡಿ 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಒಬ್ಬರನ್ನಾದರೂ ವಿಧಾನ ಸಭೆಗೆ ಆಯ್ಕೆ ಮಾಡಬೇಕೆಂಬುದು ಮಹಾರಾಷ್ಟ್ರದ ಉದ್ದೇಶವಾಗಿದೆ. ಅದಕ್ಕೂ ಮುಂಚೆ 2023ರ ಕರ್ನಾಟಕದ ವಿಧಾನಸಭಾ ಚುನಾವಣೆ ನಡೆಯಲಿದ್ದು ಎಲ್ಲಿ ನಮ್ಮ ಕೈ ತಪ್ಪುತ್ತದೋ ಎಂದು ನುಂಗಲಾರದ ತುತ್ತಾಗಿದೆ. ಬೆಳಗಾವಿ ಮತ್ತು ಗಡಿಯ ಭಾಗದಲ್ಲಿ ಸುವರ್ಣಸೌಧ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕರ್ನಾಟಕ ಮಾಡಿದೆ. ಇದರಿಂದ ಕನ್ನಡಿಗರು ಸಂಘಟಿತರಾಗುತ್ತಿದ್ದು, ಎಂಇಎಸ್‌ನ ಆರ್ಭಟ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ. ಈ ಬಾರಿಯಾದರೂ ಎಂಇಎಸ್‌ನ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಈ ರೀತಿಯ ನಾಟಕವಾಡುತ್ತಿದೆ. ಇದರಿಂದ ಬೆಳಗಾವಿ ಮತ್ತು ಗಡಿ ಪ್ರದೇಶಗಳಲ್ಲಿ ಅಶಾಂತಿ ಉಂಟು ಮಾಡಲು ಅವಣಿಸುತ್ತಿದೆ. ಕರ್ನಾಟಕ ಇದಕ್ಕೆ ಮುಲಾಜಿಲ್ಲದೆ ಕಡಕ್ ಎಚ್ಚರಿಕೆ ಮತ್ತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಎಂಇಎಸ್ ಸಂಘಟನೆಗೆ ತಕ್ಕ ಪಾಠವನ್ನು ಕಲಿಸಿ ಶಾಂತಿಯನ್ನು ಕಾಪಾಡಬೇಕು.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಜಾತಿ ದೌರ್ಜನ್ಯದ ಆತ್ಮಹತ್ಯೆ, ಆದರೂ ಹತ್ಯೆಯ ಸ್ವರೂಪ ಈ ಪ್ರಕರಣ

ಮಾನ್ಯರೆ,

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಬೇಮಹಳ್ಳಿ ಗ್ರಾಮದ ಉದಯ ಕಿರಣ ಎಂಬ ದಲಿತ ಯುವಕನ ಮೇಲೆ ನಡೆದಿರುವ ಜಾತಿ ದೌರ್ಜನ್ಯದ ಹಿಂಸೆ ನಿಜಕ್ಕೂ ಮನುಷ್ಯತ್ವ ಮರೆಯಾಗಿರುವುದು ಸಾಬೀತು ಮಾಡಿದಂತಿದೆ.

ಉದಯ ಕಿರಣ ಎಂಬ ದಲಿತ ಯುವಕ ಬೈಕ್ ಓವರ್ ಟೇಕ್ ಮಾಡಿದ ಎಂಬ ಕ್ಷುಲ್ಲಕ ವಿಷಯಕ್ಕೆ ಜಾತಿ ಹೀನ ಮನಸುವುಳ್ಳ ಕೆಲವರು ಆತನ ಬೈಕ್ ಮತ್ತು ಮೊಬೈಲ್ ಅನ್ನು ಕಿತ್ತುಕೊಂಡು ದಲಿತ ಎಂಬ ಕಾರಣಕ್ಕೆ ಬಹಿರಂಗವಾಗಿ ಮರಕ್ಕೆ ಕಟ್ಟಿ ಮನಸ್ಸೋಇಚ್ಛೆ ದೈಹಿಕವಾಗಿ ಗಂಭೀರವಾಗಿ ಹಲ್ಲೆ ಮಾಡಿ ಹಾಗೂ ಜಾತಿ ನಿಂದನೇ ಮಾಡಿ, ಅವಾಚ್ಯ ಪದಗಳನ್ನು ಬಳಸಿದ್ದರಿಂದ ಮನನೊಂದ ಯುವಕ ಘಟನೆ ನಡೆದ ದಿನವೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇದು ಆತ್ಮಹತ್ಯೆ ಯಾದರೂ ಜಾತಿ ಆರಾಧಕರಿಂದ ನಡೆದ ಪರೋಕ್ಷ ಹತ್ಯೆಯ ಸ್ವರೂಪವಾಗಿದೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಜಾತಿಯ ಕೊಳಕು ಜೀವಿಗಳಿಗೆ ಕೊಲೆಯ ಕೇಸ್ ಅನ್ನು ಮೊದಲು ದಾಖಲಿಸಿ ನಂತರ ಉಳಿದ ಕೇಸ್ ಅನ್ನು ಸೇರಿಸಿ ಮೃತ ಯುವಕನ ಸಾವಿಗೆ ನ್ಯಾಯಯುತವಾಗಿ ತನಿಖೆ ಮಾಡಿ ಎಲ್ಲಾ ಅಪರಾಧಗಳಿಗೆ ಕಠಿಣ ಶಿಕ್ಷೆ ನೀಡಿ ಮತ್ತೆ ಈ ಜಾತಿ ದೌರ್ಜನ್ಯದ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಸಬೇಕಾಗಿದೆ. ಹಾಗೂ ಇದೊಂದು ಜಾತಿ ದೌರ್ಜನ್ಯದ ಆತ್ಮಹತ್ಯೆ ಯಾದರೂ, ಹತ್ಯೆಯ ಸ್ವರೂಪಕ್ಕೆ ಬಹಳ ಹತ್ತಿರವಾಗಿರುವುದರಿಂದ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ನೇರ ಮಾರ್ಗದರ್ಶನದಲ್ಲಿ ಉದಯಕಿರಣನ ಹತ್ಯೆಯ ಸ್ವರೂಪದ ಈ ಸಾವಿಗೆ ನ್ಯಾಯ ಒದಗಿಸಬೇಕಾಗಿದೆ.

–ಪವನ್ ಜಯರಾಂ, ಸಾಹಿತಿ, ಚಾಮರಾಜನಗರ

ಜಿಎಸ್‌ಎಸ್ ಅದ್ಭುತ ಕಾವ್ಯ ಅಜ್ಞಾತವಾಸದಲ್ಲಿ ಭೀಮಾಲಾಪ



ಜಿ.ಎಸ್.ಶಿವರುದ್ರಪ್ಪ ಅವರ ಕವಿತೆಗಳು ಒಂದಕ್ಕಿಂತ ಒಂದು ಭಿನ್ನವಾಗಿರುವಂತಹವು. ಅಂತಹ ಕವಿತೆಗಳಲ್ಲಿ ಭೀಮಾಲಾಪ ಕವಿತೆಯು ಒಂದು. ಮಹಾಭಾರತದ ಕಥಾವಸ್ತುವನ್ನು ಆಧರಿಸಿ ಕಾದಂಬರಿ, ನಾಟಕ, ಕಥೆ, ಕವಿತೆಗಳು ರಚನೆಗೊಂಡಿವೆ.ಈ ನೆಲೆಯಲ್ಲಿಯೇ ರೂಪುಗೊಂಡದ್ದು ಜಿ.ಎಸ್.ಎಸ್ ಅವರ ಭೀಮಾಲಾಪ ಕವಿತೆ. ಪಾಂಡವರ ಅಜ್ಞಾತವಾಸದ ಕಥೆಯನ್ನು ಕವಿತೆಯಲ್ಲಿ ಔಚಿತ್ಯ ಪೂರ್ಣವಾಗಿ ನಿರೂಪಿಸಿರುವುದು ಕವಿಯ ಹೆಗ್ಗಳಿಕೆ. ಕವಿತೆಯು ಪಾಂಡವರ ಅಜ್ಞಾತವಾಸದ ಸನ್ನಿವೇಶವನ್ನೇ ಚಿತ್ರಿಸಿದರೂ ಅದು ಪ್ರಸ್ತುತ ಸಮಾಜದ ಪ್ರತಿರೂಪದಂತೆ ಕಾಣುತ್ತದೆ. ಭೀಮನಂತೆ ಅಸಹಾಯಕತೆಗೆ ಸಿಲುಕಿ ಆಲಾಪಿಸುವ ಮಂದಿ ನಮ್ಮ ನಡುವೆ ಅಸಂಖ್ಯಾತರಿದ್ದಾರೆ.

ಸೀರೆ ಉಟ್ಟು, ಬಳೆ ತೊಟ್ಟು,
ಕಾಲಿಗೆಗೆಜ್ಜೆ ಕಟ್ಟಿದ್ದಾನೆ ಒಬ್ಬ:
ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ,
ಕುದುರೆ ಲಾಯದಲ್ಲಿ ಮತ್ತೊಬ್ಬ.
ಇದ್ದಾಳೆ ಇವಳು ಅವರಿವರ
ತಲೆಯ ಹೇನು ಹೆಕ್ಕುತ್ತಾ
ಆಗಾಗ ನಮ್ಮನ್ನೂ ಕುಕ್ಕುತ್ತಾ

ಈ ಪದ್ಯಭಾಗದಲ್ಲಿ ಅಜ್ಞಾತವಾಸದಲ್ಲಿರುವ ಪಾಂಡವರ ಚಿತ್ರಣವನ್ನು ತಿಳಿಸಲಾಗಿದೆ. ಪಗಡೆಯಾಟದಲ್ಲಿ ಸೋತ ಪರಿಣಾಮದಿಂದಾಗಿ ಕೌರವರ ಅದರಲ್ಲೂ ಮುಖ್ಯವಾಗಿ ದುರ್ಯೋಧನನ ಆಜ್ಞೆಯಂತೆ ಹನ್ನೆರಡು ವರ್ಷ ವನವಾಸವನ್ನು ಮುಗಿಸಿದ ಪಾಂಡವರು ಒಂದು ವರ್ಷದ ಅಜ್ಞಾತವಾಸಕ್ಕೆ ವಿರಾಟನ ಆಸ್ಥಾನಕ್ಕೆ ಬಂದು ನೆಲೆಸಿದ್ದಾರೆ. ಅಜ್ಞಾತವಾಸದಲ್ಲಿ ತಾವು ಪಾಂಡವರು ಎಂದು ತಿಳಿಯಬಾರದೆಂದು ವೇಷವನ್ನು ಮರೆಸಿಕೊಂಡು ಒಬ್ಬೊಬ್ಬರಾಗಿ ಬಂದು ವಿರಾಟನ ಆಸ್ಥಾನವನ್ನು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಭೀಮ ಎಲ್ಲವನ್ನೂ ನೆನಪಿಸಿಕೊಳ್ಳುತ್ತಾ ಇರುತ್ತಾನೆ.

ಸೀರೆ ಉಟ್ಟು, ಬಳೆ ತೊಟ್ಟು,

ಕಾಲಿಗೆಗೆಜ್ಜೆ ಕಟ್ಟಿದ್ದಾನೆ ಒಬ್ಬ – ಬೃಹನ್ನಳೆಯ ವೇಷದಲ್ಲಿ ವಿರಾಟ ರಾಜನ ಮಗಳಾದ ಉತ್ತರೆಗೆ ನಾಟ್ಯವನ್ನು ಕಲಿಸುವವನಾಗಿ ಸೀರೆಯನ್ನು ಉಟ್ಟು , ಬಳೆ ತೊಟ್ಟು , ಕಾಲಿಗೆ ಹೆಜ್ಜೆ ಕಟ್ಟಿಕೊಂಡು ಶಿಖಂಡಿಯ ವೇಷದಲ್ಲಿದ್ದಾನೆ ಅರ್ಜುನ. ಮೂರು ಲೋಕಗಳಲ್ಲಿ ಗಂಡ (ವೀರ)ನೆಂದು ಪ್ರಸಿದ್ಧನಾದ ಅರ್ಜುನ ಇಲ್ಲಿ ಶಿಖಂಡಿಯೂ ಬೃಹನ್ನಳೆಯಾಗಿ ಉತ್ತರೆಗೆ ನಾಟ್ಯವನ್ನು ಕಲಿಸುವವನಾಗಿದ್ದಾನೆ.

ನಾವು ಗಂಡಸರಾಗಿ ಜನಿಸಿದ್ದರೂ ಕೆಲವು ಸಂದರ್ಭ ಸನ್ನಿವೇಶಗಳು ನಮ್ಮಲ್ಲಿ ಹೆಣ್ಣಿನ ಸ್ವಭಾವವನ್ನು ಅಥವಾ ಸ್ವರೂಪವನ್ನು ಮೈಗೂಡಿಸಿ ಬಿಡುತ್ತವೆ.ಅದಕ್ಕೆ ಬಿಲ್ವಿದ್ಯಾ ಪಾರಂಗತ, ಗಾಂಡೀವಿ ಎಂದೇ ಖ್ಯಾತನಾದ ಅರ್ಜನನೇ ಸಾಕ್ಷಿಯಾಗಿದ್ದಾನೆ (ಕ್ಷತ್ರಿಯರಂತೆ ಬಲಶಾಲಿಯಾದರೂ ಒಮ್ಮೊಮ್ಮೆ ತಾಳ್ಮೆ ಸಂಯಮವನ್ನು ಮೈಗೂಡಿಸಿಕೊಳ್ಳುವ ಅನಿವಾರ್ಯತೆ ಇದೆ)

ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ– ಕಂಕಭಟ್ಟ ಎಂಬ ಬ್ರಾಹ್ಮಣನ ವೇಷದಲ್ಲಿ ಕಾವಿಯನ್ನು ಧರಿಸಿ ಕುಳಿತಿರುವವನು ಧರ್ಮರಾಯ.ಜೀವನದುದ್ದಕ್ಕೂ ಧರ್ಮಮಾರ್ಗದಲ್ಲಿಯೇ ನಡೆಯುವನೆಂಬ ಪಣ ತೊಟ್ಟ ಧರ್ಮರಾಯ ವಿರಾಟನ ಆಸ್ಥಾನದಲ್ಲಿ ಕಾವಿ ತೊಟ್ಟು ಮೂಲೆಯಲ್ಲಿ ಕುಳಿತಿದ್ದಾನೆ.

ದನದ ಕೊಟ್ಟಿಗೆಯಲ್ಲಿ ಒಬ್ಬ – ಗೋಪಾಲಕನಾಗಿ ತಂತ್ರಿಪಾಲ ಎಂಬ ಹೆಸರಿನಿಂದ ಸಹದೇವನು

ಕುದುರೆ ಲಾಯದಲ್ಲಿ ಮತ್ತೊಬ್ಬ – ಅಶ್ವಪಾಲಕನಾಗಿ ದಾಮಗ್ರಂಥಿ ಎಂಬ ಹೆಸರಿನಿಂದ ನಕುಲನು ತಮ್ಮ ಗುರುತು ಸಿಗದ ಹಾಗೇ ವೇಷ ಮರೆಸಿಕೊಂಡು ಇದ್ದಾರೆ.


ಇದ್ದಾಳೆ ಇವಳು ಅವರಿವರ
ತಲೆಯ ಹೇನು ಹೆಕ್ಕುತ್ತಾ

ಆಗಾಗ ನಮ್ಮನ್ನೂ ಕುಕ್ಕುತ್ತಾ –ಇನ್ನೂ ಉಳಿದವಳು ದ್ರೌಪದಿ ಅವಳು ಕೂಡ ವಿರಾಟ ರಾಜನ ಮಡದಿಯ ಸುದೇಷ್ಣೆಯ ಸಖಿಯಾಗಿ ಸೈರಂಧ್ರಿಯ ವೇಷದಲ್ಲಿದ್ದಾಳೆ.ಅಲ್ಲಿ ಅವರಿವರ ಹೇನನ್ನು ಹುಡುಕಿ ಅವುಗಳ ಹೆಕ್ಕುತ್ತಾ ಸಮಯ ಸಿಕ್ಕಾಗ ಹೇನಿನೊಂದಿಗೆ ನಮ್ಮನ್ನೂ ಮಾತಿನಲ್ಲಿ ಕುಕ್ಕುತ್ತಾ ಇದ್ದಾಳೆ ಎಂದು ಭೀಮ ತಮ್ಮಗೊದಗಿದ ಸ್ಥಿತಿಯನ್ನು ನೆನಪಿಸಿಕೊಳ್ಳುತ್ತಿದ್ದಾನೆ.

ಸುಖದ ಸುಪ್ಪತ್ತಿಗೆಯ ಮೇಲೆ ಇದ್ದವರೂ ಒಮ್ಮೊಮ್ಮೆ ಬಡತನದ ಅನುಭವವನ್ನು ಸವಿಯಬೇಕಾಗುತ್ತದೆ. ಹಾಗೆಯೇ ದಾಸಿಯರಿಂದ ಸೇವೆ ಮಾಡಿಸಿಕೊಳ್ಳಬೇಕಿದ್ದ ದ್ರೌಪದಿ ತಾನೇ ದಾಸಿಯಾಗಿರುವುದು ಆ ಸಂದರ್ಭದ ಔಚಿತ್ಯವಾಗಿದೆ.

ನಾನು ಇದ್ದೇನೆ ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ

ಈ ಪದ್ಯಭಾಗದಲ್ಲಿ ತಾನು ಯಾರಿಗೂ ತಿಳಿಯದಾಗೇ ವೇಷ ಮರೆಸಿಕೊಂಡು ಇರುವ ಬಗೆಯನ್ನು ಭೀಮ ತಿಳಿಸಿದ್ದಾನೆ. ನಾನು ಇದ್ದೇನೆ ಅಡುಗೆ ಮನೆಯಲ್ಲಿ ಉರಿವ ಸೌದೆಗಳ ಜೊತೆಗೆ – ನಾನು ವಿರಾಟ ರಾಜನ ಆಸ್ಥಾನದಲ್ಲಿ ಇದ್ದೇನೆ. ಅಡುಗೆ ಮನೆಯಲ್ಲಿ ವಲಲ



ಎಂಬ ಅಡುಗೆ ಭಟ್ಟನಾಗಿ ವೇಷ ಮರೆಸಿಕೊಂಡಿರುವ ಭೀಮನಿಗೆ ಅಡುಗೆ ಮಾಡುವ ಕೆಲಸದಲ್ಲಿದ್ದರೂ ಒಳಗೊಳಗೇ ಕೋಪ ಉಕ್ಕಿ ಉಕ್ಕಿ ಬರುತ್ತಿದೆ. ಹೇಗೆ ಸೌದೆಗಳು ಉರಿದು ಪಾತ್ರೆಗಳಲ್ಲಿರುವ ಆಹಾರ ಅಡುಗೆಯಾಗಿ ಸಿದ್ಧವಾಗುವುದೋ ಹಾಗೆಯೇ ಹಳೆಯದ್ದನ್ನೆಲ್ಲಾ ನೆನಪಿಸಿಕೊಂಡಾಗ ಕೋಪ ಬರುತ್ತಿದೆ ಎಂದು ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅಣ್ಣನಾಜ್ಞೆಯನ್ನು ಮೀರಲಾರದವನಾಗಿ ಕೌರವರ ಮೋಸದಾಟವನ್ನು, ಅನ್ಯಾಯವನ್ನು, ಅಪಮಾನವನ್ನು ನೆನಪಿಸಿಕೊಂಡು ಭೀಮ ಕೋಪದಿಂದ ಕುದಿಯುತ್ತಿದ್ದಾನೆ. ಈ ಸಂದರ್ಭವನ್ನು ಗಮನಿಸಿದಾಗ ಮನುಷ್ಯ ಎಷ್ಟೇ ಬಲಶಾಲಿಯಾಗಿದ್ದರೂ, ವಿವೇಕಿಯಾಗಿದ್ದರೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಏನು ಮಾಡಲಾಗದೆ ಕೈಕಟ್ಟಿ ಕೂರಬೇಕಾದ ಸನ್ನಿವೇಶವನ್ನು ನಿರೂಪಿಸಿದಂತಿದೆ ಭೀಮನ ಈ ಪರಿಸ್ಥಿತಿ.

ಕೆಲವೊಮ್ಮೆ ನಾವೆಷ್ಟೇ ಬಲಶಾಲಿಗಳಾಗಿದ್ದರೂ ಪರಿಸ್ಥಿತಿಗಳು ನಮ್ಮನ್ನು ಏನು ಮಾಡಲಾಗದಾಗೇ ಮಾಡಬಲ್ಲುದು ಎಂಬುದಕ್ಕೆ ಭೀಮನ ಈ ಸನ್ನಿವೇಶ ಸಾಕ್ಷಿಯಾಗಿದೆ.

ಕಣ್ಣೆದುರು ತೇಲಿ ಬರುತ್ತವೆ
ಕಂಡದ್ದು, ಕಲಿತದ್ದು; ಬೆಂಕಿಗೆ ಬಿದ್ದು ಪಾರಾದದ್ದು;
ಪಗಡೆ ದಾಳದ ಜೊತೆಗೆ ಉರುಳಿ ಬಿದ್ದದ್ದು ; ಬಿಚ್ಚಿದ
ಜಡೆಯ ನೆರಳಿನ ಕೆಳಗೆ ಭುಸುಗುಟ್ಟಿ ನರಳಿದ್ದು;
ಕಾಡು ಪಾಲಾಗಿ ಅಲೆದದ್ದು

ಈ ಪದ್ಯಭಾಗದಲ್ಲಿ ಭೀಮ ತಮ್ಮನ್ನು ಈ ಸ್ಥಿತಿಗೆ ತಂದೊಡ್ಡಿದ ಘಟನೆಗಳನ್ನೆಲ್ಲಾ ನೆನಪು ಮಾಡಿಕೊಳ್ಳುತ್ತಿದ್ದಾನೆ. ಪಾಂಡವರು – ಕೌರವರು ಒಟ್ಟಾಗಿ ಬಿಲ್ವಿದ್ಯೆ ಕಲಿತದ್ದು , ಕೌರವರ ಕಪಟಕ್ಕೆ ಒಳಗಾಗಿ ಅರಗಿನ ಅರಮನೆಗೆ ಹೋಗಿ ಅಲ್ಲಿ ಬೆಂಕಿಯಿಂದ ಪಾರಾಗಿ ಬಂದದ್ದು, ಮೋಸದಿಂದ ಪಗಡೆಯಾಟದಲ್ಲಿ ದಾಳದೊಂದಿಗೆ ಪಾಂಡವರನ್ನು ಉರುಳಿಸುವಂತೆ ಮಾಡಿದ್ದು, ದ್ರೌಪದಿಯ ವಸ್ತ್ರಾಪಹರಣವನ್ನು ಮಾಡಿ ಅವಳು ಬಿಚ್ಚಿದ ಈ ಜಡೆಯನ್ನು ದುಶ್ಯಾಸನ, ದುರ್ಯೋಧನರ ಸಾವಿನ ನಂತರ ಕಟ್ಟುವೆನೆಂದು ಪ್ರತಿಜ್ಞೆ ಮಾಡಿದ್ದಾಗ ಅರ್ಜುನ , ಭೀಮನಂತಹ ಮೂರು ಲೋಕದ ಗಂಡರು (ವೀರರು)ಎನಿಸಿಕೊಂಡು ಏನು ಮಾಡಲಾಗದೇ ಕೈ ಕಟ್ಟಿ ಕುಳಿತುಕೊಂಡು ಬರುವ ಕೋಪವನ್ನು ಭುಸುಗುಟ್ಟುತ್ತಾ ಏನು ಮಾಡಲಾಗದೇ ನರಳಿದ್ದು , ಪಗಡೆಯಾಟದಲ್ಲಿ ಸೋತು ಹನ್ನೆರಡು ವರ್ಷಗಳ ವನವಾಸದಲ್ಲಿ ಅಲೆದು ಅನುಭವಿಸಿದ್ದು ...... ಹೀಗೆ ನೆನಪಿನಾಳದಿಂದ ಘಟನೆಗಳ ಸರಪಳಿಯಲ್ಲಿ ಎಲ್ಲವೂ ಭೀಮನಿಗೆ ತನ್ನ ಕಣ್ ಮುಂದೆ ಬರುತ್ತಾ ಇರುವುದು.

ಕೆಟ್ಟ / ನೋವಿನ ಘಟನೆಗಳು ಎಷ್ಟೇ ಮರೆಯಲೂ ಪ್ರಯತ್ನಿಸಿದರೂ ಮತ್ತೆ ಮತ್ತೆ ನೆನಪಿಗೆ ಬಂದು ಎಲ್ಲಾವನ್ನೂ ಕಣ್ ಮುಂದೆ ತಂದಿಟ್ಟು ಮತ್ತೆ ಮತ್ತೆ ನಮ್ಮನ್ನು ಕೆಣಕುತಿರುತ್ತದೆ ಎಂಬುದಕ್ಕೆ ಈ ಘಟನೆಗಳು ಸಾಕ್ಷಿಯಾಗಿದೆ.

ನಿಟ್ಟುಸಿರಲ್ಲಿ ಪಟ ಬಿಚ್ಚಿ ತೇಲುತ್ತವೆ ಊರುಗಳು;
ಮಹಾರಣ್ಯಗಳು, ಋಷಿಗಳು, ರಾಕ್ಷಸರು : ಬೆಳಗು ಬೈಗುಗಳು,
ಇನ್ನೂ ಏನೇನೋ ಸುರುಳಿ ಬಿಚ್ಚುತ್ತವೆ
ಜೀವ ಹಿಂಡುತ್ತವೆ.

ಈ ಪದ್ಯಭಾಗದಲ್ಲಿ ಭೀಮನಿಗೆ ವನವಾಸದಲ್ಲಿ ಪಾಂಡವರು ಪಟ್ಟ ಪಾಡು, ಅನುಭವಿಸಿದ ಕಷ್ಟಗಳು, ನೆನಪಿಗೆ ಬರುತ್ತಿವೆ.ರಾಜ್ಯವನ್ನು ಬಿಟ್ಟು ಬಂದು ಕಾಡಿನಲ್ಲಿ ಅಲೆದದ್ದು , ನಡೆಯಲು ಅಸಾಧ್ಯವಾದಂತಹ ಮಹಾ ಅರಣ್ಯದಲ್ಲಿ ವಾಸವಾಗಿದ್ದು, ಅಲ್ಲಿಯೂ ನೆಮ್ಮದಿಯಿಂದ ಇರಲು ಬಿಡದಂತಹ ಹಿಡಿಂಬೆಯಂತಹ ರಾಕ್ಷಸರನ್ನು ಎದುರಿಸಿದ್ದು, ದ್ರೌಪದಿಯನ್ನು ಅಪಹರಿಸಿದವರನ್ನು ಎದುರಿಸಿ ಸೋಲಿಸಿ ಮತ್ತೆ ಕಾಡಿಗೆ ಕರೆತಂದದ್ದು........ ಹೀಗೆ ಇನ್ನೂ ಏನೇನೋ ನೆನಪಾಗುತ್ತಿದೆ, ಭೀಮನಿಗೆ. ಹಳೆಯ ನೆನಪುಗಳು ಭೀಮನಿಗೆ ಬಂದು ಅವನ ಜೀವವನ್ನು ಹಿಂಡುತ್ತಿದೆ.ಅದರರ್ಥ ವೀರನಾಗಿದ್ದೂ ಅನ್ಯಾಯ ನಡೆಯುವಾಗ ಏನು ಮಾಡಲಾಗದೇ ಹೇಡಿಯಂತೆ ಕೈ ಕಟ್ಟಿ ಕೂರಬೇಕಾದ ಸಂದರ್ಭಗಳನ್ನು ನೆನಪು ಮಾಡಿಕೊಂಡ ಅವನಿಗೆ ಜೀವ ಹಿಂಡುದಂತಾಗುತ್ತದೆ.

ವೀರನಾಗಿದ್ದರೂ, ಬಲಶಾಲಿಯಾಗಿದ್ದರೂ ಕೂಡ ಅನಿವಾರ್ಯವಾಗಿ ತಲೆತಗ್ಗಿಸಬೇಕಾಗಿ ಬಂದ ಸಂದರ್ಭವನ್ನು ನೆನಪಿಸುವ ಚಿತ್ರಣ ಇಲ್ಲಿದೆ.

ಅಲ್ಲಿ ಊರಾಚೆ ಮಸಣದಲ್ಲಿ
ಇದ್ದ ಪೌರುಷವನ್ನು ದುಂಡಗೆ ಸುತ್ತಿ
ಹೆಣವಾಗಿ ಮಲಗಿಸಿದ್ದೇವೆ, ಮರದ ಕೊಂಬೆಯ ಮೇಲೆ.

ಈ ಪದ್ಯಭಾಗದಲ್ಲಿ ವನವಾಸವನ್ನು ಮುಗಿಸಿ ಅಜ್ಞಾತವಾಸಕ್ಕೆ ಹೊರಡುವ ಮೊದಲು ಪಾಂಡವರು ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನೆಲ್ಲಾ ಬನ್ನಿ ಮರದ (ಶಮಿ ವೃಕ್ಷ) ಮೇಲೆ ಅಡಗಿಸಿ , ಯಾರೂ ಅದರ ಹತ್ತಿರ ಬರಬಾರದೆಂಬುದಕ್ಕೆ ಆ ಶಸ್ತ್ರಾಸ್ತ್ರಗಳನ್ನೆಲ್ಲಾ ಹೆಣದ ಹಾಗೆ ಮಲಗಿಸಿದ್ದಾರೆ , ಆ ಬನ್ನಿ ಮರದ ಮೇಲೆ. ಇಲ್ಲಿ ಭೀಮ ಹೇಳುವ ಮಾತು ಪ್ರಮುಖವಾದುದು – ಪೌರುಷವನ್ನು ದುಂಡಗೆ ಸುತ್ತಿ ಹೆಣವಾಗಿ ಮಲಗಿಸಿದ್ದೇವೆ ಅಂದರೆ ಅಲ್ಲಿ ಕೇವಲ ನಮ್ಮ ಶಸ್ತ್ರಗಳನ್ನಲ್ಲ ನಮ್ಮ ಪೌರುಷವನ್ನು ಹೆಣದಂತೆ ಮಲಗಿಸಿ ಇಲ್ಲಿಗೆ ಬಂದಿದ್ದೇವೆ ಎಂಬ ಹಿನ್ನಲೆಯಲ್ಲಿ ಹೇಳಿದ್ದಾನೆ.ಪಾಂಡವರನ್ನು ಮೂರು ಲೋಕದ ಗಂಡರು (ವೀರರು) ಎಂದು ಕರೆಯುವುದು ರೂಢಿ.ಅಂತಹ ನಾವು ನಮ್ಮಲ್ಲಿದ್ದ ಪೌರುಷವನ್ನು ಆ ಮರದ ಕೊಂಬೆಯ ಮೇಲೆ ಹೆಣವಾಗಿ ಮಲಗಿಸಿ ಬಂದಿದ್ದೇವೆ ಎಂಬ ನುಡಿಯಲ್ಲಿ ಪರಿಸ್ಥಿತಿಗೆ ನಾವು ಸೋತು ಬಲವಿದ್ದು ಬಲವಿಲ್ಲದವರಾಗಿದ್ದೇವೆ ಎಂಬ ವ್ಯಂಗ್ಯತೆ ಇಲ್ಲಿ ಅಡಕವಾಗಿರುವುದನ್ನು ಕಾಣಬಹುದು.

ಕೆಲವೊಮ್ಮೆ ಶಕ್ತಿ ಎಷ್ಟೇ ಇದ್ದರೂ ಯುಕ್ತಿಯಿಂದ ಗೆಲ್ಲಬೇಕಾದ ಅನಿವಾರ್ಯತೆ ಇರುತ್ತದೆ.ಹಾಗಾಗಿ ನಮ್ಮತನವನ್ನು ಕಳೆದುಕೊಂಡು ಬದುಕಬೇಕಾದ ಸಂದರ್ಭಗಳಿವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ನೋಡುತ್ತೇನೆ, ಸುತ್ತಲೂ ಎಂತೆಂಥವೋ
ವಿಜೃಂಭಿಸಿ ಮೀಸೆ ತಿರುವುತ್ತವೆ
ಏರಬಾರದ ಕಡೆ ಏರಿ, ಇಳಿಯಬಾರದ ಕಡೆಗೆ
ಇಳಿದು ಕೆಡೆಸಿ ಹೊಲಸೆಬ್ಬಿಸಿವೆ.

ಈ ಪದ್ಯಭಾಗದಲ್ಲಿ ಭೀಮನ ಮಾತುಗಳು ಮುಂದುವರೆಯುತ್ತಿದೆ. ನಾನು ನೋಡುತ್ತಾ ನಿಂತಿರುವೆ ಸುತ್ತಲೂ ಎಂತೆಂಥವೋ

ವಿಜೃಂಭಿಸಿ ಮೀಸೆ ತಿರುವುತ್ತವೆ. ಅಂದರೆ ವಿರಾಟನ ಬಾಮೈದ (ಸುದೇಷ್ಣೆಯ ತಮ್ಮ) ಕೀಚಕ ಭೀಮನ ಮೇಲೆ ಕಣ್ಣು ಹಾಕಿರುವುದು, ತನ್ನ ಮಿತಿಯನ್ನು ಅರಿಯದೇ ದ್ರೌಪದಿಗೆ ಹಿಂಸೆಯನ್ನು ನೀಡುತ್ತಿರುವುದಾಗಲೀ ಅಥವಾ ಈ ಹಿಂದೆ ದ್ರೌಪದಿಯ ವಸ್ತ್ರಾಪಹರಣವನ್ನು ಮಾಡಿಸಿದ ಮೀಸೆ ತಿರುವಿದ ದುರ್ಯೋಧನನ ಅಹಂಕಾರವಾಗಲೀ, ದುಶ್ಯಾಸನನ ಅನೀತಿಯಾಗಲಿ ಎಲ್ಲರೂ ತಮ್ಮ ಶಕ್ತಿ ಸಾಮರ್ಥ್ಯವನ್ನು ಅರಿಯದೇ ಅನ್ಯಾಯದ ಮಾರ್ಗದಲ್ಲಿ ನಡೆದಿದ್ದಾರೆ ಎಂದುದನ್ನೇ ಏರಬಾರದ ಕಡೆ ಏರಿ, ಇಳಿಯಬಾರದ ಕಡೆಗೆ ಇಳಿದು ಕೆಡಿಸಿ ಹೊಲಸೆಬ್ಬಿಸಿವೆ ಎನ್ನುವ ಮೂಲಕ ಎಲ್ಲೆಡೆ ಕೆಟ್ಟದ್ದು ವಿಜೃಂಭಿಸುತ್ತಿದೆ, ಎಲ್ಲವನ್ನೂ ಹಾಳು ಮಾಡಿದೆ ಎಂದು ಭೀಮ ನೆನಪಿಸಿಕೊಳ್ಳುತ್ತಿದ್ದಾನೆ.

ಒಳ್ಳೆತನಕ್ಕೆ ಕೆಟ್ಟದ್ದೆ ನಡೆಯುತ್ತಿರುತ್ತವೆ.ಕೆಟ್ಟತನಗಳು ತಮ್ಮ ಪ್ರತಾಪವನ್ನು ಕೆಚ್ಚೆದೆಯಿಂದ ತೋರಿ ಮೆರೆಯುತ್ತಾ ವಿಜೃಂಭಿಸುವ ಸನ್ನಿವೇಶವನ್ನು ಇಲ್ಲಿ ತಿಳಿಸಲಾಗಿದೆ.

ಗೆರೆ ದಾಟಬಾರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ ಪಾತ್ರೆಗಳಲಿ
ಕೊತ ಕೊತ ಕುದಿದು ಕಾಯುತ್ತಿದ್ದೇನೆ.

ಪದ್ಯದ ಕೊನೆಯಲ್ಲಿ ಭೀಮ ಎಲ್ಲವನ್ನೂ ಸಹಿಸಿಕೊಂಡು ಇರಲೇ ಬೇಕಾದ ಸ್ಥಿತಿಯನ್ನು ಹೇಳಿಕೊಂಡಿದ್ದಾನೆ. ತಮ್ಮ ಅಣ್ಣ ಧರ್ಮರಾಯನ ಮಾತಿನ ಗೆರೆಯನ್ನು ದಾಟ ಬಾರದೆಂದು ಎಲ್ಲದಕ್ಕೂ ಕಾಯುತ್ತಿದ್ದೇನೆ. ಹೇಗೆ ಸೌದೆಗಳ ಉರಿದು ಪಾತ್ರೆಗಳಲ್ಲ ಕೊತ ಕೊತ ಕುದಿಯುತ್ತಿರುವುದೋ ಹಾಗೇ ಒಳಗೊಳಗೇ ಕುದಿದು ಕುದಿದು ಕಾಯುತ್ತಿದ್ದೇನೆ ಒಳ್ಳೆಯ ಸಮಯಕ್ಕಾಗಿ, ನನ್ನ ಬಲವನ್ನು ಸಾಬೀತುಪಡಿಸಿಕೊಳ್ಳುವ ಕ್ಷಣಕ್ಕಾಗಿ, ಅನ್ಯಾಯಕ್ಕೆ ಪ್ರತೀಕಾರವನ್ನು ತೀರಿಸಿಕೊಳ್ಳುವ ಸಲುವಾಗಿ, ಅಧರ್ಮ ಅಳಿದು ಧರ್ಮ ಉಳಿಯುವಂತೆ ಮಾಡಲು, ಎಲ್ಲಕ್ಕಾಗಿ ಒಳಗೊಳಗೆ ಕೋಪ, ತಾಪಗಳು ಏನೇ ಬಂದರೂ ಎಲ್ಲವನ್ನೂ ಸಹಿಸಿಕೊಂಡು ಕಾಯುತ್ತಿದ್ದೇನೆ ತಮ್ಮಣ್ಣನ ಮಾತಿನ ಗೆರೆ ದಾಟಬಾರದೆಂದು ಕುದಿಯುತ್ತಾ ಕಾಯುತ್ತಿದ್ದೇನೆ ಎಂದು ಭೀಮ ತನ್ನಲ್ಲಿ ಹೇಳಿಕೊಳ್ಳುತ್ತಿದ್ದಾನೆ.

ಪರಿಸ್ಥಿತಿ , ಸನ್ನಿವೇಶಗಳು ಕೆಲವೊಮ್ಮೆ ಏನು ಮಾಡಲಾಗದಂತೆ ನಮ್ಮನ್ನೆಲ್ಲಾ ತನ್ನ ಬಾಹುಬಂಧನದಲ್ಲಿ ಬಂಧಿಸಿಟ್ಟಿರುತ್ತದೆ.ಅದರಿಂದ ಪಾರಾಗಲು ಕೆಲ ಸಮಯ ತಾಳ್ಮೆಯಿಂದ ಇರಬೇಕಾದ ಅನಿವಾರ್ಯತೆ ಇರುತ್ತದೆ ಎಂಬ ಸತ್ಯವನ್ನು ಇಲ್ಲಿ ತಿಳಿಸಲಾಗಿದೆ.

ಹೀಗೆ ಸಣ್ಣ ಕವನದಲ್ಲಿ ಪ್ರಮುಖ ಘಟನೆಗಳನ್ನೆಲ್ಲಾ ತಿಳಿಸುವ ಪ್ರಯತ್ನ ವನ್ನು ಜಿ.ಎಸ್.ಎಸ್. ಮಾಡಿದ್ದಾರೆ.ಯಾವುದನ್ನು ವಿವರಣಾತ್ಮಕವಾಗಿ ತಿಳಿಸದೇ ಕರಿ(ಆನೆ)ಯನ್ನು ಕನ್ನಡಿಯಲ್ಲಿ ಹಿಡಿದಿಡುವಂತೆ ಇಡೀ ಮಹಾಭಾರತದ ಪ್ರಮುಖ ಪ್ರಸಂಗಗಳನ್ನು ಈ ಸಣ್ಣ ಕವನದಲ್ಲಿ ಅಡಕವಾಗಿಸಿಟ್ಟುರುವುದು ಜಿ.ಎಸ್.ಎಸ್ ಅವರ ವಿನೂತನ ಹಾಗೂ ವಿಶಿಷ್ಟ ಪ್ರಯೋಗ ಎನ್ನಬಹುದು.

–ರಾಘವೇಂದ್ರ ಸಿ.ಎಸ್.,
ಮೊ.: 9036389640

ಜೆಎಸ್‌ಎಸ್ ಸಂಗೀತ ಸಭಾ ಸಂಗೀತ ಸಮ್ಮೇಳನಕ್ಕೆ ತೆರೆ

ವಿದ್ವಾನ್ ವಿ.ನಂಜುಂಡಸ್ವಾಮಿಗಳಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿ ಪ್ರಧಾನ



ವಿದ್ವಾನ್ ವಿ.ನಂಜುಂಡಸ್ವಾಮಿ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಮಂಗಳವಾರ ಪ್ರಧಾನ ಮಾಡಲಾಯಿತು. ಇದೇ ವೇಳೆ ನಂಜುಂಡಸ್ವಾಮಿ ದಂಪತಿಯನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಡಿ.6(ಎಸ್‌ಪಿಎನ್)– ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮರಣಾರ್ಥ ಈ ಸಾಲಿನ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ವಿದ್ವಾನ್ ವಿ.ನಂಜುಂಡಸ್ವಾಮಿ ಅವರಿಗೆ ಹಿರಿಯ ಸಂಗೀತ ಕಲಾವಿದ ಎಚ್.ಕೆ.ವೆಂಕಟ ರಾಮ್ ಮಂಗಳವಾರ ಪ್ರಧಾನ ಮಾಡಿದರು.

ಮೈಸೂರು ಸರಸ್ವತಿ ಪುರಂ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಐದು ದಿನಗಳ ಸಂಗೀತ ಸಮ್ಮೇಳನದ ಮುಕ್ತಾಯ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಿ, ಅವರು ಮಾತನಾಡಿದರು.

ಕಲಾವಿದ, ಕಲೆಯಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ದಿನನಿತ್ಯ ಹೊಸತನ ಹುಡುಕಾಟದಲ್ಲಿರುತ್ತಾನೆ. ಸಂಗೀತ ಸಮ್ಮೇಳನ, ಕಛೇರಿಗಳು ಕಲಾವಿದನಿಗೆ ಪಾಠ ಶಾಲೆಗಳಿದ್ದಂತೆ. ಕೇಳುವುದರ ಜೊತೆಗೆ ಕಲಿಯುವುದು ಬಹುಮುಖ್ಯ ಎಂದ ಅವರು, ಕೆಲ ಸಂಗತಿಗಳು ಕಲಾವಿದನಿಗೆ ತಿದ್ದಿಕೊಳ್ಳುವ ಸಂದರ್ಭ ಇದಾಗಿರುತ್ತದೆ. ಹಾಗಾಗಿ ಕಲಿಕೆಯಲ್ಲಿರುವ ಕಲಾವಿದನಿಗೆ ಸೃಜನತ್ವಕ್ಕೆ ಕೊನೆ ಎಂಬುದಿಲ್ಲ. ಅದೊಂದು ನಿರಂತರ ಪ್ರಕ್ರಿಯ ಎಂದು ಅಭಿಪ್ರಾಯಪಟ್ಟರು.

'ಮರೆಗುಳಿ' ಸಮಸ್ಯೆ ಯಾವೊಬ್ಬ ಸಂಗೀತಗಾರನಿಗೂ ಬಾಧಿಸಿರುವುದನ್ನು ನನ್ನ ಜೀವಮಾನದಲ್ಲಿ ಕೇಳಿಲ್ಲ. ಹಾಗಾಗಿ ಕಲಾವಿದನ ಮನಸ್ಸು ಕ್ರಿಯಾಶೀಲವಾಗಿರುತ್ತದೆ. ಹಾಗಾಗಿ ಸಂಗೀತ ಕಲಿತವರು ಸದಾ ಚಟುವಟಿಕೆಯಿಂದ ಇರುತ್ತಾರೆ. ಕಲಾವಿದನಿಗೆ 90 ವರ್ಷವಾದರೂ ಸದಾ ಜಾಗರೂಕತೆ, ಚುರುಕಿನಿಂದ ಇರುತ್ತಾರೆ. ಹಾಗಾಗಿ ಪ್ರತಿಯೊಬ್ಬರು ಕಲೆಯ ಒಡನಾಟ ಬೆಳೆಸಿ ಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ರಾಗಗಳು ಒಂದೊಂದು ಸಂಗೀತ ಕಛೇರಿಯಲ್ಲಿ ಒಂದೊಂದು ಅನುಭವ ನೀಡುತ್ತವೆ. ಇಂದು ಇದೇ ವೇದಿಕೆಯಲ್ಲಿ ಹಾಡಿದ 'ತೋಡಿ' ರಾಗ, ನಾಳೆ ಬೇರೆ ವೇದಿಕೆಯಲ್ಲಿ ಬೇರೆಯ ಅನುಭವ ನೀಡುತ್ತದೆ. ಹಾಗಾಗಿ ಸಂಗೀತದ ಮಜಲುಗಳು ಸದಾ ಬದಲಾವಣೆ ಬಯಸುತ್ತವೆ ಎಂದರಲ್ಲದೆ, ಸಮ್ಮೇಳನಗಳನ್ನು ನಡೆಸುವುದು ಸುಲಭದ ಮಾತಲ್ಲ. ಸಮಾನ ಮನಸ್ಕರು ಜೊತೆಯಾಗಿರಬೇಕು. ಅಂತೆಯೇ ಕೇಳುಗ ವರ್ಗವನ್ನೂ ಸೆಳೆಯುವಂತಿರಬೇಕು. ಆಗ ಇಂತಹ ಬೃಹತ್ ಸಂಗೀತ ಸಮ್ಮೇಳನ ಯಶಸ್ವಿಯಾಗಲು ಸಾಧ್ಯ. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಪದಾಧಿಕಾರಿಗಳು ಶ್ರಮಿಸಿ, ಈ ಸಮ್ಮೇಳನ ಯಶಸ್ವಿಗೊಳಿಸಿದ್ದಾರೆ ಎಂದರೆ ತಪ್ಪಾಗಲಾರದು ಎಂದರು.

ನಾನು, ಸಂಗೀತದಲ್ಲಿ ತೊಡಗಿಸಿಕೊಂಡಾಗ ಸಿಗುವ ಅನುಭವ ಬೇರೆಲ್ಲೂ ಸಿಗದು. ಹಾಗಾಗಿ ಸಂಗೀತ ಕಲಿಯುವ ಯುವ ಪೀಳಿಗೆ, ಓದು, ಇತರೆ ಕೆಲಸಗಳ ನಡುವೆ ಭಂಡ ಧೈರ್ಯ ಮಾಡಿ ಸಂಗೀತ ಕಲಿಯಲು ಮುಂದಾಗಿ ಎಂದು ಸಲಹೆ ನೀಡಿದರು.

ಸಮ್ಮೇಳನದ ಅಧ್ಯಕ್ಷ ವಿದ್ವಾನ್ ವಿ.ನಂಜುಂಡಸ್ವಾಮಿ ಮಾತನಾಡಿದರು. ವಿದ್ವಾನ್ ಮೈಸೂರು ಎಂ.ಮಂಜುನಾಥ್, ಮೈಸೂರು ಎಂ.ನಾಗರಾಜ್, ಪ್ರೊ.ಕೆ.ರಾಮ ಮೂರ್ತಿರಾವ್ ಇದ್ದರು. 27ನೇ ಆವೃತ್ತಿಯ 'ಜೆಎಸ್‌ಎಸ್ ಸಂಗೀತ ಸಮ್ಮೇಳನ'ವು ಎಂ.ಬಿ.ಹರಿಹರನ್ ಹಾಗೂ ಎಸ್.ಅಶೋಕ್ ತಂಡದ 'ಯುಗಳ ಗಾಯನ'ದೊಂದಿಗೆ ತೆರೆ ಕಂಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಡಿಕೇರಿ ಜೈಲಿನ ವಿಚಾರಣಾಧೀನ ಕೈದಿ ಮೈಸೂರು ಕೆಆರ್ ಆಸ್ಪತ್ರೆಯಲ್ಲಿ ಸಾವು

ಮೈಸೂರು/ಗೋಣಿಕೊಪ್ಪ, ಡಿ.6– ಮಡಿಕೇರಿ ಜಿಲ್ಲಾ ಕಾರಾಗೃಹದ ವಿಚಾರಣಾಧೀನ ಕೈದಿಯೊಬ್ಬ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮಂಗಳವಾರ ಸಾವನ್ನಪ್ಪಿದ್ದಾನೆ. ಗೋಣಿಕೊಪ್ಪ ಗ್ರಾಮದ ಸುಬ್ರಮಣ್ಯ ಅಲಿಯಾಸ್ ಪಟ್ಟ (23) ಮೃತಪಟ್ಟ ಕೈದಿ. ಗೋಣಿಕೊಪ್ಪ ಗ್ರಾಮ ಪಂಚಾಯ್ತಿಯಲ್ಲಿ ಸ್ವಚ್ಛತಾ ಕಾರ್ಮಿಕನಾಗಿದ್ದ ಈತ, ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ 8–9 ತಿಂಗಳ ಹಿಂದೆ ಮಡಿಕೇರಿ ಜಿಲ್ಲಾ ಕಾರಾಗೃಹ ಸೇರಿದ್ದ. ಅನಾರೋಗ್ಯ ಕಾರಣದಿಂದ ಸೋಮವಾರ ಮಧ್ಯಾಹ್ನ ಕೆ.ಆರ್. ಆಸ್ಪತ್ರೆಗೆ ಕರೆತಂದು ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ ಸಾವನ್ನಪ್ಪಿದ್ದಾಗಿ ಪೊಲೀಸರು ತಿಳಿಸಿದ್ದಾರೆ.


ಸುಬ್ರಮಣ್ಯ

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.

ಸಂಬಂಧಿಕರ ಆರೋಪ: ಸುಬ್ರಮಣ್ಯನಿಗೆ ಕಿಡ್ನಿ ಸಮಸ್ಯೆ ಇತ್ತು. ನಿನ್ನೆ ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋದಾಗ ಮೈಸೂರಿಗೆ ಕರೆದುಕೊಂಡು ಹೋಗುವಂತೆ ವೈದ್ಯರು ತಿಳಿಸಿದ್ದರಿಂದ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದೆವು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಗಿ ಇಂದು ಬೆಳಗ್ಗೆ ಪೊಲೀಸರು ತಿಳಿಸಿದರು. ಕಳೆದ ಬಾರಿ ವಿಚಾರಣೆಗೆ ನ್ಯಾಯಾಲಯಕ್ಕೆ ಕರೆತಂದಿದ್ದಾಗ ಸುಬ್ರಮಣ್ಯ ಆರೋಗ್ಯವಾಗಿದ್ದ. ತಿಂಗಳಲ್ಲೇ ಕಿಡ್ನಿ ಸಮಸ್ಯೆ ಇಷ್ಟೊಂದು ಗಂಭೀರವಾಗಲು ಸಾಧ್ಯವೇ. ಇಲ್ಲಿಗೆ ಕರೆತರುವ ಸಂದರ್ಭದಲ್ಲೇ ವಿಷಯ ತಿಳಿಸಬಹುದಿತ್ತಲ್ಲವೇ. ಪೊಲೀಸರೇ ಹಲ್ಲೆ ಮಾಡಿ ಸಾವಿಗೆ ಕಾರಣರಾಗಿರಬಹುದು ಎಂದು ಸುಬ್ರಮಣ್ಯನ ಸಂಬಂಧಿಕರು ಆರೋಪಿಸಿದ್ದಾರೆ.

ಕೈದಿಗೂ ಬದುಕುವ ಹಕ್ಕಿದೆ. ಸುಬ್ರಮಣ್ಯನ ಸಾವಿನ ಬಗ್ಗೆ ಸಂಬಂಧಿಕರು ಅನುಮಾನ ವ್ಯಕ್ತಪಡಿಸಿರುವುದರಿಂದ ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ಈ ಬಗ್ಗೆ ಮಾನವ ಹಕ್ಕುಗಳ ಆಯೋಗಕ್ಕೂ ದೂರು ನೀಡಲಿದ್ದೇವೆ. ಸುಬ್ರಮಣ್ಯನಿಗೆ ಅನ್ಯಾಯವಾಗಿದ್ದರೆ ಆತನ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕು. ಇದಕ್ಕಾಗಿ ಆಗ್ರಹಿಸುವ ನಿಟ್ಟಿನಲ್ಲಿ ನಾಳೆ (ಬುಧವಾರ) ಬೆಳಗ್ಗೆ 11ಕ್ಕೆ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಬಳಿ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘ, ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಅಭಿವೃದ್ಧಿ ಸಂಘ ಹಾಗೂ ಆದಿದ್ರಾವಿಡ ಟ್ರಸ್ಟ್ ಸಹಯೋಗದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಡಿ.ಆರ್.ರಾಜು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದ ಬಳಿ ತಿಳಿಸಿದ್ದಾರೆ.

ಹೃದಯಾಘಾತದಿಂದ ಕರ್ತವ್ಯನಿರತ ಅಗ್ನಿಶಾಮಕ ಅಧಿಕಾರಿ ಸಾವು

ಮೈಸೂರು,ಡಿ.6(ಆರ್‌ಕೆ)–ತೀವ್ರ ಹೃದಯಾಘಾತದಿಂದ ಮೈಸೂರಿನ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಎಂ.ಶಿವಸ್ವಾಮಿ(57) ಮಂಗಳವಾರ ನಿಧನರಾದರು.



ಬನ್ನಿಮಂಟಪದ ಅಗ್ನಿಶಾಮಕ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವರು, ಮಧ್ಯಾಹ್ನ 12 ಗಂಟೆಗೆ ಎದೆನೋವು ಕಾಣಿಸಿಕೊಂಡು ಕುಸಿದರು. ತಕ್ಷಣ ಅವರನ್ನು ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಸಂಜೆ ಸುಮಾರು 4.15 ಗಂಟೆಯಲ್ಲಿ ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತ್ನಿ ಎಂ.ನಾಗರತ್ನ, ಪುತ್ರಿ ಹರ್ಷಿತ, ಅಳಿಯ ಪ್ರಸನ್ನ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಮೈಸೂರಿನ ಶ್ರೀರಾಂಪುರದ ನಾಯ್ಡು ಸ್ಟೋರ್ ಬಳಿಯ ನಿವಾಸದಲ್ಲಿ ಪಾರ್ಥಿವ ಶರೀರ ಇರಿಸಲಾಗಿದ್ದು, ನಾಳೆ (ಡಿ.7) ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿ.ನರಸೀಪುರ ತಾಲೂಕಲ್ಲಿ ಚಿರತೆ ಹಾವಳಿ ಹಿನ್ನೆಲೆ

ಇಂದಿನಿಂದ 10 ದಿನ ಪಂಪ್‌ಸೆಟ್‌ಗೆ ಹಗಲು ವಿದ್ಯುತ್ ಪೂರೈಕೆ

ಮೈಸೂರು, ಡಿ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಚಿರತೆ ಹಾವಳಿ ತೀವ್ರವಾಗಿರುವುದರಿಂದ, ಅರಣ್ಯ ಇಲಾಖೆ ಚಿರತೆ ಸೆರೆ ಹಿಡಿಯುವ ವಿಶೇಷ ಕಾರ್ಯಾಚರಣೆ ಕೈಗೊಂಡಿರುವುದರಿಂದ ತಾಲೂಕು ವ್ಯಾಪ್ತಿಯಲ್ಲಿನ ಐ.ಪಿ, ಸೆಟ್ ಫೀಡರ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಸಲಾಗುತ್ತಿದ್ದ ಅವಧಿಯನ್ನು ಮಾರ್ಪಡಿಸಿ ಡಿ.7ರಿಂದ 16 ರವರೆಗೆ (10 ದಿನಗಳು) ಹಗಲು ವೇಳೆಯಲ್ಲಿ ಬೆಳಗ್ಗೆ 8.30ರಿಂದ ಸಂಜೆ 6 ಗಂಟೆ ಅವಧಿಯಲ್ಲಿ 7 ಗಂಟೆಗಳ 3 ಫೇಸ್ ವಿದ್ಯುತ್ ಸರಬರಾಜನ್ನು 2 ಪಾಳಿಗಳಲ್ಲಿ ಪೂರೈಸಲಾಗುವುದು ಎಂದು ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜಿನಿಯರ್ ತಿಳಿಸಿದ್ದಾರೆ.



ಫ್ಯಾಷನ್ ಶೋ, ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ಮೈಸೂರು,ಡಿ.6(ಪಿಎಂ)– ತಿಬ್ಬಾಸ್ ಗ್ರೂಪ್ ಮಾಡಲಿಂಗ್ ಕಂಪನಿ ವತಿಯಿಂದ ಇತ್ತೀಚೆಗೆ ನ್ಯಾಷನಲ್ ಐಕಾನ್ ಮಾಡೆಲ್‌ಹಂಟ್ ಸೀಸನ್–2 ರಾಷ್ಟ್ರಮಟ್ಟದ ಫ್ಯಾಷನ್ ಶೋ ಸ್ಪರ್ಧೆ ನಡೆಸಲಾಯಿತು ಎಂದು ಕಂಪನಿ ಸಂಸ್ಥಾಪಕ ಡಿ.ಸಿ.ನಾಗೇಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.4ರಂದು ಮೈಸೂರಿನ ಕಿಂಗ್ಸ್ ಎಲ್ಡನ್ ರೆಸಾರ್ಟ್‌ನಲ್ಲಿ ಫ್ಯಾಷನ್ ಶೋ ಸ್ಪರ್ಧೆ ನಡೆಯಿತು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿನ ಸಾಧಕರನ್ನು ಸನ್ಮಾನಿಸಲಾಯಿತು ಎಂದರು.

ಫ್ಯಾಷನ್ ಶೋ ಸ್ಪರ್ಧೆಯು 10 ವಿಭಾಗಗಳಲ್ಲಿ ನಡೆಯಿತು. 2ರಿಂದ 6 ವರ್ಷದ ಲಿಟಲ್ ಪ್ರಿನ್ಸ್ ವಿಭಾಗದಲ್ಲಿ ಅತೀಶ್ ಪ್ರಸಾದ್ ಪ್ರಥಮ, ಲಿಟಲ್ ಪ್ರಿನ್ಸಸ್ ವಿಭಾಗದಲ್ಲಿ ಅಭೀರ ನಯನ ಪ್ರಥಮ, ಪಿ.ನೇಹ ದ್ವಿತೀಯ, 7ರಿಂದ 11 ವರ್ಷದ ಪ್ರಿನ್ಸ್ ವಿಭಾಗದಲ್ಲಿ ಪ್ರಥಮ್ ಪ್ರಥಮ, ನಮಿತ್ ದ್ವಿತೀಯ, ಪ್ರಿನ್ಸೆಸ್ ವಿಭಾಗದಲ್ಲಿ ಲಿಯಾನ ಪ್ರಥಮ, ಹಿತಪೂಜಾರಿ ದ್ವಿತೀಯ, 12ರಿಂದ 17 ವರ್ಷದ ಮಿಸ್ಟರ್ ಟೀನ್ ವಿಭಾಗದಲ್ಲಿ ಸಮೀರ್ ಪ್ರಥಮ, ಮಿಸ್ ಟೀನ್ ವಿಭಾಗದಲ್ಲಿ ಹರ್ಷಿತಾ ಪ್ರಥಮ, ಭವಾನಿಕೀರ್ತನಾ ದ್ವಿತೀಯ ಸ್ಥಾನ ಗಳಿಸಿದರು ಎಂದರು. 18ರಿಂದ 30 ವರ್ಷದ ಮಿಸ್ಟರ್ ವಿಭಾಗದಲ್ಲಿ ಹರ್ಷ, ಸತ್ತರ್, ಮಿಸ್ ವಿಭಾಗದಲ್ಲಿ ನಿಸರ್ಗ, ಡಜ್ಲಲಿಂಗ್, 25ರಿಂದ 55 ವರ್ಷದ ಮ್ಯಾರೀಡ್ ಮನ್ ವಿಭಾಗದಲ್ಲಿ ನಂದಕುಮಾರ್, ಹರ್ಷಿತ್, ಮ್ಯಾರೀಡ್ ವುಮೆನ್ ವಿಭಾಗದಲ್ಲಿ ಸೀಮಾಬೋಪಯ್ಯ, ಲಾವಣ್ಯ ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನಗಳನ್ನು ಪಡೆದರು ಎಂದು ತಿಳಿಸಿದರು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಶಿವಾನಿ ನಾಗೇಶ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ವಿಜೇತರಾದವರಲ್ಲಿ ಹಲವರು ಗೋಷ್ಠಿಯಲ್ಲಿದ್ದರು.

ಡಿ.10, 11ರಂದು ಉದ್ಯೋಗ, ಆಹಾರ ಮೇಳ

ಮೈಸೂರು,ಡಿ.6(ಪಿಎಂ)– ಕಾವೇರಿ ಅಭ್ಯುದಯ ಪ್ರತಿಷ್ಠಾನ ಟ್ರಸ್ಟ್, ಆಶೀರ್ವಾದ್ ಮಾಂಟೆಸ್ಸರಿ ಸ್ಕೂಲ್ ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಜಂಟಿ ಆಶ್ರಯದಲ್ಲಿ ಡಿ.10 ಮತ್ತು 11ರಂದು ಉದ್ಯೋಗ ಮೇಳ, ಆಹಾರ ಮೇಳ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಸ್.ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿಜಯನಗರದ ಸಂಜೀವಯ್ಯ ಸ್ಮಾರಕ ವಿದ್ಯಾಸಂಸ್ಥೆ ಆವರಣದಲ್ಲಿ ಮೇಳ ಮತ್ತು ಕಾರ್ಯಕ್ರಮ ನಡೆಯಲಿದೆ. ಉದ್ಯೋಗ ಮೇಳದಲ್ಲಿ ಜಿಲ್ಲೆಯ ವಿವಿಧ ಕಂಪನಿಗಳು ಪಾಲ್ಗೊಳ್ಳಲಿದ್ದು, 18ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಯಾವುದೇ ನೋಂದಣಿ ಶುಲ್ಕವಿಲ್ಲದೆ, ಉಚಿತವಾಗಿ ಭಾಗವಹಿಸಬಹುದು. ಇದಲ್ಲದೆ, ಆಹಾರ ಮೇಳ ಸಹ ಆಯೋಜಿಸಿದ್ದು, ಸಂಜೆ 5ರಿಂದ 8ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ಮೊ.ಸಂ. 90082 54294 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಭಗವಾನ್ ಆರೋಗ್ಯದಲ್ಲಿ ಕೊಂಚ ಚೇತರಿಕೆ

ಬೆಂಗಳೂರು: ಕನ್ನಡ ಸಿನಿಮಾ ರಂಗದ ಹಿರಿಯ ನಿರ್ದೇಶಕ ಭಗವಾನ್ ಅವರ ಆರೋಗ್ಯದಲ್ಲಿ 3 ದಿನಗಳ ಹಿಂದೆ ಏರುಪೇರಾಗಿತ್ತು. ಕೂಡಲೇ ಅವರನ್ನು ಬೆಂಗಳೂರಿನ ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಿನ್ನೆ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಸದ್ಯ ಸಿಕ್ಕಿರುವ ಮಾಹಿತಿ ಪ್ರಕಾರ, ಭಗವಾನ್ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಡಾ.ಮಂಜುನಾಥ್ ಅವರು ಭಗವಾನ್‌ಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಬಹುರೂಪಿ ರಂಗೋತ್ಸವದ ಚಿತ್ರಕಲಾ ಶಿಬಿರದಲ್ಲಿ ಕುಂಚದಲ್ಲಿ ಮೂಡಿದ 'ಭಾರತೀಯತೆ' ಬಿಂಬಿಸುವ ವೈವಿಧ್ಯಮಯ ವರ್ಣ ಕಲಾಕೃತಿಗಳು






ಮೈಸೂರು,ಡಿ.6(ಎಸ್‌ಪಿಎನ್)–ರಂಗಾಯಣ ಆವರಣದಲ್ಲಿ 22ನೇ ರಾಷ್ಟ್ರೀಯ ಬಹುರೂಪಿ ರಂಗೋತ್ಸವದ ಅಂಗವಾಗಿ ಆಯೋಜಿಸಿರುವ ಐದು ದಿನಗಳ ಚಿತ್ರಕಲಾ ಶಿಬಿರದಲ್ಲಿ 20ಕ್ಕೂ ಹೆಚ್ಚು ಕಾವಾ ವಿದ್ಯಾರ್ಥಿಗಳ ಕುಂಚದಲ್ಲಿ 'ಭಾರತೀಯತೆ' ಬಿಂಬಿಸುವ ವೈವಿಧ್ಯಮಯ, ವರ್ಣಮಯ ಕಲಾಕೃತಿಗಳು ಅದ್ಭುತವಾಗಿ ಮೂಡಿ ಬಂದಿವೆ.

ಚಿತ್ರಕಲಾವಿದರಲ್ಲಿ ನಾನಾ ಪರಿಕಲ್ಪನೆಯಲ್ಲಿ ಮೂಡಿರುವ 'ಭಾರತೀಯತೆ' ಕುರುತಾದ ತಮ್ಮ ಅನಿಸಿಕೆಗಳನ್ನು ಚಿತ್ರ ಕಲಾವಿದರು 'ಮೈಸೂರು ಮಿತ್ರ'ನ ಬಳಿ ಬಿಚ್ಚಿಟ್ಟರು. ಮೊದಲಿಗೆ ಕಾವಾದ 7ನೇ ಸೆಮಿಸ್ಟರ್ ವಿದ್ಯಾರ್ಥಿನಿ ಯು.ನಾಗಶ್ರೀ ಅವರ ಕೈಚಳಕದಲ್ಲಿ ಚಾರ್‌ಮಿನಾರ್, ಸಾಂಚಿಸ್ತೂಪ, ಇಂಡಿಯಾ ಗೇಟ್, ಅಶೋಕ ಚಕ್ರ, ಭಾರತ ನಕ್ಷೆ ಹಾಗೂ ಶಾಂತ ಸ್ವರೂಪ ನಾಲ್ಕು ತಲೆಯ ಸಿಂಹ(ಲಾಂಛನ) ಅದ್ಭುತವಾಗಿ ಮೂಡಿಬಂದಿವೆ. ಶಾಂತಿ ಸಂದೇಶ ಸಾರುವುದೇ ಈ ಚಿತ್ರಕಲೆಯ ಉದ್ದೇಶವಾಗಿದೆ ಎನ್ನುತ್ತಾರೆ ಯು.ನಾಗಶ್ರೀ.

ತಿರಂಗಾ ಮಾದರಿಯ ಚಿತ್ರವನ್ನು ರಚಿಸಿ, ಕೇಸರಿಯಲ್ಲಿ ರಾಷ್ಟ್ರೀಯ ಪ್ರಾಣಿ ಹುಲಿ, ಅಶೋಕ ಚಕ್ರ, ಗ್ರಾಮೀಣ ಭಾರತ ಪ್ರತಿನಿಧಿಸುವ ಹೊಲ ಹೂಳುತ್ತಿರುವ ರೈತ, ನರ್ತನ ಮಾಡುತ್ತಿರುವ ನವಿಲು ಚಿತ್ರ ಬಿಡಿಸಿದ್ದಾರೆ. ಇದು ಪ್ರಜಾಪ್ರಭುತ್ವ ಮಾದರಿಯ 'ಭಾರತೀಯತೆ' ಎನ್ನುತ್ತಾರೆ ವಿದ್ಯಾರ್ಥಿನಿ ಹರ್ಷಿತಾ. ನಿಸರ್ಗದ ಮಧ್ಯೆ ನಿಂತಿರುವ ಕಲಾವಿದನೊಬ್ಬ ನದಿ, ಭೂಮಿ, ವಿವಿಧ ಧರ್ಮೀಯರ ಪ್ರಾರ್ಥನಾ ಮಂದಿರಗಳು, ಸದಾ ಹಸಿರಿನಿಂದ ಕೂಡಿರುವ ವನಸಿರಿಯೇ 'ಭಾರತೀಯತೆ' ಎನ್ನುತ್ತಾರೆ ವಿದ್ಯಾರ್ಥಿ ಮಹೇಶ್ ಮಟ್ಟಿ.

ತಿರಂಗಾದಲ್ಲಿರುವ ಅಶೋಕ ಚಕ್ರದ ಕಡ್ಡಿಗಳು ನವಿಲು ರೀತಿ ನರ್ತಿಸುವ, ಭರತನಾಟ್ಯದ ಮುಖಭಾವ, ಕಾಲುಗೆಜ್ಜೆ ನಾದ, ಸ್ಥಾಯಿ ಭಾವ ಸೇರಿದಂತೆ ನೃತ್ಯಕಲೆಗೆ ಬೇಕಾಗಿರುವ ಆಂಗೀಕ ಅಭಿನಯದ ವಿವಿಧ ಭಂಗಿಗಳು ಹಾಗೂ ವಿವಿಧ ರಾಜ್ಯಗಳ ಭಾಷೆ ನೆಲೆಸಿರುವುದು ನಮ್ಮ ದೇಶದಲ್ಲಿ. ಹಾಗಾಗಿ ನನ್ನ ಮನಸ್ಸಿನಲ್ಲಿರುವ 'ಭಾರತೀಯತೆ' ಕಲ್ಪನೆ ಇದು ಎನ್ನುತ್ತಾರೆ ವಿದ್ಯಾರ್ಥಿನಿ ಸಿ.ಎಚ್.ಲಿಖಿತಾ.

ಭಾರತೀಯತೆ ಎಂದರೆ ದೊಡ್ಡ ಆಲದಮರವಿದ್ದಂತೆ. ಆಲದಮರದಲ್ಲಿ ವರ್ಣಮಯ ಸಾಂಸ್ಕೃತಿಕ ಕಲೆಗಳು ಆಶ್ರಯ ಪಡೆದಿವೆ. ಈ ಕಲೆಗಳನ್ನು ಜಗತ್ತಿನ ಬೇರೆ ರಾಷ್ಟ್ರಗಳಲ್ಲಿ ಕಾಣಲು ಸಾಧ್ಯವಿಲ್ಲ ಎಂಬುದು ನನ್ನ ಮನಸ್ಸಿನಲ್ಲಿರುವ ಕನಸಿನ 'ಭಾರತೀಯತೆ' ಎನ್ನುತ್ತಾರೆ ವಿದ್ಯಾರ್ಥಿ ಬಿ.ಸಂದೀಪ್ ಕುಮಾರ್. ಪ್ರಕೃತಿಯಲ್ಲಿ ಎಲ್ಲದ್ದಕ್ಕೂ ಸ್ಥಾನವಿದೆ. ಗಾಳಿ, ನೀರು, ಪ್ರಾಣಿ, ಪಕ್ಷಿ, ಮನುಷ್ಯರು ಸೇರಿದಂತೆ ಪ್ರತಿಯೊಂದು ಅದರ ಆಯುಷ್ಯಕ್ಕೆ ತಕ್ಕಂತೆ ಬದುಕುವ, ಜೀವಿಸುವ ಸ್ವಾತಂತ್ರ್ಯ ಪಡೆದಿವೆ. ಈ ಕಲ್ಪನೆಯಲ್ಲಿ ನಮ್ಮ 'ಭಾರತೀಯತೆ' ಇದೆ ಎನ್ನುತ್ತಾರೆ ವಿದ್ಯಾರ್ಥಿ ಬಿ.ಎ.ತಿಲಕ್ ಕುಮಾರ್.

ಭಾರತ ಜಾತಿ ಆಧಾರಿತ, ಧರ್ಮ ಆಧಾರಿತ ಪ್ರಜಾಪ್ರಭುತ್ವವಾದರೂ ಬಹುತ್ವದಲ್ಲಿ ಏಕತೆ, ಐಕ್ಯತೆ ಎಂಬುದು ನನ್ನಲ್ಲಿ ಈ ಕಲ್ಪನೆಯ 'ಭಾರತೀಯತೆ' ಎಂದು ಚಿತ್ರಕಲೆ ಕುರಿತು ವಿದ್ಯಾರ್ಥಿನಿ ಸಿ.ಸಾಯಿಚಂದನ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಜಗತ್ತಿನಲ್ಲಿ ವಾಸಿಸುವ ಪ್ರತಿಯೊಬ್ಬರು ಒಂದೊಂದು ವಿಷಯದಲ್ಲಿ ಜ್ಞಾನವಂತರು, ವಿಚಾರವಂತರು. ಅದರಲ್ಲೂ ಭಾರತದ ಯುವ ಸಮೂಹ ವೈವಿಧ್ಯಮಯ ವಿಚಾರವಂತಿಕೆಯಲ್ಲಿ ಬಹುತ್ವವನ್ನೇ ಚಿಂತಿಸುತ್ತಾರೆ. ಈ ಕಲ್ಪನೆಯಲ್ಲಿ 'ಭಾರತೀಯತೆ' ಅರ್ಥೈಸುವ ಚಿತ್ರ ಮೂಡಿ ಬಂದಿದೆ ಎನ್ನುತ್ತಾರೆ ವಿದ್ಯಾರ್ಥಿನಿ ಕಾವ್ಯ ಕೊಟಾರಿ.

ನನ್ನ ಕಣ್ಣು ಎಲ್ಲಿಯವರೆಗೂ ಕಾಣುತ್ತದೆಯೋ ಅಲ್ಲಿವರೆಗೂ ಸಮಾನ ದೃಷ್ಟಿಕೋನ, ಸಮಾನ ಪ್ರಜಾಪ್ರಭುತ್ವ ಆಚರಿಸುವುದೇ 'ಭಾರತೀಯತೆ' ಎನ್ನುತ್ತಾರೆ ವಿದ್ಯಾರ್ಥಿ ಯೋಗೇಶ್ ಆಚಾರ್ಯ. ಹಾಗೆಯೇ ಮತ್ತೋರ್ವ ವಿದ್ಯಾರ್ಥಿ ಎನ್.ಹರ್ಷ, ಭಾರತೀಯ ಕಲೆಗಳು ಬಹುರೂಪ ಪಡೆದಿವೆ. ಇದುವೆ 'ಭಾರತೀಯತೆ' ಎನ್ನುತ್ತಾರೆ ದರ್ಶನ್, ವೈಭವನಾಗ್, ಶ್ರದ್ಧಾ, ರಾಕೇಶ್.

ಗಡಿ ವಿವಾದ: ಬೆಳಗಾವಿಯಲ್ಲಿ ಮಹಾರಾಷ್ಟ್ರ ಲಾರಿಗಳ ಮೇಲೆ ಕಲ್ಲು ತೂರಾಟ, ಕಪ್ಪು ಮಸಿ ಬಳಿದು ಆಕ್ರೋಶ



ಬೆಳಗಾವಿ: ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದ ತೀವ್ರ ಸ್ವರೂಪ ಪಡೆಯುತ್ತಿದ್ದು, ಬೆಳಗಾವಿಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮಹಾರಾಷ್ಟ್ರ ಲಾರಿಗಳ ಮೇಲೆ ಕಲ್ಲು ತೂರಾಟ ನಡೆಸಿ, ಕಪ್ಪು ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪುಣೆಯಿಂದ ಬೆಂಗಳೂರಿಗೆ ಹೊರಟಿದ್ದ ಮಹಾರಾಷ್ಟ್ರ ನೋಂದಣಿವುಳ್ಳ ವಾಹನಗಳ ಮೇಲೆ ಕರವೇ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದ್ದು, ಲಾರಿಗಳ ಗಾಜು ಪುಡಿಪುಡಿಯಾಗಿದೆ. ಅಲ್ಲದೆ ಮಹಾರಾಷ್ಟ್ರ ನೋಂದಣಿ ಹಲವು ವಾಹನಗಳನ್ನು ತಡೆದು ನಂಬರ್ ಪ್ಲೇಟ್ ಮೇಲೆ ಕಪ್ಪು ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಮಹಾರಾಷ್ಟ್ರದ ಗಡಿ ಕ್ಯಾತೆ ಈಗ ಬೆಳಗಾವಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟು ಮಾಡಿದೆ. ಮಹಾರಾಷ್ಟ್ರ ನಾಯಕರು ನೀಡಿದ್ದ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಮಂಗಳವಾರ ನಡೆಸಲು ಉದ್ದೇಶಿಸಿರುವ ಬೃಹತ್ ಬಹಿರಂಗ ಸಭೆಯನ್ನು ನಿಷೇಧಿಸಲಾಗಿದೆ. ಇದರ ಜೊತೆಗೆ ಕರವೇ ನಾಯಕರ ಬೆಳಗಾವಿ ನಗರ ಪ್ರವೇಶಕ್ಕೂ ತಡೆಯೊಡ್ಡಲಾಗಿದೆ. ಬಹಿರಂಗ ಸಭೆ ನಡೆಸಲು ಕರವೇ ಕಾರ್ಯಕರ್ತರು ಬೆಳಗಾವಿಯತ್ತ ಮುನ್ನುಗ್ಗುತ್ತಿದ್ದು, ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಟೋಲ್‌ಗೇಟ್ ಬಳಿ ಅವರನ್ನು ತಡೆಯುಲು ಪೊಲೀಸರು ಸಜ್ಜಾಗಿದ್ದು, ಈ ಹಿನ್ನೆಲೆಯಲ್ಲಿ ಟೋಲ್ ಗೇಟ್ ಬಳಿ ಪರಿಸ್ಥಿತಿ ಉದ್ವಿಗ್ನಗೊಂಡಿದೆ.

ಗೆಲ್ಲುವ ವಿಶ್ವಾಸ ನಮಗಿದೆ

ಗಡಿ ವಿವಾದವನ್ನು ಮಹಾರಾಷ್ಟ್ರ ಹುಟ್ಟುಹಾಕಿದ್ದು, ಈ ಸಂಬಂಧದ ಕಾನೂನು ಹೋರಾಟದಲ್ಲಿ ಗೆಲ್ಲುವ ವಿಶ್ವಾಸ ನಮಗಿದೆ. ನಮ್ಮ ಗಡಿ ಮತ್ತು ಜನರನ್ನು ರಕ್ಷಿಸಲು ನಾವು ಬದ್ಧರಾಗಿದ್ದೇವೆ. ಅಷ್ಟೇ ಅಲ್ಲ ಮಹಾರಾಷ್ಟ್ರ, ಕೇರಳ, ತೆಲಂಗಾಣದಲ್ಲಿರುವ ಕನ್ನಡಿಗರ ರಕ್ಷಣೆಗೂ ಬದ್ಧರಾಗಿದ್ದೇವೆ. ಸರ್ಕಾರದ ಈ ನಿಲುವಿಗೂ ಚುನಾವಣೆಗೂ ಯಾವುದೇ ಸಂಬಂಧವಿಲ್ಲ, ಇದು ಮಹಾರಾಷ್ಟ್ರದ ದೀರ್ಘಾವಧಿಯ ವಿಷಯವಾಗಿದೆ. ಮಹಾರಾಷ್ಟ್ರದಿಂದಾಗಿ ಈ ವಿವಾದ ಸೃಷ್ಟಿಯಾಗಿದೆ. ಎರಡೂ ರಾಜ್ಯಗಳ ಜನರಲ್ಲಿ ಸಮನ್ವಯತೆ ಇದೆ, ಇದೀಗ ಗಡಿ ವಿವಾದ ಸುಪ್ರೀಂ ಕೋರ್ಟ್‌ನಲ್ಲಿದ್ದು, ಗೆಲ್ಲುವ ವಿಶ್ವಾಸ ನನಗಿದೆ.

–ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಬೆಳಗಾವಿ ಭೇಟಿ ರದ್ದಾಗಿಲ್ಲ: ಮಹಾರಾಷ್ಟ್ರ–ಕರ್ನಾಟಕ ಗಡಿ ಸಂಘರ್ಷ ಭುಗಿಲೆದ್ದಿದ್ದು, ನಮ್ಮ ಬೆಳಗಾವಿ ಭೇಟಿ ಮುಂದೂಡಿಕೆಯಾಗಿದೆ. ರದ್ದುಗೊಳಿಸಿಲ್ಲ ಎಂದು ಮಹಾರಾಷ್ಟ್ರ ಸಚಿವ ಸಂಭುರಾಜ್ ದೇಸಾಯಿ ಹೇಳಿದ್ದಾರೆ. ಬೆಳಗಾವಿ ಗಡಿ ಪ್ರದೇಶಕ್ಕೆ ಭೇಟಿ ನೀಡಬೇಕಾಗಿತ್ತು. ಈ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ತಿಳಿಸಿದ್ದೆವು. ಗಡಿ ಸಮಸ್ಯೆ ಕುರಿತು ಜನರೊಂದಿಗೆ ಚರ್ಚಿಸಲು ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವಿಷಯದಲ್ಲಿ ಶಾಂತಿಯುತ ಪರಿಹಾರವನ್ನು ಕಂಡುಕೊಳ್ಳಬೇಕು ಎಂದರು.

ಆದರೆ ಕರ್ನಾಟಕ ಗಡಿಯಲ್ಲಿ ನಾವು ಹೋಗಲು ಸಾಧ್ಯವಾಗದಂತೆ ಭಾರೀ ಪಡೆಗಳನ್ನು ನಿಯೋಜಿಸಲಾಗಿದೆ. ಕರ್ನಾಟಕ ಸಿಎಂ ಅವರ ಈ ಕ್ರಮ ಸರಿಯಲ್ಲ, ಎಲ್ಲಿಗೆ ಬೇಕಾದರೂ ಹೋಗಲು ಎಲ್ಲರಿಗೂ ಹಕ್ಕಿದೆ ಎಂದು ಅವರು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ವಾಗ್ದಾಳಿ ನಡೆಸಿದರು.

ನಾಳೆಯಿಂದ 'ಮೈ ನ್ಯೂಟ್ರಿಕಾನ್' ಶೀರ್ಷಿಕೆಯಡಿ ಪೌಷ್ಟಿಕಾಂಶ ಕುರಿತು ರಾಷ್ಟ್ರಮಟ್ಟದ ಸಮ್ಮೇಳನ



ಮೈಸೂರು,ಡಿ.6(ಪಿಎಂ)–ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸಮುದಾಯ ವೈದ್ಯಶಾಸ್ತ್ರ ವಿಭಾಗ, ಜೆಎಸ್‌ಎಸ್ ಆಹಾರಶಾಸ್ತ್ರ ವಿಭಾಗ, ಮೈಸೂರು ವಿವಿ ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದ ಸಂಯುಕ್ತಾಶ್ರಯದಲ್ಲಿ ಡಿ.8 ಮತ್ತು 9ರಂದು ಪೌಷ್ಟಿಕಾಂಶ ಕುರಿತಂತೆ ರಾಷ್ಟ್ರಮಟ್ಟದ ಮೈನ್ಯೂಟ್ರಿಕಾನ್ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಪ್ರವೀಣ್ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬನ್ನಿಮಂಟಪದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಡಿ.8ರಂದು ಬೆಳಗ್ಗೆ 11.30ಕ್ಕೆ ಉದ್ಘಾಟನಾ ಸಮಾರಂಭ ಆಯೋಜಿಸಿದ್ದು, ಮುಖ್ಯ ಅತಿಥಿಯಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಭಾಗವಹಿಸಲಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ.ಸುರೀಂದ್ರ ಸಿಂಗ್ ಅಧ್ಯಕ್ಷತೆ ವಹಿಸಲಿದ್ದು, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

'ಪೌಷ್ಟಿಕಾಂಶದಿಂದ ಸಾರ್ವಜನಿಕ ಆರೋಗ್ಯ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು' ವಿಷಯ ಕೇಂದ್ರೀಕರಿಸಿ ಸಮ್ಮೇಳನದಲ್ಲಿ ವಿಚಾರಗಳ ಮಂಡನೆಯಾಗಲಿದೆ. ಒಟ್ಟು 450 ಮಂದಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಅದರಲ್ಲಿ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಸೇರಿದಂತೆ 110 ಮಂದಿ ತಮ್ಮ ಸಂಶೋಧನಾ ಪ್ರಬಂಧ ಮಂಡಿಸಲಿದ್ದಾರೆ. ಒಟ್ಟು 700 ಮಂದಿ ಭಾಗವಹಿಸಲು ಅವಕಾಶವಿದ್ದು, ಆಸಕ್ತರು ನೋಂದಣಿಗಾಗಿ ಮೊ. ಸಂ. 90089 26878 ಅನ್ನು ಸಂಪರ್ಕಿಸಬಹುದು. ಸಾವಿರ ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.

ಆಹಾರ ಸುರಕ್ಷತೆ ಮತ್ತು ಕಲಬೆರಕೆ, ಪೌಷ್ಟಿಕಾಂಶದ ಮೌಲ್ಯಮಾಪನ ಕುರಿತು ಪೂರ್ವಭಾವಿ ಕಾರ್ಯಾಗಾರವು ಡಿ.7ರಂದು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿ ನಡೆಯಲಿದೆ. ಜೀವನದ ವಿವಿಧ ಹಂತಗಳಲ್ಲಿ ಪೌಷ್ಟಿಕಾಂಶದ ಸಮಸ್ಯೆಗಳು, ಪೌಷ್ಟಿಕಾಂಶದ ಸಂಶೋಧನೆ, ಆಹಾರ ಸುರಕ್ಷತೆ ಮತ್ತು ಭದ್ರತೆ, ಸಾರ್ವಜನಿಕ ಆರೋಗ್ಯ ಇತ್ಯಾದಿ ಪ್ರಮುಖ ವಿಷಯಗಳ ಕುರಿತು ವೈಜ್ಞಾನಿಕ ವಿಚಾರ ಮಂಡನೆಯನ್ನು ತಜ್ಞರು ಮಾಡಲಿದ್ದಾರೆ ಎಂದರು.

ಪ್ರಬಂಧ ರಚನೆ, ಪೋಸ್ಟರ್ ವಿನ್ಯಾಸ, ಹಣ್ಣು–ತರಕಾರಿ ಕೆತ್ತನೆ ಸ್ಪರ್ಧೆಗಳನ್ನು ಸಮ್ಮೇಳನದಲ್ಲಿ ಪಾಲ್ಗೊಂಡ ಆಸಕ್ತರಿಗೆ ನಡೆಸಲಾಗುವುದು. ಜೊತೆಗೆ ಅಂಗನವಾಡಿ ಕಾರ್ಯಕರ್ತೆಯರಿಂದ ಆಹಾರ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಡಿ.9ರಂದು ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ಪೌಷ್ಟಿಕಾಂಶದ ಕುರಿತು ತಯಾರಿಸಲಾದ ಪೋಸ್ಟರ್ ಮತ್ತು ಆಹಾರ ಪ್ರದರ್ಶನ ವೀಕ್ಷಿಸಲು ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶವಿದೆ. ಡಿ.9ರಂದು ಸಂಜೆ 4ಕ್ಕೆ ಸಮ್ಮೇಳನ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್. ಬಸವನಗೌಡಪ್ಪ, ಆಡಳಿತಾಧಿಕಾರಿ ಎಸ್.ಆರ್.ಸತೀಶ್‌ಚಂದ್ರ, ಪ್ರಾಧ್ಯಾಪಕ ಡಾ.ಡಿ.ಸುನೀಲ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಕೆಆರ್‌ಎಸ್ ಪಕ್ಷದಲ್ಲಿ ಮಹಿಳೆಯರಿಗೆ ಆದ್ಯತೆ



ಮೈಸೂರು,ಡಿ.6(ಪಿಎಂ)– ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಕೆಆರ್‌ಎಸ್ (ಕರ್ನಾಟಕ ರಾಷ್ಟ್ರ ಸಮಿತಿ) ಪಕ್ಷವು ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ಅದರಲ್ಲಿ ಮೂರನೇ ಒಂದರಷ್ಟು ಕ್ಷೇತ್ರಗಳನ್ನು ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿಟ್ಟಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಬಿ.ಎಂ.ಆದರ್ಶ ಅರಸು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರದಲ್ಲಿ ಪ್ರಮುಖ ಪಕ್ಷಗಳು ಮಹಿಳಾ ಸಬಲೀಕರಣವನ್ನು ಕೇವಲ ಮಾತಿಗಷ್ಟೇ ಸೀಮಿತಗೊಳಿಸಿವೆ. ಮಹಿಳಾ ಸಬಲೀಕರಣಕ್ಕಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯದಲ್ಲಿ ತೊಡಗಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಪಕ್ಷ ಮಹಿಳೆಯರಿಗೆ ಆದ್ಯತೆ ನೀಡಲು ತೀರ್ಮಾನಿಸಿದೆ ಎಂದರು.

ಕಳೆದ ಒಂದು ವರ್ಷದಿಂದ ಪಕ್ಷವು ನಿರಂತರವಾಗಿ ಪ್ರತಿ ತಿಂಗಳು ಸಂಭಾವ್ಯ ಅಭ್ಯರ್ಥಿಗಳ ಆಯ್ಕೆಯಾಗಿ ಬೆಂಗಳೂರಿನಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಸಂದರ್ಶನ ನಡೆಸಿಕೊಂಡು ಬರುತ್ತಿದೆ. ಅಂತೆಯೇ ಡಿ.10 ಮತ್ತು 11ರಂದು ಸಂಭಾವ್ಯ ಅಭ್ಯರ್ಥಿಗಳ ಸಂದರ್ಶನ ನಡೆಯಲಿದೆ. ಸಂದರ್ಶನದಲ್ಲಿ ಭಾಗವಹಿಸಲು ಮಹಿಳೆಯರಿಗೆ 2,500 ರೂ. ಮತ್ತು ಪುರುಷರಿಗೆ 5 ಸಾವಿರ ರೂ. ಶುಲ್ಕ ನಿಗದಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 79756 25575 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಪಕ್ಷದ ಮುಖಂಡರಾದ ಆರ್. ನಾಗರಾಜು, ಅಜಿತ್, ಪ್ರೇಮ್‌ಕುಮಾರ್, ರವಿಕುಮಾರ್ ಗೋಷ್ಠಿಯಲ್ಲಿದ್ದರು.

ವರುಣಾದಿಂದಲೇ ಸ್ಪರ್ಧಿಸಲು ಸಿದ್ದರಾಮಯ್ಯ ಮನವೊಲಿಕೆ ಯತ್ನ

- ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಮಾಹಿತಿ
- ರಾಜ್ಯದಲ್ಲಿ ಕಾಂಗ್ರೆಸ್‌ನತ್ತ ಜನರ ಒಲವು ಅಧಿಕವಿರುವ ವಿಶ್ವಾಸ



ಮೈಸೂರು,ಡಿ.6(ಎಂಟಿವೈ)– ರಾಜ್ಯದ 224 ಕ್ಷೇತ್ರಗಳಲ್ಲಿ ಮಾದರಿ ಕ್ಷೇತ್ರವಾಗಿರುವ ವರುಣಾದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ಪರ್ಧಿಸುವಂತೆ ಮನವಿ ಮಾಡಿದ್ದೇವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ವರುಣಾ ಕ್ಷೇತ್ರವನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದು, ರಾಜ್ಯದಲ್ಲೇ ಮಾದರಿ ಕ್ಷೇತ್ರದಂತೆ ಅಭಿವೃದ್ಧಿಗೊಂಡಿದೆ. 2023ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುವಂತೆ ಕೇಳಿಕೊಂಡಿದ್ದೇವೆ. ಇಲ್ಲಿ ಅವರು ಸ್ಪರ್ಧಿಸಿದರೆ ರಾಜ್ಯದಾದ್ಯಂತ ಪ್ರವಾಸ ಮಾಡಲು ಸಹಕಾರಿಯಾಗಲಿದೆ. ಇಲ್ಲಿ ನಾವೆಲ್ಲಾ ನೋಡಿಕೊಳ್ಳುತ್ತೇವೆ ಎಂದು ವಿಶ್ವಾಸ ತುಂಬಿರುವುದಾಗಿ ಅವರು ತಿಳಿಸಿದರು.

ಚುನಾವಣೆಗೆ ಸಜ್ಜು: ಮುಂಬರುವ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಜ್ಜಾಗಿದೆ. ರಾಜ್ಯದಾದ್ಯಂತ ಪಕ್ಷದ ನಾಯಕರು ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸಿದ್ದಾರೆ. ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ, ಹಗರಣ, ಕಮಿಷನ್ ದಂಧೆ ಸೇರಿದಂತೆ ಹಲವು ವಿಚಾರದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಇದರಿಂದ ಜನರ ಒಲವು ಕಾಂಗ್ರೆಸ್‌ನತ್ತ ಇದೆ.

ಮೇಕೆದಾಟು ಯೋಜನೆ ಜಾರಿಗಾಗಿ ಕಾಂಗ್ರೆಸ್ ವತಿಯಿಂದ ನಡೆದ ಪಾದಯಾತ್ರೆ, ಸ್ವತಂತ್ರ ನಡಿಗೆ, ಸಿದ್ದರಾಮಯ್ಯ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಈ ಕಾರ್ಯಕ್ರಮಗಳು ಜನರ ಮನ ಮುಟ್ಟಿವೆ. ಇದರೊಂದಿಗೆ ಬಿಜೆಪಿ ಸರ್ಕಾರ ಚುನಾವಣೆಯಲ್ಲಿ ವಾಮಮಾರ್ಗದಲ್ಲಿ ಗೆಲ್ಲಲು ಮತದಾರರ ಪಟ್ಟಿಗೆ ಕನ್ನ ಹಾಕಲು ಮುಂದಾಗಿದೆ. ಈ ಕೃತ್ಯವನ್ನು ಕಾಂಗ್ರೆಸ್ ಬೆಳಕಿಗೆ ತಂದು, ಹೋರಾಟ ನಡೆಸುತ್ತಿದೆ. ಈಗ ಎಲ್ಲರಿಗೂ ಬಿಜೆಪಿ ದುರಾಡಳಿತದ ಬಗ್ಗೆ ಮನವರಿಕೆಯಾಗುತ್ತಿದೆ ಎಂದು ಕಿಡಿಕಾರಿದರು.

ರಾಜ್ಯದ 224 ಕ್ಷೇತ್ರಗಳಲ್ಲೂ ಬೂತ್ ಲೆವೆಲ್ ಏಜೆಂಟ್ ನೇಮಕ ಮಾಡಲಾಗಿದೆ ನಮ್ಮ ಪಕ್ಷದ ಏಜೆಂಟರಿಗೆ ಸೂಚನೆ ನೀಡಲಾಗಿದ್ದು, ಯಾರ ಹೆಸರು ಡಿಲೀಟ್ ಆಗಿರುವುದನ್ನು ಪತ್ತೆ ಹಚ್ಚಲು ಸೂಚಿಸಲಾಗಿದೆ ಎಂದರು.


ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ವತಿಯಿಂದ ಜನವರಿ ಮೊದಲ ವಾರದಿಂದ ರಥಯಾತ್ರೆ ಆರಂಭವಾಗುತ್ತದೆ. ಇದುವರೆಗೂ ಪಕ್ಷವನ್ನು ಒಳ್ಳೆಯ ರೀತಿಯಲ್ಲಿ ಸಂಘಟಿಸಲಾಗಿದೆ. ಇದಕ್ಕೆ ರಾಜ್ಯದಲ್ಲಿ ನಡೆದ ವಿಧಾನಪರಿಷತ್ ಚುನಾವಣೆಯ ಫಲಿತಾಂಶವೇ ನಿದರ್ಶನ. ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಾಯಕತ್ವದಲ್ಲಿ ರಥಯಾತ್ರೆ ನಡೆಯಲಿದೆ. ಆರಂಭದಲ್ಲಿ ಈ ಇಬ್ಬರು ನಾಯಕರು ಜೊತೆಯಾಗಿಯೇ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮಯ ಕಡಿಮೆ ಇರುವುದರಿಂದ ನಂತರ ಇಬ್ಬರು ನಾಯಕರ ನೇತೃತ್ವದಲ್ಲಿ ರಥಯಾತ್ರೆ ಮುಂದುವರೆಯಲಿದೆ. ಆದರೆ ಪ್ರತಿಯೊಂದು ಜಿಲ್ಲೆಯ ಒಂದು ಕ್ಷೇತ್ರದಲ್ಲಿ ಇಬ್ಬರೂ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಗುಜರಾತ್ ಚುನಾವಣೋತ್ತರ ಸಮೀಕ್ಷಾ ವರದಿ ಪ್ರಕಟವಾಗಿದೆ. ಈ ವರದಿಯೇ ಅಂತಿಮವಲ್ಲ. ನಮಗಿರುವ ಮಾಹಿತಿಯಂತೆ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಪೂರಕವಾದ ವಾತಾವರಣವಿದೆ. ಗುಜರಾತ್‌ನಲ್ಲಿ ಸ್ವಲ್ಪ ಹಿನ್ನಡೆಯಾಗಲಿದೆ ಎಂದು ಸ್ಪಷ್ಟಪಡಿಸಿದರು.

ಹೈಕಮಾಂಡ್ ಸೂಚಿಸಿದ ಕಡೆ ಸ್ಪರ್ಧೆ: ಮುಂಬರುವ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂದು ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ಟಿಕೆಟ್ ಬಯಸಿ ನಂಜನಗೂಡು ಕ್ಷೇತ್ರದಿಂದ ಅರ್ಜಿ ಸಲ್ಲಿಸಿದ್ದೇನೆ. ಡಾ.ಹೆಚ್.ಸಿ.ಮಹದೇವಪ್ಪ ಅವರೂ ಇಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅಂತಿಮವಾಗಿ ಹೈಕಮಾಂಡ್ ಯಾರಿಗೆ ಒಲವು ತೋರಿಸುತ್ತದೋ ನೋಡೋಣ ಎಂದರು.

ಸಂವಿಧಾನ ಬುಡಮೇಲು ಕೃತ್ಯ: ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೂ ಶೇ.10ರಷ್ಟು ಮೀಸಲಾತಿ ಕಲ್ಪಿಸಿರುವುದು ಅವಾಸ್ತವಿಕತೆಯಿಂದ ಕೂಡಿದೆ. ಕೇವಲ ಶೇ.4ರಷ್ಟು ಜನಸಂಖ್ಯೆ ಹೊಂದಿರುವ ಮೇಲ್ವರ್ಗದ ಸಮುದಾಯಕ್ಕೆ ಶೇ.10ರಷ್ಟು ಮೀಸಲಾತಿ ಸಿಗಲಿದೆ. ಇದರಿಂದಾಗಿ ದಲಿತ, ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಲಿದೆ. ಹೀಗಾಗಿ ಈ ಕುರಿತು ಪರಾಮರ್ಶಿಸಬೇಕು. ಇದನ್ನು ಪಕ್ಷದ ವೇದಿಕೆಯಲ್ಲೂ ಚರ್ಚಿಸಿ ಮುಂದೇನು ಮಾಡಬೇಕೆಂದು ತೀರ್ಮಾನ ಮಾಡಲಾಗುವುದು ಎಂದರು.

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಸಂವಿಧಾನವನ್ನು ಬುಡಮೇಲು ಮಾಡುವ ಕೃತ್ಯಗಳು ನಡೆಯುತ್ತಿವೆ. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಮಂತ್ರಿ ಆಗಿದ್ದ ಅವಧಿಯಲ್ಲೂ ಸಂವಿಧಾನವನ್ನು ಪರಾಮರ್ಶೆ ಮಾಡುವ ಯತ್ನಗಳು ನಡೆದವು. ನರೇಂದ್ರ ಮೋದಿ ಪ್ರಧಾನಮಂತ್ರಿಯಾದ ದಿನದಿಂದಲೂ ಇಂತಹ ಕೃತ್ಯಗಳು ನಡೆಯುತ್ತಿವೆ ಎಂದು ಕಿಡಿಕಾರಿದರು.





ನಾಗಮಂಗಲ ಕ್ಷೇತ್ರದ ವಿಶೇಷ

ರಾಜ್ಯದ ಐತಿಹಾಸಿಕ ಧಾರ್ಮಿಕ ಸ್ಥಳವಿರುವ ಆದಿಚುಂಚನ ಗಿರಿ ಮಠ ಹಾಗೂ ಭೈರವೇಶ್ವರನ ದೇಗುಲ ಇದೇ ನಾಗ ಮಂಗಲಕ್ಕೆ ಒಳಪಡಲಿದೆ ಅತೀ ಹೆಚ್ಚು ಒಕ್ಕಲಿಗ ಮತದಾರರೇ ಇರುವ ವಿಧಾನಸಭಾ ಕ್ಷೇತ್ರ ಎಂಬುದು ಮತ್ತೊಂದು ವಿಶೇಷ. ಈವರೆಗೂ ನಾಗಮಂಗಲ ಕ್ಷೇತ್ರ ಮೂರು ಉಪಚುನಾವಣೆ ಸೇರಿದಂತೆ ಒಟ್ಟು 18 ಚುನಾವಣೆ ಯನ್ನು ಕಂಡಿದೆ. ಇಲ್ಲಿ ಶಾಸಕರಾಗಿದ್ದ ಹೆಚ್.ಟಿ.ಕೃಷ್ಣಪ್ಪ ಹಾಗೂ ಎನ್.ಚಲುವರಾಯಸ್ವಾಮಿ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. 1978ರಲ್ಲಿ ಹೆಚ್.ಟಿ.ಕೃಷ್ಣಪ್ಪ ದೇವರಾಜ ಅರಸು ಸಂಪುಟದಲ್ಲಿ ರೇಷ್ಮೆ ಸಚಿವರಾಗಿ ಹಾಗೂ 1985ರಲ್ಲಿ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಆರೋಗ್ಯ, ಅಬಕಾರಿ, ವೈದ್ಯಕೀಯ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಇನ್ನು ಚಲುವರಾಯಸ್ವಾಮಿ, 2004ರಲ್ಲಿ ಧರಂಸಿಂಗ್ ಸಂಪುಟದಲ್ಲಿ ಆರೋಗ್ಯ, ಹೆಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ಸಾರಿಗೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಇದರ ಜೊತೆಗೆ ಎಚ್.ಟಿ.ಕೃಷ್ಣಪ್ಪ 1985ರ ಉಪಚುನಾವಣೆಯಲ್ಲಿ ಗೆದ್ದು ಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಬೆಂಗಳೂರಿಗೆ ತೆರಳುವಾಗ ಫಲಿತಾಂಶ ಬಂದ ದಿನವೇ ಸರ್ಕಾರ ಉರುಳಿದ್ದು, ವಿಶೇಷ. ಇನ್ನು ಕ್ಷೇತ್ರದ ಶಾಸಕರಾಗಿದ್ದ ಎನ್.ಚಲುವರಾಯಸ್ವಾಮಿ ಹಾಗೂ ಎಲ್.ಆರ್.ಶಿವರಾಮೇಗೌಡ ಮಂಡ್ಯ ಸಂಸದರಾಗಿ ಆಯ್ಕೆಯಾಗಿದ್ದವರು.

ಇನ್ನು ನಾಗಮಂಗಲ ಕ್ಷೇತ್ರ ವ್ಯಾಪ್ತಿಗೆ ಮದ್ದೂರು ತಾಲೂಕಿನ ಕೊಪ್ಪ ಹೋಬಳಿ ಒಳಪಡುತ್ತದೆ. ಕೆಲವೊಮ್ಮೆ ಈ ಕ್ಷೇತ್ರದ ಜಿದ್ದಾಜಿದ್ದಿನ ರಾಜಕೀಯ ರಾಜ್ಯ ಮಟ್ಟದ ಗಮನ ಸೆಳೆಯಲಿದ್ದು, ನಾಗಮಂಗಲ ರಾಜಕಾರಣ ಹಲವು ವಿಶೇಷತೆಗಳಿಂದ ಕೂಡಿದೆ.

ನಾಗಮಂಗಲ ವಿಧಾನಸಭಾ ಕ್ಷೇತ್ರ

ಭೈರವನ ನಾಡಲ್ಲಿ ದಿಗ್ಗಜರ ಕಾದಾಟಕ್ಕೆ ವೇದಿಕೆ ಸಜ್ಜು

✍ ಎಂ.ಕೆ.ಮೋಹನ್‌ರಾಜ್

ಮಂಡ್ಯ, ಡಿ.6- ವಿಭಿನ್ನ-ವೈಶಿಷ್ಟ್ಯ ರಾಜಕಾರಣಕ್ಕೆ ಹೆಸರಾಗಿರುವ ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಗಳನ್ನು ಇಲ್ಲಿನ ಜನ ಹಬ್ಬದಂತೆ ಆಚರಿಸುತ್ತಾರೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಳೆದ 3 ದಶಕಗಳಿಂದ ಒಂದೊಂದು ಹಂತದಲ್ಲಿ ರಾಜಕೀಯ ಪ್ರಭುತ್ವ ಸಾಧಿಸಿದ್ದ ತಾಲೂಕಿನ ಮೂವರು ರಾಜಕೀಯ ದಿಗ್ಗಜರಾದ ಎಲ್.ಆರ್. ಶಿವರಾಮೇಗೌಡ, ಎನ್.ಚಲುವರಾಯಸ್ವಾಮಿ ಹಾಗೂ ಕೆ.ಸುರೇಶ್‌ಗೌಡ ಇದೇ ಮೊಟ್ಟ ಮೊದಲ ಬಾರಿಗೆ ಮುಖಾಮುಖಿಯಾಗುತ್ತಿದ್ದು, ನಾಗಮಂಗಲ ಕ್ಷೇತ್ರದ ಚುನಾವಣೆ ಈಗಾಗಲೇ ರಂಗು ಪಡೆದು, ಮಂಡ್ಯ ಜಿಲ್ಲೆಯ ಗಮನ ಸೆಳೆಯುತ್ತಿದೆ.

ಹೌದು, ನಾಗಮಂಗಲ ಕ್ಷೇತ್ರದಲ್ಲಿ ಚುನಾವಣೆ ಬಂತೆಂದರೆ ಮಂಡ್ಯದಾದ್ಯಂತ ಸುದ್ದಿ. ಹೊಂದಾಣಿಕೆ, ಒಳ ಒಪ್ಪಂದ ರಾಜಕಾರಣಕ್ಕೆ ಅವಕಾಶ ವಿಲ್ಲ. ಪ್ರತಿಯೊಬ್ಬ ಮುಖಂಡರು ತನ್ನ ಪಕ್ಷಕ್ಕೆ ಹಾಗೂ ನಾಯಕನಿಗೆ ಮನ್ನಣೆ ನೀಡುವ ಜೊತೆಗೆ ಚುನಾವಣೆಯನ್ನು ಬಹಳ ವೈಯಕ್ತಿಕವಾಗಿ ತೆಗೆದುಕೊಂಡು ಸೆಣಸುವುದೇ ಕ್ಷೇತ್ರದ ವಿಶೇಷ.

90ರ ದಶಕದಲ್ಲಿ ನಾಗಮಂಗಲದಲ್ಲಿ 2 ಬಾರಿ ಶಾಸಕರಾಗಿದ್ದ ಹಳೇ ಹುಲಿ ಎಲ್.ಆರ್.ಶಿವರಾಮೇಗೌಡ, 99 ರಿಂದ 3 ಬಾರಿ ಶಾಸಕರಾಗಿದ್ದ ಎನ್.ಚಲುವರಾಯಸ್ವಾಮಿ, 2008 ರಿಂದೀಚೆಗೆ 2 ಬಾರಿ ಶಾಸಕರಾಗಿದ್ದ ಕೆ.ಸುರೇಶ್‌ಗೌಡ ಈ ಮೂವರು ನಾಯಕರು ಆಯಾಯ ಹಂತದಲ್ಲಿ ಕ್ಷೇತ್ರದಲ್ಲಿ ಪಾರುಪತ್ಯ ಸಾಧಿಸಿದ್ದವರು. ಶಿವರಾಮೇಗೌಡ- ಚಲುವರಾಯಸ್ವಾಮಿ ಹಾಗೂ ಚಲುವರಾಯಸ್ವಾಮಿ-ಸುರೇಶ್‌ಗೌಡ ಮುಖಾಮುಖಿ ಆಗಿದ್ದರೇ ಹೊರತು, ಈ ಮೂವರು ನಾಯಕರು ಒಮ್ಮೆಯೂ ಮುಖಾಮುಖಿಯಾಗಿರಿಲ್ಲ. ಆದರೆ ಈ ಬಾರಿ ನಾಗಮಂಗಲ ರಾಜಕಾರಣ ಬದಲಾಗಿದ್ದು, ಮೂವರು ನಾಯಕರು ಮೊಟ್ಟ ಮೊದಲ ಬಾರಿಗೆ ಚುನಾವಣೆಯಲ್ಲಿ ಗೆಲುವಿಗಾಗಿ ಕಾದಾಡಲು ಸಜ್ಜಾಗಿದ್ದಾರೆ.

ಇನ್ನು ಭೈರವನ ನೆಲೆಬೀಡು ಆದಿಚುಂಚನಗಿರಿ ಶ್ರೀಕ್ಷೇತ್ರವಿರುವ ನಾಗಮಂಗಲ ವಿಧಾನಸಭಾ ಕ್ಷೇತ್ರ ಇಡೀ ರಾಜ್ಯದಲ್ಲೇ ಅತಿ ಹೆಚ್ಚು ಒಕ್ಕಲಿಗ ಮತದಾರರಿರುವ ಕ್ಷೇತ್ರ, ಬರೋಬ್ಬರಿ 1.40 ಲಕ್ಷ ಒಕ್ಕಲಿಗ ಮತದಾರರು ಕ್ಷೇತ್ರದಲ್ಲಿದ್ದು, ಸಹಜವಾಗಿಯೇ ಇದು ಜೆಡಿಎಸ್‌ನ ಭದ್ರಕೋಟೆಯಾಗಿದೆ. ಒಕ್ಕಲಿಗ ಸಮುದಾಯದ ಹೆಮ್ಮೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಪ್ರಭಾವ ಕ್ಷೇತ್ರದಲ್ಲಿ ವ್ಯಾಪಕವಾಗಿದೆ.

ನಾಗಮಂಗಲ ವಿಧಾನಸಭಾ ಕ್ಷೇತ್ರ ಜಿದ್ದಾಜಿದ್ದಿನ ರಾಜಕಾರಣಕ್ಕೆ ಹೆಸರಾಗುವುದರ ಜೊತೆಗೆ ಈ ಹಿಂದೆ ಒಮ್ಮೆ ಹಾಗೂ ಇತ್ತೀಚೆಗೊಮ್ಮೆ ನಂಗಾನಾಚ್‌ನಿಂದ ರಾಜ್ಯದ ಗಮನ ಸೆಳೆದಿತ್ತು. ಒಟ್ಟಾರೆ ಮೂವರು ನಾಯಕರ ಕಾದಾಟದಲ್ಲಿ ಒಕ್ಕಲಿಗರ ಕೋಟೆ ನಾಗಮಂಗಲದಲ್ಲಿ ಯಾರು ಜಯಶಾಲಿಯಾಗುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಎನ್.ಚಲುವರಾಯಸ್ವಾಮಿಗೆ ಈ ಬಾರಿ ಅಸ್ತಿತ್ವದ ಪ್ರಶ್ನೆ



ಚತುರ ರಾಜಕಾರಣಿ ಎನ್.ಚಲುವರಾಯಸ್ವಾಮಿ 2006ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. ಜೊತೆಗೆ ಅದೇ ಕುಮಾರಸ್ವಾಮಿ ಜೊತೆ ವಿರೋಧ ಕಟ್ಟಿಕೊಂಡು 2016ರಲ್ಲಿ ಜೆಡಿಎಸ್‌ನಿಂದ ಅಮಾನತುಗೊಂಡು, 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿ ನಾಗಮಂಗಲದಲ್ಲಿ ಸೋಲನ್ನಪ್ಪಿದ್ದ ಅವರಿಗೆ ಈ ಬಾರಿಯ ಚುನಾವಣೆ ಅಸ್ತಿತ್ವದ ಪ್ರಶ್ನೆಯಾಗಿದೆ.

ಈ ನಿಟ್ಟಿನಲ್ಲಿ ಈ ಬಾರಿ ಗೆಲ್ಲಲೇಬೇಕೆಂದು ಪಣ ತೊಟ್ಟಿರುವ ಅವರು, ಕ್ಷೇತ್ರದಲ್ಲೆಡೆ ಮಿಂಚಿನ ಸಂಚಾರದಲ್ಲಿ ತೊಡಗಿದ್ದಾರೆ. ಜಿಲ್ಲಾ ನಾಯಕರಾಗಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಉಳಿದ ಕಡೆಯೂ ಕ್ರಿಯಾಶೀಲರಾಗಿ ಸಂಚರಿಸುತ್ತಿದ್ದಾರೆ. ಅದರಲ್ಲೂ ನಾಗಮಂಗಲ ಕ್ಷೇತ್ರದ ರಾಜಕಾರಣವನ್ನು ಪುತ್ರ ಹಾಗೂ ನಟ ಸಚಿನ್ ಚಲುವರಾಯಸ್ವಾಮಿ ಮತ್ತು ಅಣ್ಣನ ಮಗ ಸುನೀಲ್‌ಗೆ ವಹಿಸಿದ್ದಾರೆ.

ಮೂರು ಬಾರಿ ಕ್ಷೇತ್ರದ ಶಾಸಕರಾಗಿ, ಸಚಿವರಾಗಿ ಹಲವು ಯೋಜನೆಗಳು ಮತ್ತು ಮೂಲಭೂತ ಸೌಕರ್ಯ ಒದಗಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಿರುವ ಚಲುವರಾಯಸ್ವಾಮಿ, ಈ ಬಾರಿ ತಮ್ಮ ಇಬ್ಬರು ರಾಜಕೀಯ ಎದುರಾಳಿಗಳಾದ ಶಿವರಾಮೇಗೌಡ ಹಾಗೂ ಸುರೇಶ್‌ಗೌಡರನ್ನು ಮೊದಲ ಬಾರಿಗೆ ಒಟ್ಟಿಗೆ ಎದುರಿಸುತ್ತಿದ್ದಾರೆ. ಶಿವರಾಮೇಗೌಡ ಸ್ಪರ್ಧೆಯಿಂದ ಜೆಡಿಎಸ್ ಮತಗಳು ಒಡೆದು ಚಲುವರಾಯಸ್ವಾಮಿಗೆ ಲಾಭವಾಗಬಹುದೆಂಬ ಲೆಕ್ಕಾಚಾರ ಒಂದೆಡೆಯಾದರೆ, ಒಕ್ಕಲಿಗ ಮತದಾರರ ಗಣನೀಯವಾಗಿರುವುದು ಜೊತೆಗೆ ದೇವೇಗೌಡರ ಪ್ರಭಾವ ಚಲುವರಾಯಸ್ವಾಮಿಗೆ ಆತಂಕಕ್ಕೀಡು ಮಾಡಲಿದೆ. ಆದರೆ ಕಳೆದ ಬಾರಿಯ ಚುನಾವಣೆಯ ಸೋಲು, ಒಂದು ವೇಳೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಂತ್ರಿಯಾಗುತ್ತಾರೆಂಬ ಲೆಕ್ಕಾಚಾರ ಮತದಾರರಲ್ಲಿದೆ.

ನಾಗಮಂಗಲ ಕ್ಷೇತ್ರದ ಶಾಸಕರ ಪರಂಪರೆ

ವರ್ಷ	ಶಾಸಕರ ಹೆಸರು	ಪಕ್ಷ
1952	ಎಂ.ಶಂಕರಲಿಂಗೇಗೌಡ	ಪಕ್ಷೇತರ
1953	ಕೆ.ಸಿಂಗಾರಿಗೌಡ	ಕಾಂಗ್ರೆಸ್ (ಉಪಚುನಾವಣೆ)
1957	ಟಿ.ಮರಿಯಪ್ಪ	ಪಿಎಸ್‌ಪಿ
1962	ಟಿ.ಎನ್.ಮಾದಪ್ಪಗೌಡ	ಪಕ್ಷೇತರ
1967	ಕೆ.ಸಿಂಗಾರಿಗೌಡ	ಕಾಂಗ್ರೆಸ್
1972	ಟಿ.ಎನ್.ಮಾದಪ್ಪಗೌಡ	ಕಾಂಗ್ರೆಸ್
1973	ಎಚ್.ಟಿ.ಕೃಷ್ಣಪ್ಪ	ಕಾಂಗ್ರೆಸ್ (ಉಪಚುನಾವಣೆ)
1978	ಎಚ್.ಟಿ.ಕೃಷ್ಣಪ್ಪ	ಕಾಂಗ್ರೆಸ್
1983	ಚಿಣಗೌಡ	ಪಕ್ಷೇತರ
1985	ಎಚ್.ಟಿ.ಕೃಷ್ಣಪ್ಪ	ಪಕ್ಷೇತರ (ಉಪಚುನಾವಣೆ)
1985	ಎಚ್.ಟಿ.ಕೃಷ್ಣಪ್ಪ	ಜನತಾಪಕ್ಷ
1989	ಎಲ್.ಆರ್.ಶಿವರಾಮೇಗೌಡ	ಪಕ್ಷೇತರ
1994	ಎಲ್.ಆರ್.ಶಿವರಾಮೇಗೌಡ	ಪಕ್ಷೇತರ
1999	ಎನ್.ಚಲುವರಾಯಸ್ವಾಮಿ	ಜೆಡಿಎಸ್
2004	ಎನ್.ಚಲುವರಾಯಸ್ವಾಮಿ	ಜೆಡಿಎಸ್
2008	ಕೆ.ಸುರೇಶ್‌ಗೌಡ	ಕಾಂಗ್ರೆಸ್
2013	ಎನ್.ಚಲುವರಾಯಸ್ವಾಮಿ	ಜೆಡಿಎಸ್
2018	ಕೆ.ಸುರೇಶ್‌ಗೌಡ	ಜೆಡಿಎಸ್


ಕ್ಷೇತ್ರದಲ್ಲಿ ಫೈಟರ್ ರವಿ ಮೂಲಕ ಬಿಜೆಪಿ ಗಾಳ



ಇತ್ತೀಚೆಗೆ ರಾಜ್ಯ ರಾಜಕಾರಣದಲ್ಲಿ ಬಹಳಷ್ಟು ಸದ್ದು ಮಾಡುತ್ತಿರುವ ಹೆಸರುಗಳೆಂದರೆ ಅದು ಸೈಲೆಂಟ್ ಸುನೀಲ್ ಹಾಗೂ ಫೈಟರ್ ರವಿ. ಸಮಾಜ ಸೇವೆ ಮೂಲಕ ನಾಗಮಂಗಲದ ಒಂದಷ್ಟು ಶಾಲೆಗಳಿಗೆ ಕುಡಿಯುವ ನೀರಿನ ಟ್ಯಾಂಕ್, ಮಕ್ಕಳಿಗೆ ನೋಟ್ ಬುಕ್ ವಿತರಣೆ ಮಾಡುವ ಮೂಲಕ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಫೈಟರ್ ರವಿ ಅಲಿಯಾಸ್ ಮಲ್ಲಿಕಾರ್ಜುನ್ ಅವರನ್ನು ಬಿಜೆಪಿಗೆ ಸೇರಿಸಿಕೊಂಡು, ಅವರಿಗೆ ಟಿಕೆಟ್ ನೀಡುವ ಮಾತುಗಳು ವ್ಯಾಪಕವಾಗಿ ಕೇಳಿ ಬರುತ್ತಿವೆ. ಆ ನಿಟ್ಟಿನಲ್ಲಿ ರವಿ ಈಗಾಗಲೇ ಬಿಜೆಪಿ ಸೇರಿದ್ದಾರೆ. ನಾಗಮಂಗಲದಲ್ಲಿ ಬಿಜೆಪಿ ಸಮರ್ಥ ಅಭ್ಯರ್ಥಿಯ ಶೋಧನೆಯಲ್ಲಿತ್ತು. ಈ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಓಡಾಡುತ್ತಿದ್ದ ಫೈಟರ್ ರವಿಗೆ ಭರವಸೆ ನೀಡಿತ್ತು. ಆದರೆ ರವಿ ರೌಡಿ ಶೀಟರ್ ಎಂಬುದನ್ನೇ ಬಂಡವಾಳ ಮಾಡಿಕೊಂಡ ಕಾಂಗ್ರೆಸ್, ಬಿಜೆಪಿ ವಿರುದ್ಧ ಮುಗಿಬಿದ್ದಿತ್ತು. ಜೊತೆಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲು ರೌಡಿಶೀಟರ್‌ಗಳಿಗೆ ಟಿಕೆಟ್ ಕೊಡಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಇದರಿಂದ ಅಸಮಾಧಾನಗೊಂಡಿರುವ ಫೈಟರ್ ರವಿ, ನನ್ನ ವಿರುದ್ಧ ರೌಡಿಶೀಟರ್ ಕೈಬಿಟ್ಟು ಬಹಳ ವರ್ಷಗಳೇ ಕಳೆದಿವೆ. ಉದ್ದೇಶಪೂರ್ವಕವಾಗಿ ನನ್ನ ವಿರುದ್ಧ ರೌಡಿಶೀಟರ್ ತೆರೆಯಲಾಗಿತ್ತು. ನಾನು ಯಾವುದೇ ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ. ಬಿಜೆಪಿ ಟಿಕೆಟ್ ನೀಡಿದರೆ, ಸ್ಪರ್ಧಿಸುವೆ. ಇಲ್ಲವಾದಲ್ಲಿ ಹಿಂದಿನಿಂದಲೂ ಸಮಾಜ ಸೇವೆ ಮಾಡಿಕೊಂಡು ಬಂದಿದ್ದು, ಜನರಿಗೋಸ್ಕರ ಪಕ್ಷೇತರವಾಗಿ ಸ್ಪರ್ಧಿಸಲು ಸಿದ್ಧನಿದ್ದೇನೆ ಎಂದು ಹಲವು ಖಾಸಗಿ ಚಾನಲ್‌ಗಳ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

ಯಾರ ಮತಬುಟ್ಟಿಗೆ ಕೈ ಹಾಕಲಿದ್ದಾರೆ ಶಿವರಾಮೇಗೌಡ



ಎಲ್.ಆರ್.ಶಿವರಾಮೇಗೌಡ ಮಂಡ್ಯ ಜಿಲ್ಲೆಯ ವರ್ಣರಂಜಿತ ರಾಜಕಾರಣಿ. ಎರಡು ಬಾರಿ ಪಕ್ಷೇತರವಾಗಿ ನಾಗಮಂಗಲದಿಂದ ಶಾಸಕರಾಗಿ, 2018ರ ಲೋಕಸಭಾ ಉಪಚುನಾವಣೆಯಲ್ಲಿ ಜೆಡಿಎಸ್‌ನಿಂದ ಮಂಡ್ಯ ಸಂಸದರಾಗಿ, ಬಳಿಕ ತನಗೇ ನಾಗಮಂಗಲ ಜೆಡಿಎಸ್ ಟಿಕೆಟ್ ಎಂದು ಸ್ವಯಂಘೋಷಿಸಿ ಕೊಂಡು, ಇತ್ತೀಚೆಗೆ ಜೆಡಿಎಸ್‌ನಿಂದ ಉಚ್ಚಾಟನೆಯಾಗಿ, ಇದೀಗ ಪಕ್ಷೇತರ ವಾಗಿ ನಾಗಮಂಗಲದಲ್ಲಿ ಸ್ಪರ್ಧಿಸಿ, ಹಾಲಿ, ಮಾಜಿ ಶಾಸಕರನ್ನು ಸೋಲಿಸುತ್ತೇನೆಂದು ತೊಡೆ ತಟ್ಟಿ ಕಳೆದ ಒಂದು ವರ್ಷದಿಂದ ನಾಗಮಂಗಲದಲ್ಲಿ ಕ್ರಿಯಾಶೀಲವಾಗಿ ಓಡಾಡುತ್ತಿದ್ದಾರೆ.

ಶಿವರಾಮೇಗೌಡ ಅಧಿಕಾರ ಕಳೆದುಕೊಂಡು ಕ್ಷೇತ್ರದಲ್ಲಿ ಬರೋಬ್ಬರಿ 24 ವರ್ಷ ಕಳೆಯುತ್ತಾ ಬಂದರೂ ಕ್ಷೇತ್ರದಲ್ಲಿ ತಮ್ಮ ವರ್ಚಸ್ಸನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. ಮೂರು ಬಾರಿ ಕಾಂಗ್ರೆಸ್‌ನಿಂದ ಟಿಕೆಟ್ ತಪ್ಪಿದ್ದು, ಜೆಡಿಎಸ್‌ನಿಂದ ಎಂಪಿ ಟಿಕೆಟ್ ತಪ್ಪಿದ್ದು, ರಾಜಕೀಯವಾಗಿ ನನಗೆ ದೊಡ್ಡ ಅನ್ಯಾಯವಾಗಿದೆ ಎಂದು ಕ್ಷೇತ್ರದಲ್ಲಿ ಓಡಾಡುತ್ತಿದ್ದಾರೆ. ಸೋಲಲಿ, ಗೆಲ್ಲಲಿ ಇದು ನನ್ನ ಕಟ್ಟ ಕಡೆಯ ಚುನಾವಣೆ ಎಂದು ಪುತ್ರ ಚೇತನ್‌ಗೌಡ ಜೊತೆಗೆ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತಿರುವ ಗೌಡರು, ಅನುಕಂಪದ ಅಲೆಯೊಂದಿಗೆ ಚುನಾವಣೆ ಗೆಲ್ಲಲು ಹೊರಟಿದ್ದಾರೆ. ಪ್ರತಿ ಗ್ರಾಮದಲ್ಲೂ ಈಗ ಜೆಡಿಎಸ್, ಕಾಂಗ್ರೆಸ್ ಜೊತೆಗೆ ಶಿವರಾಮೇಗೌಡರ ಬಣವೂ ಉದಯವಾಗಿದ್ದು, ಎಲ್‌ಆರ್‌ಎಸ್, ಸುರೇಶ್‌ಗೌಡ, ಚಲುವರಾಯಸ್ವಾಮಿ ಪೈಕಿ ಯಾರ ಮತಬುಟ್ಟಿಗೆ ಕೈ ಹಾಕಲಿದ್ದಾರೆ ಎಂಬ ಕುತೂಹಲ ಈಗ ಮೂಡಿದೆ.

ಕ್ಷೇತ್ರದಲ್ಲೇ ಬೀಡು ಬಿಟ್ಟಿರುವ ಶಾಸಕ ಸುರೇಶ್‌ಗೌಡ



ಇನ್ನು ಕ್ಷೇತದ ಹಾಲಿ ಜೆಡಿಎಸ್ ಶಾಸಕ ಕೆ.ಸುರೇಶ್‌ಗೌಡರಿಗೆ ಪಕ್ಷದಿಂದ ಟಿಕೆಟ್ ಅಂತಿಮವಾಗಿದ್ದು, ಕಳೆದ ಮೂರು ವರ್ಷಗಳ ಹಿಂದೆಯೇ ನಾಗಮಂಗಲದಲ್ಲಿ ಮನೆ ಮಾಡಿ, ವಾಸ್ತವ್ಯ ಹೂಡಿದ್ದಾರೆ. ವಾರಕ್ಕೆ ಒಮ್ಮೆ ಮಾತ್ರ ಬೆಂಗಳೂರಿಗೆ ಹೋಗಿ ಬರುವ ಶಾಸಕರು, ಉಳಿದ ಐದರಿಂದ ಆರು ದಿನ ಕ್ಷೇತ್ರದಲ್ಲೇ ಸಂಚರಿಸುತ್ತಾ, ಜನರ ಅಹವಾಲಿಗೆ ಸ್ಪಂದಿಸುತ್ತಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನಿಂದ 2008ರಲ್ಲಿ ಶಾಸಕರಾಗಿದ್ದ ಸುರೇಶ್‌ಗೌಡ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ 2018ರಲ್ಲಿ ಜೆಡಿಎಸ್‌ಗೆ ಬಂದು, ಇಲ್ಲಿಯೂ ಶಾಸಕರಾದರು. ಬಳಿಕ ಕ್ಷೇತ್ರದಲ್ಲಿ ಕುಡಿಯುವ ನೀರು, ರಸ್ತೆ, ಒಳ ಚರಂಡಿ, ಏತ ನೀರಾವರಿ ಯೋಜನೆ ಸೇರಿದಂತೆ ಅನೇಕ ಯೋಜನೆಗಳನ್ನು ತಂದಿದ್ದಾರೆ. ಕೊರೊನಾ ಸಂದರ್ಭದಲ್ಲೂ ಶಾಸಕರು ಕ್ರಿಯಾಶೀಲವಾಗಿ ಓಡಾಡಿದ್ದು, ಇವರಿಗೆ ಪ್ಲಸ್‌ಪಾಯಿಂಟ್ ಆಗಿದೆ. ಇತ್ತೀಚೆಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕರೆ ತಂದು ಚೀಣ್ಯ ಬಳಿ ಬೃಹತ್ ಸಮಾವೇಶ ನಡೆಸಿ, ಅಬ್ಬರಿಸಿದ್ದರು. ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಸ್ಪರ್ಧೆಯಿಂದ ಜೆಡಿಎಸ್‌ನ ಒಂದಷ್ಟು ಮತಗಳು ಸುರೇಶ್‌ಗೌಡ ಕೈತಪ್ಪುವ ಸಾಧ್ಯತೆ ಇದೆ. ಜೆಡಿಎಸ್‌ನಲ್ಲೇ ಇರುವ ಮಾಜಿ ಶಾಸಕರಾದ ಎನ್.ಅಪ್ಪಾಜಿಗೌಡ, ಕೆ.ಟಿ.ಶ್ರೀಕಂಠೇಗೌಡ, ಮನ್‌ಮುಲ್ ನಿರ್ದೇಶಕ ನೆಲ್ಲಿಗೆರೆ ಬಾಲು ಒಗ್ಗೂಡಿದರೇ ಜೆಡಿಎಸ್‌ಗೆ ಮಹಾಬಲ. ಈ ಎಲ್ಲಾ ಗೊಂದಲಗಳನ್ನು ಯಾವ ರೀತಿ ಬಗೆಹರಿಸಿಕೊಂಡು ಚುನಾವಣೆ ಎದುರಿಸುತ್ತಾರೋ ಕಾದು ನೋಡಬೇಕು.

ಒಂದನೇ ಪುಟದಿಂದ

ಜಮೀನು ಸ್ವಾಧೀನ ಇಲ್ಲ

ಮಾಡಿಕೊಂಡಿರುವ ತಿಳುವಳಿಕೆ ಒಪ್ಪಂದ ಪತ್ರಕ್ಕೆ (ಎಂಒಯು) ಆದ್ಯತೆ ಕೊಡುತ್ತೇವೆ. ಕೇವಲ ಅಂಕಿ-ಸಂಖ್ಯೆಗಳನ್ನು ಹೆಚ್ಚಿಸಲು ಒಪ್ಪಂದ ಮಾಡಿಕೊಳ್ಳುವ ಪ್ರವೃತ್ತಿ ನಮ್ಮಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಮಾಣ ಪತ್ರ ಆಧಾರಿತ ತಿಳುವಳಿಕೆ ಮಾಡಿಕೊಂಡಿರುವವರ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. ಅಂದರೆ ಯಾರು ನಮ್ಮ ರಾಜ್ಯದಲ್ಲಿ ಖಚಿತವಾಗಿ ಹೂಡಿಕೆ ಮಾಡಿ ಉದ್ಯಮಗಳನ್ನು ಆರಂಭಿಸುತ್ತಾರೋ ಅಂತಹವರಿಗೆ ಮಾತ್ರ ಆದ್ಯತೆ ಕೊಟ್ಟಿದ್ದೇವೆ. ಹಿಂದಿನ ಸರ್ಕಾರಗಳ ಕೆಲವು ತಪ್ಪುಗಳಿಂದಾಗಿ ಯೋಜನೆಗಳು ಅನುಷ್ಠಾನವಾಗಲಿಲ್ಲ ಎಂದು ನಿರಾಣಿ ಬೇಸರ ವ್ಯಕ್ತಪಡಿಸಿದರು. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಶೇ. 90ರಷ್ಟು ಟಿಯರ್-2 ಮತ್ತು 3 ನಗರಗಳಲ್ಲಿ ಹೂಡಿಕೆಯಾಗಿವೆ. 2 ಮತ್ತು 3ನೇ ಹಂತದ ನಗರಗಳಲ್ಲಿ ಬಂಡವಾಳ ಹೂಡಿಕೆಗೆ ಗಮನಹರಿಸಿದ್ದೇವೆ ಎಂದರು. ಮಂಗಳವಾರ ಕರ್ನಾಟಕ ಉದ್ಯೋಗ ಮಿತ್ರದಲ್ಲಿ ನಡೆದ 136ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ 59 ಯೋಜನೆಗಳಿಂದ 20627.88 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದ್ದು, ಇದರಿಂದ 80764 ಜನರಿಗೆ ಉದ್ಯೋಗಾವಕಾಶ ಲಭಿಸಲಿವೆ ಎಂದು ನಿರಾಣಿ ತಿಳಿಸಿದರು.

50 ಕೋಟಿಗೂ ಹೆಚ್ಚು ಬಂಡವಾಳ ಹೂಡಿಕೆಯ 7 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದ್ದು, 852.06 ಕೋಟಿ ರೂ. ಬಂಡವಾಳ ಹೂಡಿಕೆಯಾಗಿ 3560 ಜನರಿಗೆ ಉದ್ಯೋಗ ಲಭಿಸಲಿದೆ. 15 ಕೋಟಿ ರೂ., 50 ಕೋಟಿ ರೂ. ಒಳಗಿನ 48 ಹೊಸ ಯೋಜನೆಗಳಿಗೆ ಸಮಿತಿಯು ಅನುಮೋದನೆ ನೀಡಿದ್ದು, ಒಟ್ಟು 923.9 ಕೋಟಿ ರೂ. ಬಂಡವಾಳ ಹೂಡಿಕೆಯಾಗಿ 4444 ಜನರಿಗೆ ಉದ್ಯೋಗಗಳು ಸಿಗಲಿವೆ. ಹೆಚ್ಚುವರಿ ಬಂಡವಾಳ ಹೂಡಿಕೆಯ ನಾಲ್ಕು ಯೋಜನೆಗಳಿಂದ 852.73 ಕೋಟಿ ರೂ. ಬಂಡವಾಳ ಹೂಡಿಕೆಯಾಗಿ ಅಂದಾಜು 1460 ಜನರಿಗೆ ಉದ್ಯೋಗ ಅವಕಾಶ ಸಿಗಲಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಹೊರೆಯನ್ನು ತಗ್ಗಿಸಿ ಎಥನಾಲ್ ಬಳಕೆಗೆ ಹೆಚ್ಚು ಒತ್ತು ಕೊಟ್ಟಿದ್ದೇವೆ, ಇದರಿಂದ ಪರಿಸರ ಮತ್ತು ನಾಗರಿಕ ಸಮಾಜದ ಮೇಲೆ ಉಂಟಾಗುತ್ತಿದ್ದ ದುಷ್ಪರಿಣಾಮಗಳು ಕಡಿಮೆ ಆಗಲಿವೆ ಎಂದು ನಿರಾಣಿ ತಿಳಿಸಿದರು.

ಈಗಾಗಲೇ ಡೀಸೆಲ್ ಇಂಜಿನ್ ವಾಹನಗಳ ಆಮದನ್ನು ಬಂದ್ ಮಾಡಲಾಗಿದೆ. ವಾಹನಗಳನ್ನು ಬಯೋ ಫ್ಯೂಲ್ ಅಂದರೆ ಸ್ಥಳೀಯವಾಗಿ ದೊರೆಯುವ ಎಥನಾಲ್ ತೈಲದಿಂದ ವಾಹನಗಳನ್ನು ಚಾಲನೆ ಮಾಡಲು ಒತ್ತು ನೀಡಲಾಗುವುದು ಎಂದರು.

ಆಮದನ್ನು ಕಡಿಮೆ ಮಾಡಿ ರಫ್ತು ಹೆಚ್ಚಿಸಲು ಒತ್ತು ನೀಡುತ್ತಿದ್ದು ಮೇಕ್ ಇನ್ ಇಂಡಿಯಾಗೆ ಅನುವು ಮಾಡಿಕೊಡುವುದರಿಂದ ರಾಜ್ಯ ಇಡೀ ಪ್ರಪಂಚದಲ್ಲಿ ಬಲಿಷ್ಠವಾಗಿ ಹೊರಹೊಮ್ಮಲಿದೆ. ಸರ್ ಎಂ.ವಿಶ್ವೇಶ್ವರಯ್ಯ ಅವರ ಕನಸನ್ನು ಸಾಕಾರ ಮಾಡುವತ್ತ ನಮ್ಮ ಸರ್ಕಾರ ಸಾಗಿದೆ ಎಂದು ಹೇಳಿದರು.

ಕ್ರೀಡಾ ಸಾಧಕರಿಗೆ ಸರ್ಕಾರಿ ಉದ್ಯೋಗ

ಸಾಧನೆಗಳನ್ನು ಮಾಡಬೇಕು ಎಂದರು. ಯುವ ಕ್ರೀಡಾ ಪ್ರತಿಭೆಗಳು ದೇಶದ ಆಸ್ತಿ. ಏಕಾಗ್ರತೆ ಹಾಗೂ ಪರಿಶ್ರಮದಿಂದ ಸಾಧನೆ ಮಾಡಿದರೆ ಯಶಸ್ಸು ಖಂಡಿತ ಲಭಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕ್ರೀಡೆಗೆ ಮಹತ್ವವನ್ನು ನೀಡಿದೆ. ಕ್ರೀಡೆ ಹವ್ಯಾಸವಾಗಿ ಪ್ರಾರಂಭವಾಗಿ ರಾಷ್ಟ್ರೀಯ ಸಂಕೇತವಾಗಿ ಇತ್ತೀಚೆಗೆ ಪರಿಗಣಿಸಲಾಗುತ್ತಿದೆ.

ಒಂದು ರಾಷ್ಟ್ರವನ್ನು ಅದರ ಕ್ರೀಡಾ ಸಾಧನೆಯ ಮೇಲೆ ಗುರುತಿಸಲಾಗುತ್ತಿದೆ. ಭಾರತದಂತಹ ರಾಷ್ಟ್ರದಲ್ಲಿ ಕ್ರೀಡೆಯನ್ನು ಮುಖ್ಯವಾಹಿನಿಗೆ ತರಲು ಪ್ರಧಾನಿ ಮೋದಿಯವರು ಯಶಸ್ವಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಖೇಲೋ ಇಂಡಿಯಾ, ಫಿಟ್ ಇಂಡಿಯಾ, ಜೀತೋ ಇಂಡಿಯಾ ಎಂಬ ಕಾರ್ಯಕ್ರಮಗಳ ಮೂಲಕ ಕ್ರೀಡೆಗಳ ಬಗ್ಗೆ ಜಾಗೃತಿ ಮೂಡಿದೆ. ಇದರ ಪರಿಣಾಮವಾಗಿ ಹಿಂದಿನ ಒಲಂಪಿಕ್ಸ್‌ನಲ್ಲಿ ಭಾರತ ಹೆಚ್ಚಿನ ಪದಕಗಳನ್ನು ಗೆಲ್ಲುವಂತಾಯಿತು. ಪ್ಯಾರಾ ಒಲಂಪಿಕ್ಸ್‌ನಲ್ಲಿಯೂ ಭಾರತ ಮಹತ್ತರ ಸಾಧನೆಗಳನ್ನು ಮಾಡಿದೆ. ಇದಕ್ಕಾಗಿ ಎಲ್ಲ ಕ್ರೀಡಾಸಾಧಕರನ್ನು ಅಭಿನಂದಿಸುತ್ತೇನೆ ಎಂದರು.

ಭಾರತ್ ಗುರುತಿನ ಚೀಟಿ ವಿತರಣೆಗೆ ಚಾಲನೆ

ಡಿಸೆಂಬರ್ 8 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದೆ. ಅದೇ ದಿನದಿಂದ ಎಲ್ಲಾ ಜಿಲ್ಲೆಗಳಲ್ಲೂ ಎಬಿ-ಪಿಎಂಜೆಎವೈ-ಎಆರ್‌ಕೆ ಗುರುತಿನ ಚೀಟಿ ವಿತರಿಸಲು ಆರೋಗ್ಯ ಇಲಾಖೆಯಿಂದ ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ 5 ಲಕ್ಷ ರೂ. ಮತ್ತು ಉಳಿದವರಿಗೆ ಶೇ.30 ರಷ್ಟು ಚಿಕಿತ್ಸಾ ವೆಚ್ಚವನ್ನು ಸಹ ಪಾವತಿಯ ಆಧಾರದ ಮೇಲೆ ಅಂದರೆ ವಾರ್ಷಿಕ 1.5 ಲಕ್ಷ ರೂ. ಮೊತ್ತದಲ್ಲಿ ಚಿಕಿತ್ಸೆ ಪಡೆಯಲು ಅವಕಾಶವಿದೆ. ರಾಜ್ಯ ಮತ್ತು ಕೇಂದ್ರದ ಜಂಟಿಯಾಗಿ ಛಾಪಿಸಿದ ಗುರುತಿನ ಚೀಟಿಗಳನ್ನು ವಿತರಿಸುತ್ತಿದ್ದು, ದೀರ್ಘ ಕಾಲ ಬಾಳಿಕೆ ಬರುವ ಪಿವಿಸಿ ಪರಿಕರದಿಂದ ಇದನ್ನು ಸಿದ್ಧಪಡಿಸಲಾಗಿದೆ. ಈ ಗುರುತಿನ ಚೀಟಿಯಲ್ಲಿ ಪೋರ್ಟಬಿಲಿಟಿ ಸೌಲಭ್ಯ ಇರುವುದರಿಂದ ಇದರ ಮೂಲಕ ದೇಶದ ಯಾವುದೇ ನೋಂದಾಯಿತ ಆಸ್ಪತ್ರೆಯಲ್ಲೂ ಚಿಕಿತ್ಸೆ ಪಡೆಯಬಹುದು ಎಂದು ಸಚಿವರು ಮಾಹಿತಿ ನೀಡಿದರು.

ನದಿಗೆ ಹಾರಿದರೂ ಬೆನ್ನತ್ತಿ ಹಿಡಿದ ಜನ!

ಎಂದು ಕಿರುಚಿಕೊಂಡಿದ್ದಾರೆ. ಅಷ್ಟರಲ್ಲಿ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ವಿಷಯ ತಿಳಿದಿದೆ. ಇತ್ತ ಖದೀಮ ತಾನು ಕದ್ದ ವ್ಯಾನಿಟಿ ಬ್ಯಾಗಿನಲ್ಲಿದ್ದ ಚಿನ್ನದ ಸರ, ಹಣ ಮತ್ತು ಎಟಿಎಂ ಕಾರ್ಡುಗಳನ್ನು ತನ್ನ ಜೇಬಿನಲ್ಲಿಟ್ಟುಕೊಂಡು ಬ್ಯಾಗುಗಳನ್ನು ಬಿಸಾಡಿ, ರಸ್ತೆಯಲ್ಲಿ ಹೋಗುತ್ತಿದ್ದ ಬೈಕ್ ಅಡ್ಡಹಾಕಿ ಡ್ರಾಪ್ ಕೇಳಿದ್ದಾನೆ. ಶಾಲೆಯಲ್ಲಿ ಕಳ್ಳತನವಾಗಿರುವ ವಿಷಯ ತಿಳಿದಿದ್ದ ಬೈಕ್ ಸವಾರನಿಗೆ ಈ ಅಪರಿಚಿತನ ಮೇಲೆ ಅನುಮಾನ ಬಂದಿದೆ. ತೋರ್ಪಡಿಸದೆ ಆತನನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಬೇತ್ರಿ ಗ್ರಾಮದ ಬಳಿ ಬೈಕ್ ನಿಲ್ಲಿಸಿದ್ದಾನೆ. ಅಲ್ಲಿ ಜನರ ಕಂಡು ಭಯದಿಂದ ಆ ಅಪರಿಚಿತ ಬೈಕ್‌ನಿಂದ ಜಂಪ್ ಮಾಡಿ, ಓಡಲಾರಂಭಿಸಿದ್ದಾನೆ. ತಕ್ಷಣ ಅಲ್ಲಿದ್ದ ಕೆಲವರು ಆತನನ್ನು ಹಿಡಿಯಲು ಯತ್ನಿಸಿದ್ದಾರೆ. ಅವರಿಂದ ತಪ್ಪಿಸಿಕೊಳ್ಳಲು ಪಕ್ಕದ ಕಾವೇರಿ ನದಿಗೆ ಹಾರಿ, ಈಜಿ ಮತ್ತೊಂದು ದಡ ಸೇರಲು ಯತ್ನಿಸಿದ್ದಾನೆ. ಆದರೆ ಮತ್ತೊಂದು ದಡದಲ್ಲಿದ್ದವರಿಗೆ ವಿಷಯ ತಿಳಿದಿದ್ದರಿಂದ ಅಪರಿಚಿತ ಈಜಿ ದಡ ಸೇರುತ್ತಿದ್ದಂತೆ ಆತನನ್ನು ಹಿಡಿದು, ಪೊಲೀಸರಿಗೆ ಒಪ್ಪಿಸಿದ್ದಾರೆ. ಪೊಲೀಸರು ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಹಳೇ ಕಳ್ಳನಾಗಿದ್ದು, ಸುಮಾರು 6 ಪ್ರಕರಣಗಳ ಆರೋಪಿ ಎಂದು ತಿಳಿದಿದೆ. ಜೈಲು ಸೇರಿದ್ದ ಖದೀಮ ಕಳೆದ 15 ದಿನಗಳ ಹಿಂದೆಯಷ್ಟೇ ಬಿಡುಗಡೆಯಾಗಿದ್ದ. ಆದರೆ ಜೈಲಿಗೆ ಹೋಗಿ ಬಂದರೂ ಬದಲಾಗದೆ ಕಳ್ಳತನ ಚಾಳಿ ಮುಂದುವರೆಸಿ ಸಿಕ್ಕಿಬಿದ್ದಿದ್ದಾನೆ. ಸಾರ್ವಜನಿಕರ ಸಾಹಸದಿಂದ ಆತ ಮತ್ತೆ ಜೈಲು ಸೇರುವಂತಾಗಿದೆ. ಮಡಿಕೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 3-4 ಪ್ರಕರಣಗಳಲ್ಲಿ ಆತ ಭಾಗಿಯಾಗಿರುವುದು ವಿಚಾರಣೆಯಲ್ಲಿ ತಿಳಿದುಬಂದಿದೆ.

ನಕಲಿ ಅಂಕಪಟ್ಟಿ ತಯಾರಿಕಾ ಜಾಲ ಪತ್ತೆ

ಬಿಬಿಎ, ಎಂಬಿಎ, ಇಂಜಿನಿಯರಿಂಗ್ ಸೇರಿ ವಿವಿಧ ಪದವಿಗೆ ನೀಡುತ್ತಿದ್ದ 1500ಕ್ಕೂ ಹೆಚ್ಚು ನಕಲಿ ಮಾರ್ಕ್ಸ್ ಕಾರ್ಡ್, 80ಕ್ಕೂ ಹೆಚ್ಚು ಸೀಲ್‌ಗಳು, 30 ಹಾಲೋಗ್ರಾಮ್ ಸ್ಟಿಕ್ಕರ್, 9 ಮೊಬೈಲ್‌ಗಳು, ನಕಲಿ ಸುಮಾರು 1097 ದಾಖಲಾತಿ, ಪಿ.ಹೆಚ್.ಡಿ ಪುಸ್ತಕಗಳು, ಹಾರ್ಡ್ ಡಿಸ್ಕ್, ಪ್ರಿಂಟರ್, ಮೊಬೈಲ್‌ಗಳು, ಸೀಲ್‌ಗಳು, ವಶಪಡಿಸಿಕೊಂಡು ಹೆಚ್ಚಿನ ತನಿಖೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ವೆಂಕಟೇಶ್ವರ ಇನ್‌ಸ್ಟಿಟ್ಯೂಟ್ ಸಂಸ್ಥೆಯು ವೆಬ್‌ಸೈಟ್‌ನಲ್ಲಿ ವಿವಿಧ ಪದವಿಗಳ ದೂರ ಶಿಕ್ಷಣ(ಕರಸ್ಪಾಂಡೆನ್ಸ್) ಕೋರ್ಸ್‌ಗಳನ್ನು ಹೊಂದಿದ್ದು ಮಾಹಿತಿ ನೀಡಲಾಗಿತ್ತು, ಇದನ್ನು ನೋಡಿದ ದೂರುದಾರರು ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಕಚೇರಿಗೆ ಕಳೆದ ನ.2 ರಂದು ಹೋಗಿ ಕಚೇರಿಯ ಸ್ವಾಗತಕಾರರಾಗಿದ್ದ ಮಹಿಳೆಯನ್ನು ವಿಚಾರಿಸಿ ಬಿ.ಕಾಂ ಡಿಗ್ರಿ ಪದವಿ ಅವಶ್ಯಕತೆ ಇದೆ ಎಂದು ಕೇಳಲಾಗಿದೆ. ಸದರಿ ಮಹಿಳೆ ಒಂದು ಲಕ್ಷ ಹಣ ಕೊಟ್ಟರೆ ನಿಮಗೆ ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಿಂದ ಪದವಿ ಪ್ರಮಾಣ ಪತ್ರ ಕೊಡುವುದಾಗಿ ತಿಳಿಸಿದ್ದರು.

ಐದು ವರ್ಷಗಳಿಂದ ವಿಎಸ್‌ಎಸ್ ಸಂಸ್ಥೆಯ ವೆಬ್ ಸೈಟ್ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕಿಶೋರ್, ಶಾರದಾ, ಶಿಲ್ಪ ಹಾಗೂ ರಾಜಣ್ಣ ಎಂಬುವರನ್ನು ಬಂಧಿಸಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ, ಸಿಕ್ಕಿಂ, ಪಶ್ಚಿಮ ಬಂಗಾಳ ಸೇರಿದಂತೆ 20ಕ್ಕೂ ಹೆಚ್ಚು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಹೆಸರಿನ 1 ಸಾವಿರಕ್ಕೂ ಹೆಚ್ಚು ನಕಲಿ ಅಂಕಪಟ್ಟಿ ಹಾಗೂ 70ಕ್ಕೂ ಸೀಲ್, ಹಾರ್ಡ್ ಡಿಸ್ಕ್ ಪ್ರಿಂಟರ್ ಹಾಗೂ ಮೊಬೈಲ್‌ಗಳನ್ನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ತಿಳಿಸಿದ್ದಾರೆ.

ಇತ್ತೀಚೆಗೆ ಯುವಕನೊಬ್ಬನನ್ನು ಸಂಪರ್ಕಿಸಿದ ಆರೋಪಿಗಳು ಪರೀಕ್ಷೆಯಿಲ್ಲದೆ ಡಿಗ್ರಿ ಮಾರ್ಕ್ಸ್ ಕಾರ್ಡ್ ಬೇಕಾದರೆ ಒಂದು ಲಕ್ಷ ರೂಪಾಯಿ ನೀಡುವಂತೆ ಕೇಳಿದ್ದರು. ಆರೋಪಿಗಳು ಯುವಕನ ವಾಟ್ಸಾಪ್ ನಂಬರ್‌ಗೆ ಫೇಕ್ ಮಾರ್ಕ್ಸ್ ಕಾರ್ಡ್ ಕಳುಹಿಸಿದ್ದರು. ಅನುಮಾನಗೊಂಡು ಯುವಕ ಸೈಬರ್ ಕ್ರೈಂ ಪೊಲೀಸರಿಗೆ ನೀಡಿದ ದೂರು ಆಧರಿಸಿ ಮಹಾಲಕ್ಷ್ಮೀ ಲೇಔಟ್ ನ ಕೇಂದ್ರ ಕಚೇರಿ ಸೇರಿ ಮೂರು ಕಚೇರಿಗಳ ಮೇಲೆ ದಾಳಿ ನಡೆಸಿದಾಗ ಅಕ್ರಮ ಜಾಲ ಬೆಳಕಿಗೆ ಬಂದಿದೆ.

ಕರ್ನಾಟಕದ ಮೇಲೂ ಪರಿಣಾಮ ಬೀರಲಿದೆ...

ಪ್ರೇರಿತ ಆರೋಪಗಳಿಗೆ ಬೆಂಬಲವಿಲ್ಲ ಎಂಬುದು ಸ್ಪಷ್ಟವಾಗಿದೆ. ಗುಜರಾತ್ ಹಾಗೂ ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಜಯಭೇರಿ ಹೊಡೆಯಲಿದೆ. ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಇಡೀ ಭಾರತ ಬೆಂಬಲ ನೀಡುತ್ತಿದೆ. ಇದೊಂದು ಸಕಾರಾತ್ಮಕ, ಅಧಿಕಾರದ ಪರ ಮತದಾರರ ತೀರ್ಪು. ಗುಜರಾತ್‌ನಲ್ಲಿ 7ನೇ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದು, ಇದು ನರೇಂದ್ರ ಮೋದಿಯವರ ನಾಯಕತ್ವ, ಆಡಳಿತದಲ್ಲಿ ಜನರ ಪ್ರಬಲವಾದ ನಂಬಿಕೆಯನ್ನು ತೋರುತ್ತಿದೆ ಎಂದರು.

ಮಹಾರಾಷ್ಟ್ರ ಸಚಿವರು ಬಾರದೆ ಇರುವುದಕ್ಕೂ, ಚುನಾವಣೆಗೂ ಸಂಬಂಧವಿಲ್ಲ. ಇದು ಮಹಾರಾಷ್ಟ್ರದವರು ಬಹಳ ವರ್ಷಗಳಿಂದ ವಿವಾದ ಮಾಡಿಕೊಂಡು ಬಂದಿದ್ದಾರೆ. ವಿವಾದದಿಂದ ಎರಡೂ ಕಡೆ ಪ್ರತಿಕ್ರಿಯೆ ಬರುತ್ತದೆ. ಜನರ ಮಧ್ಯೆ ಇರುವ ಸಾಮರಸ್ಯ ಕದಡುವ ಕೆಲಸ ಬೇಡ ಎಂದು ಹೇಳಿದ್ದೇನೆ. ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣವಿದ್ದು, ನಮ್ಮ ನಡೆ ಸಂವಿಧಾನಬದ್ಧವಾಗಿರುವುದರಿಂದ ಕಾನೂನು ಸಮರದಲ್ಲಿ ಗೆಲ್ಲುವ ವಿಶ್ವಾಸವಿದೆ.

ಕ್ಷುಲ್ಲಕ ಕಾರಣಕ್ಕೆ ಕಾರು ಹರಿಸಿದ ಯುವಕ: ಮೂವರು ಗಾಯಾಳುಗಳು ಆಸ್ಪತ್ರೆಗೆ ದಾಖಲು

ಮೈಸೂರು, ಡಿ.6(ಎಸ್‌ಬಿಡಿ)- ಕ್ಷುಲ್ಲಕ ಕಾರಣದಿಂದ ಮೂವರ ಮೇಲೆ ಕಾರು ಹರಿಸಲು ಯತ್ನಿಸಿದ ಘಟನೆ ಮೈಸೂರಿನಲ್ಲಿ ನಡೆದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಟಿಕೆ ಲೇಔಟ್ ನಿವಾಸಿ ವಾಸುದೇವ್ ಪುತ್ರ ದರ್ಶನ್(24) ಬಂಧಿತ ಆರೋಪಿಯಾಗಿದ್ದು, ಘಟನೆಯಲ್ಲಿ ಗಾಯಗೊಂಡಿರುವ ಸ್ನೇಹಿತರಾದ ಬೆಮೆಲ್ ಲೇಔಟ್‌ನ ಪ್ರಜ್ವಲ್(24), ಶಾರದಾದೇವಿನಗರದ ರಾಹುಲ್(26) ಹಾಗೂ ಬೋಗಾದಿ 2ನೇ ಹಂತದ ನಿವಾಸಿ ಆನಂದ್(24) ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ಪ್ರಜ್ವಲ್ ಮತ್ತು ರಾಹುಲ್ ಭಾನುವಾರ ರಾತ್ರಿ 12 ಗಂಟೆ ಸಮಯದಲ್ಲಿ ಟೀ ಕುಡಿಯುವ ಸಲುವಾಗಿ ಕಾರಿನಲ್ಲಿ ರಿಂಗ್ ರಸ್ತೆ ಕಡೆಯಿಂದ ರೈಲ್ವೆ ನಿಲ್ದಾಣದ ಬಳಿ ಹೋಗುವಾಗ ವಾಗ್ದೇವಿ ನಗರದ ಟೆಂಟ್ ಸರ್ಕಲ್ ಬಳಿ ಬೈಕ್‌ನಲ್ಲಿ ಬಂದ ಸ್ನೇಹಿತರಾದ ಆನಂದ್ ಹಾಗೂ ಪೃಥ್ವಿ ಎದುರಾಗಿದ್ದಾರೆ. ಹಾಗಾಗಿ ಕಾರು ನಿಲ್ಲಿಸಿ ಮಾತನಾಡುತ್ತಿದ್ದಾಗ ಎದುರಿನಿಂದ ಕಾರೊಂದು ವೇಗವಾಗಿ ಬಂದಿದೆ. ಆಗ ರಾಹುಲ್ ಮತ್ತು ಸ್ನೇಹಿತರು ನಿಧಾನವಾಗಿ ಹೋಗುವಂತೆ ಹೇಳಿದ್ದಾರೆ.

ಇದರಿಂದ ಕಾರು ಚಾಲಿಸುತ್ತಿದ್ದ ದರ್ಶನ್ ಕೋಪದಿಂದ ಕಾರಿನಿಂದಿಳಿದು ರಾಹುಲ್ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಆ ವೇಳೆ ಪರಸ್ಪರ ಮಾತಿನ ಚಕಮಕಿ ನಡೆದಿದೆ. ಬಳಿಕ ನಾಲ್ವರು ಸ್ನೇಹಿತರು ತಮ್ಮ ಕಾರಿನ ಬಳಿ ಹೋಗುವಾಗ ದರ್ಶನ್ ಅವಾಚ್ಯವಾಗಿ ನಿಂದಿಸಿದ್ದಾನೆ. ಅಲ್ಲದೆ ಏಕಾಏಕಿ ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ್ದಾನೆ. ಈ ವೇಳೆ ರಾಹುಲ್, ಪ್ರಜ್ವಲ್ ಹಾಗೂ ಆನಂದ್‌ಗೆ ಕಾರು ಡಿಕ್ಕಿ ಹೊಡೆದಿದೆ. ಮತ್ತೋರ್ವ ಸ್ನೇಹಿತ ಪೃಥ್ವಿ ಸ್ವಲ್ಪ ದೂರ ನಿಂತಿದ್ದರಿಂದ ಆತ ಬಚಾವಾಗಿದ್ದಾನೆ. ಸದ್ಯ ಗಾಯಗೊಂಡಿರುವ ಮೂವರೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಹೇಳಿಕೆ ಅನ್ವಯ ಕಾರು ಚಾಲಕ ದರ್ಶನ್ ವಿರುದ್ಧ ಸರಸ್ವತಿಪುರಂ ಠಾಣೆ ಪೊಲೀಸರು ಐಪಿಸಿ-307ರಡಿ ಕೊಲೆ ಯತ್ನ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಿದ್ದಾರೆ. ಘಟನೆ ನಡೆದ ಸಂದರ್ಭದಲ್ಲಿ ದರ್ಶನ್ ಜೊತೆ ಅವರ ಪೋಷಕರೂ ಕಾರಿನಲ್ಲಿದ್ದರು ಎಂದು ತಿಳಿದುಬಂದಿದ್ದು, ವಿಚಾರಣೆ ಮುಂದುವರಿಸಲಾಗಿದೆ ಎಂದು ಇನ್‌ಸ್ಪೆಕ್ಟರ್ ಸಿ.ಎಂ.ರವೀಂದ್ರ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಚಳಿಗಾಲದ ಅಧಿವೇಶನ

ಕಾಯಿದೆ, ದಿವಾಳಿತನ ಕಾನೂನು ಮತ್ತು ಸ್ಪರ್ಧಾತ್ಮಕ ಆಯೋಗದ ಕಾಯಿದೆಗೆ ತಿದ್ದುಪಡಿ ಮಾಡುವ ಮಸೂದೆಗಳನ್ನು ಶಾಸಕಾಂಗ ವ್ಯವಹಾರ ಪಟ್ಟಿಯಲ್ಲಿ ಸೇರಿಸಲಾಗಿಲ್ಲ ಚಳಿಗಾಲದ ಅಧಿವೇಶನದಲ್ಲಿ ಚರ್ಚೆ ಸಬಹುದಾದ ಶಾಸಕಾಂಗ ಕಾರ್ಯಸೂಚಿ ಮತ್ತು ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ನರೇಂದ್ರ ಮೋದಿ ಸರ್ಕಾರ ಮಂಗಳವಾರ ನಾಯಕರ ಸರ್ವಪಕ್ಷ ಸಭೆಯನ್ನು ಕರೆದಿದೆ. ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಇತ್ತೀಚೆಗೆ ಸರ್ವಪಕ್ಷ ಸಭೆಗೆ ಹಾಜರಾಗುವಂತೆ ವಿವಿಧ ಪಕ್ಷಗಳ ನಾಯಕರಿಗೆ ಆಹ್ವಾನಿಸಿದ್ದರು. ಸಂಸತ್‌ನ ಚಳಿಗಾಲದ ಅಧಿವೇಶನಕ್ಕೆ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಗೈರಾಗುವ ಸಾಧ್ಯತೆ ಇದೆ ಸರ್ಕಾರ ಚರ್ಚೆಗೆ ಸಿದ್ಧವಾದರೆ, ಪಕ್ಷವು ಅದಕ್ಕೆ ರಚನಾತ್ಮಕ ಬೆಂಬಲವನ್ನು ನೀಡುತ್ತದೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ.

ವಿಪಕ್ಷಗಳ ಆಗ್ರಹ: ಸಂಸತ್ತಿನ ಚಳಿಗಾಲದ ಅಧಿವೇಶನ ಹಿನ್ನೆಲೆಯಲ್ಲಿ ರಕ್ಷಣಾ ಸಚಿವ ಹಾಗೂ ಲೋಕಸಭೆಯ ಉಪ ನಾಯಕ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಇಂದು ಸರ್ವಪಕ್ಷಗಳ ಸಭೆ ನಡೆಯಿತು.

ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವ ಮುರುಳೀ ಧರನ್ ಮತ್ತು ಅರ್ಜುನ್ ರಾಮ್ ಮೇಘಾ ವಾಲ್, ಪಿಯೂಸ್ ಗೋಯೆಲ್ ಸರ್ಕಾರದ ಪರವಾಗಿ ಸಭೆಯಲ್ಲಿ ಪಾಲ್ಗೊಂಡರು. ಕಾಂಗ್ರೆಸ್ ಪಕ್ಷದಿಂದ ಅಧೀರ್ ರಂಜನ್ ಚೌಧರಿ, ಟಿಎಂಸಿಯಿಂದ ಸುದೀಪ್ ಬಂಡೋಪಾಧ್ಯಾಯ, ಡೆರಿಕ್ ಓ ಬ್ರಿಯಾನ್, ಡಿಎಂಕೆಯಿಂದ ಟಿಆರ್ ಬಾಲು, ಎನ್ ಸಿಪಿಯ ಡಾ. ಫಾರೂಖ್ ಅಬ್ದುಲ್ಲಾ ಮತ್ತಿತರ ಪಕ್ಷಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಗ್ರಾಮ ಲೆಕ್ಕಿಗರು ಇನ್ನು ಮುಂದೆ 'ಗ್ರಾಮ ಆಡಳಿತ ಅಧಿಕಾರಿ'

ಬೆಂಗಳೂರು: ಕಂದಾಯ ಇಲಾಖೆಯಲ್ಲಿನ ಗ್ರಾಮ ಲೆಕ್ಕಿಗರ ವೃಂದದ ಹುದ್ದೆಯನ್ನು 'ಗ್ರಾಮ ಆಡಳಿತ ಅಧಿಕಾರಿ' ಎಂದು ಬದಲಿಸಿ ಸರ್ಕಾರ ಆದೇಶ ಹೊರಡಿಸಿದೆ. ಹುದ್ದೆಯ ವೇತನ ಶ್ರೇಣಿ, ನೇಮಕಾತಿ ವಿಧಾನ, ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಕೇವಲ ಹುದ್ದೆಯ ಹೆಸರನ್ನು ಮಾತ್ರ ಬದಲಿಸಲಾಗಿದೆ. ಗ್ರಾಮ ಲೆಕ್ಕಿಗ ಎಂದು ಕರೆಯುವ ಬದಲು ಇನ್ನು ಮುಂದೆ ಗ್ರಾಮ ಆಡಳಿತ ಅಧಿಕಾರಿ ಎಂದು ಕರೆಯಲಾಗುತ್ತದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರ ಆದೇಶ: ಕಂದಾಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಗ್ರಾಮ ಲೆಕ್ಕಿಗರ ಹುದ್ದೆಗೆ ಅನ್ವಯಿಸುವಂತೆ ಸೂಕ್ತ ತಿದ್ದುಪಡಿ ತರಲು ಪ್ರತ್ಯೇಕ ಕ್ರಮ ವಹಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಗ್ರಾಮ ಲೆಕ್ಕಿಗರು ಎಂಬ ಪದನಾಮವನ್ನು ಗ್ರಾಮ ಆಡಳಿತ ಅಧಿಕಾರಿ ಎಂದು ಬದಲಾಯಿಸುವ ಕುರಿತು ಪರಿಶೀಲಿಸುವಂತೆ ಕಂದಾಯ ಸಚಿವರು ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರಾದೇಶಿಕ ಆಯುಕ್ತರಿಗೆ ಈ ಸಂಬಂಧ ಅಭಿಪ್ರಾಯ ಕೋರಲಾಗಿತ್ತು. ಹೆಸರು ಬದಲಾವಣೆಗೆ ಸಮ್ಮತಿ ಸೂಚಿಸಿದ ಹಿನ್ನೆಲೆಯಲ್ಲಿ ಗ್ರಾಮ ಲೆಕ್ಕಿಗರ ಹುದ್ದೆಯ ಹೆಸರನ್ನು ಗ್ರಾಮ ಆಡಳಿತ ಅಧಿಕಾರಿ ಎಂದು ಬದಲಿಸಲಾಗಿದೆ ಎಂದು ತಿಳಿಸಲಾಗಿದೆ.

ಕಾಲಮಾನದ ಎಲ್ಲಾ ಸವಾಲು, ಸಮಸ್ಯೆಗಳಿಗೆ ಡಾ.ಅಂಬೇಡ್ಕರ್ ಸಂವಿಧಾನದಲ್ಲಿ ಪರಿಹಾರ ಕಲ್ಪಿಸಿದ್ದಾರೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುಣಗಾನ ● ಡಾ. ಅಂಬೇಡ್ಕರ್ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಗೌರವ ನಮನ ● ಅಖಂಡ ದೇಶ ರೂಪಿಸುವುದರ ಜೊತೆಗೆ ಪ್ರಜಾಪ್ರಭುತ್ವದ ಜೀವಂತಿಕೆಗೆ ನಾಂದಿ

ಬೆಂಗಳೂರು, ಡಿ. 6(ಕೆಎಂಶಿ)- ಇಂದಿನ ಸವಾಲುಗಳಿಗೆಲ್ಲಾ ಸರ್ಕಾರ ಸಂವಿಧಾನದ ಆಶ್ರಯದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ರಾಜ್ಯದಲ್ಲಿ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ 66ನೇ ಮಹಾಪರಿನಿರ್ವಾಣ ಹಾಗೂ ಪುಣ್ಯಸ್ಮರಣೆಯ ದಿನವಾದ ಇಂದು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ಅಂಬೇಡ್ಕರ್ ಅವರು ಬದಲಾದ ಕಾಲದ ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಲು ಸಂವಿಧಾನದಲ್ಲಿ ತಿದ್ದುಪಡಿ ತರುವ ಆಯಾಮ ನೀಡಿರುವುದು ಎಂಥಾ ಬದಲಾದ ಕಾಲಕ್ಕೂ ಸ್ಪಂದಿಸುವಂಥದ್ದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಗತ್ತಿಗೆ ಪ್ರಜಾಪ್ರಭುತ್ವ ಹೇಗೆ ಯಶಸ್ವಿಯಾಗಬಹುದು ಎಂದು ತೋರಿಸಿದವರು. ಹಲವಾರು ಭಾಷೆ, ಜಾತಿ, ಪ್ರಾಂತ್ಯಗಳಿಂದ ಕೂಡಿದ ಭಾರತದಲ್ಲಿ ಒಂದು ಸಂವಿಧಾನದಿಂದ ಒಂದು ಮಾಡಿ ಎಲ್ಲರ ಭಾವನೆಗಳನ್ನು ಹೆಣೆದು ಅಖಂಡ ಭಾರತ ದೇಶವನ್ನು ರೂಪಿಸುವ ಜೊತೆಗೆ ದೀರ್ಘಕಾಲ ಪ್ರಜಾಪ್ರಭುತ್ವದ ಜೀವಂತಿಕೆಗೆ ನಾಂದಿ ಹಾಡಿದ್ದಾರೆ ಎಂದರು. ಸಂವಿಧಾನ ಇಲ್ಲದಿದ್ದಿದ್ದರೆ ಏನಾಗುತ್ತಿತ್ತು ಎಂದು ಊಹಿಸಲೂ ಸಾಧ್ಯವಿಲ್ಲ. ಹಲವಾರು ದೇಶಗಳು ಪ್ರಜಾಪ್ರಭುತ್ವದ ಪ್ರಯೋಗದಲ್ಲಿ ಎಲ್ಲಿ ಯಶಸ್ವಿಯಾಗಿಲ್ಲವೋ, ಅಲ್ಲೇ ಭಾರತ ಯಶಸ್ವಿಯಾಗಲು ಕಾರಣ ಬಾಬಾ ಸಾಹೇಬ್ ಅಂಬೇಡ್ಕರ್ ಅವರು. ಅವರು ಮಾಡಿರುವ ಕಾರ್ಯ ಕಾಲಕಾಲಕ್ಕೆ ಪ್ರಸ್ತುತ ಹಾಗೂ ಶಾಶ್ವತವಾಗುತ್ತಿದೆ ಎಂದರು.

ಮಾ.20ರಿಂದ ಕೊಡವ ಕೌಟುಂಬಿಕ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ

● ಸರ್ಕಾರದಿಂದ 1 ಕೋಟಿ ರೂ. ಅನುದಾನ ● ಸಿಎಂ ಬಸವರಾಜ ಬೊಮ್ಮಾಯಿ ಉದ್ಘಾಟನೆ ● 4 ವರ್ಷಗಳ ನಂತರ ನಡೆಯುತ್ತಿರುವ ಹಾಕಿ ಉತ್ಸವ



ಮಾರ್ಚ್‌ನಲ್ಲಿ ನಾಪೋಕ್ಲುವಿನಲ್ಲಿ ನಡೆಯಲಿರುವ 'ಅಪ್ಪಚೆಟ್ಟೋಳಂಡ ಹಾಕಿ ಉತ್ಸವ-2023'ರ ಲೋಗೋವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನಾವರಣಗೊಳಿಸಿದರು. ಹಾಕಿ ಉತ್ಸವ ಆಯೋಜನಾ ಸಮಿತಿಯ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಮತ್ತು ಪದಾಧಿಕಾರಿಗಳು, ಮುಖ್ಯಮಂತ್ರಿಗಳನ್ನು ಬೆಂಗಳೂರಿನ ಅವರ ಗೃಹ ಕಚೇರಿ ಕೃಷ್ಣದಲ್ಲಿ ಭೇಟಿಯಾದ ಸಂದರ್ಭದಲ್ಲಿ ಪ್ರತಿಷ್ಠಿತ ಹಾಕಿ ಪಂದ್ಯಾವಳಿಯ ಲೋಗೋವನ್ನು ಬಿಡುಗಡೆ ಮಾಡಿ ಶುಭ ಕೋರಿದರು. ಈ ಸಂದರ್ಭ ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಹಾಕಿ ಉತ್ಸವ ಸಮಿತಿಯ ಪ್ರಮುಖರು ಹಾಜರಿದ್ದರು.

ಮಡಿಕೇರಿ, ಡಿ.6– ಸುದೀರ್ಘ 4 ವರ್ಷಗಳ ಬಳಿಕ ಇದೀಗ 23ನೇ ಕೊಡವ ಕೌಟುಂಬಿಕ 'ಅಪ್ಪಚೆಟ್ಟೋಳಂಡ ಹಾಕಿ ಉತ್ಸವ-2023' ನಾಪೋಕ್ಲುವಿನಲ್ಲಿ ಮಾರ್ಚ್ 20ರಿಂದ ಏಪ್ರಿಲ್ 10ರವರೆಗೆ ನಡೆಯಲಿದೆ ಎಂದು ಉತ್ಸವ ಆಯೋಜಕ ಸಮಿತಿಯ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮನು ಮುತ್ತಪ್ಪ, ಪ್ರಾಕೃತಿಕ ವಿಕೋಪ, ಕೊರೊನಾ ಹಿನ್ನೆಲೆಯಲ್ಲಿ ಯುವ ಸಮೂಹದ ಕ್ರೀಡಾ ಪ್ರತಿಭೆಗಳಿಗೆ ಉತ್ತೇಜನ ನೀಡುವ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಆಯೋಜನೆಗೊಂಡಿರಲಿಲ್ಲ. ಇದೀಗ ಕೊಡವ ಕೌಟುಂಬಿಕ ಹಾಕಿ ಉತ್ಸವಕ್ಕೆ ಅಪ್ಪಚೆಟ್ಟೋಳಂಡ ಹಾಕಿ ಉತ್ಸವದ ಮೂಲಕ ಮನಶ್ಚೇತನ ನೀಡುವ ಪ್ರಯತ್ನ ನಡೆಯಲಿದೆ ಎಂದು ತಿಳಿಸಿದರು.

1 ಕೋಟಿ ರೂ. ಅನುದಾನ: ಕೊಡವ ಕೌಟುಂಬಿಕ ಹಾಕಿ ಉತ್ಸವದ ಆಯೋಜನೆ ಹಿನ್ನೆಲೆಯಲ್ಲಿ ಜಿಲ್ಲೆಯ ಶಾಸಕರಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್, ಸುಜಾ ಕುಶಾಲಪ್ಪ ಅವರ ಸಹಕಾರದೊಂದಿಗೆ ಉತ್ಸವ ಆಯೋಜನಾ ಸಮಿತಿಯ ನಿಯೋಗ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಿದೆ. ಈ ಸಂದರ್ಭ ಕೌಟುಂಬಿಕ ಹಾಕಿ ಉತ್ಸವಕ್ಕೆ ಇದೇ ಮೊದಲ ಬಾರಿಗೆ 1 ಕೋಟಿ ರೂ. ಅನುದಾನ ನೀಡಲು ಮುಖ್ಯಮಂತ್ರಿಗಳು ಸಮ್ಮತಿ ನೀಡಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಪಂದ್ಯಾವಳಿಯ ಆರಂಭಿಕ ದಿನವಾದ ಮಾ.20ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಉದ್ಘಾಟನೆಯಾಗಲಿದೆ. ಇದಕ್ಕೆ ಮುಖ್ಯಮಂತ್ರಿಗಳು ಸಮ್ಮತಿಯನ್ನು ನಮ್ಮ ಭೇಟಿಯ ಸಂದರ್ಭ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

2018ರಲ್ಲಿ ನಡೆದ ಕೊಡವ ಕೌಟುಂಬಿಕ ಹಾಕಿ ಉತ್ಸವದಲ್ಲಿ 330 ವಿವಿಧ ಕೊಡವ ಕುಟುಂಬಗಳು ಪಾಲ್ಗೊಂಡಿದ್ದವು. ಈ ಬಾರಿ ದಾಖಲೆಯ 350 ತಂಡಗಳ ಪಾಲ್ಗೊಳ್ಳುವಿಕೆಯನ್ನು ನಿರೀಕ್ಷಿಸಲಾಗಿದೆ. ಮುಂದಿನ ಜನವರಿ ಆರಂಭದಿಂದ ತಂಡಗಳ ನೋಂದಣಿ ಕಾರ್ಯಕ್ಕೆ ಚಾಲನೆ ದೊರಕಲಿದೆ ಎಂದು ಮನು ಮುತ್ತಪ್ಪ ಮಾಹಿತಿ ನೀಡಿದರು.

ಆಟಗಾರರಿಗೆ ಗೌರವಾರ್ಪಣೆ: ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಸಂದರ್ಭ ಕೊಡಗಿನಿಂದ ರಾಷ್ಟ್ರೀಯ ಹಾಕಿ ತಂಡವನ್ನು ಪ್ರತಿನಿಧಿಸಿದ ಕೊಡವ ಸಮೂಹ ಸೇರಿದಂತೆ ಇನ್ನಿತರ ಸಮೂಹದ ಎಲ್ಲರನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಗುವುದೆಂದು ತಿಳಿಸಿದರು. ಪಂದ್ಯಾವಳಿಯ ಉದ್ಘಾಟನಾ ಪಂದ್ಯಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಆಟ ವಾಡಿದ ಆಟಗಾರರ ತಂಡವನ್ನು ಕರೆಸುವ ಪ್ರಯತ್ನಗಳು ನಡೆಯುತ್ತಿರುವುದಾಗಿ ತಿಳಿಸಿದ ಅವರು, ಪಂದ್ಯಾವಳಿಯು ಹಾಕಿ ಕೊಡಗು ಸಂಸ್ಥೆಯ ಸಹಕಾರದೊಂದಿಗೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಪಂದ್ಯಾವಳಿಗೆ 4 ಮೈದಾನ: ತಿಂಗಳ ಕಾಲ ನಡೆಯುವ ಪಂದ್ಯಾವಳಿಯನ್ನು 3 ಮೈದಾನಗಳಲ್ಲಿ ನಡೆಸಲಾಗುತ್ತದೆ. ಮಳೆ ಮೊದಲಾದ ಕಾರಣಗಳಿಂದ ಪಂದ್ಯಗಳು ಮುಂದೂಡಲ್ಪಟ್ಟ ಸಂದರ್ಭಗಳಲ್ಲಿ ಬಳಸಲು ಮತ್ತೊಂದು ಮೈದಾನವನ್ನು ಸಜ್ಜುಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದ ಮನು ಮುತ್ತಪ್ಪ, ಹಾಕಿ ಉತ್ಸವದ ಜನಕ ದಿ. ಪಾಂಡಂಡ ಕುಟ್ಟಪ್ಪ ಅವರ ಪುತ್ರ ಪಾಂಡಂಡ ಬೋಪಣ್ಣ ಅವರು ಪ್ರಸ್ತುತ ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷರಾಗಿದ್ದು, ಇವರೂ ಪಂದ್ಯಾವಳಿ ಉದ್ಘಾಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಖಜಾಂಚಿ ಅಪ್ಪಚೆಟ್ಟೋಳಂಡ ವಸಂತ್ ಮುತ್ತಪ್ಪ, ಸಮಿತಿ ಸದಸ್ಯರಾದ ಅಪ್ಪಚೆಟ್ಟೋಳಂಡ ಹರೀಶ್ ಸೋಮಯ್ಯ, ಅಪ್ಪಚೆಟ್ಟೋಳವಂಡ ರವಿ ಮೊಣ್ಣಪ್ಪ, ಅಪ್ಪಚೆಟ್ಟೋಳಂಡ ಜನತ್ ಕುಮಾರ್ ಉಪಸ್ಥಿತರಿದ್ದರು.

ವಿಧಾನಸಭಾ ಚುನಾವಣೆಗೆ ಚುನಾವಣಾ ಆಯೋಗ ಸಿದ್ಧತೆ

ಸಿದ್ಧತೆ ಬಗ್ಗೆ ಮಾಹಿತಿ ಪಡೆದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ



ಮಡಿಕೇರಿ, ಡಿ.6– ರಾಜ್ಯ ವಿಧಾನಸಭಾ ಚುನಾವಣೆ ಸಂಬಂಧ ಚುನಾವಣಾ ಆಯೋಗದಿಂದ ಸಿದ್ಧತೆಗಳು ನಡೆದಿದ್ದು, ಚುನಾವಣಾ ಆಯೋಗ ಹೊರಡಿಸುವ ಆದೇಶಗಳನ್ನು ಚಾಚು ತಪ್ಪದೇ ಪಾಲಿಸುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಜ್ಯ ವಿಧಾನಸಭೆ ಸಾರ್ವತ್ರಿಕ ಚುನಾವಣೆ ಸಂಬಂಧ ಇದುವರೆಗೆ ಕೈಗೊಳ್ಳಲಾಗಿರುವ ಕಾರ್ಯಗಳ ಬಗ್ಗೆ ಮಂಗಳವಾರ ಮಾಹಿತಿ ಪಡೆದು ಅವರು ಮಾತನಾಡಿದರು.

ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣಾ ಅಭಿಯಾನ ನಡೆಯುತ್ತಿದ್ದು, 18 ವರ್ಷ ಮೇಲ್ಪಟ್ಟವರೆಲ್ಲರೂ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಿಕೊಳ್ಳಬೇಕು. ಪಡಿತರ ಚೀಟಿ ಪಡೆದಿರುವ ಕುಟುಂಬಗಳ ಸಂಖ್ಯೆ ಮತ್ತು ಕುಟುಂಬ ದವರ ವಿವರವನ್ನು ಪರಿಶೀಲಿಸಿದರೆ ನಿಖರ ಮಾಹಿತಿ ಲಭ್ಯವಾಗಲಿದೆ ಎಂದರು.

ಹಾಡಿಗಳು ಸೇರಿದಂತೆ ಎಲ್ಲಾ ಮತಗಟ್ಟೆ ವ್ಯಾಪ್ತಿಯಲ್ಲಿ ಭೇಟಿ ನೀಡಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ, ಹೆಸರು ತೆಗೆಯುವುದು ಮತ್ತಿತರ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸಬೇಕು. ದಿನಾಂಕ, ಸ್ಥಳ, ಮತ್ತಿತರ ಸಂಬಂಧ ಜತನ ಮಾಡಿಕೊಳ್ಳಬೇಕು ಎಂದು ಅವರು ಹೇಳಿದರು.

ಅರ್ಹರೆಲ್ಲರೂ ಮತದಾನ ಮಾಡಬೇಕು ಎಂಬುದು ಚುನಾವಣಾ ಆಯೋಗದ ಆಶಯವಾಗಿದೆ. ಯುವ ಮತದಾರರ ಹೆಸರು ನೋಂದಣಿಗೆ ಹೆಚ್ಚಿನ ಗಮನಹರಿಸಬೇಕು. ಮತದಾರರ ಗುರುತಿನ ಚೀಟಿ ವಿತರಣೆಗೆ ಕ್ರಮವಹಿಸಬೇಕು. ಸಹಾಯವಾಣಿ 1950 ಕರೆಗಳಿಗೆ ಸ್ಪಂದಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಸೂಚಿಸಿದರು.

ವಿಕಲಚೇತನ ಮತದಾರರಿಗೆ ಮತಗಟ್ಟೆಯಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸುವುದು. ಇವಿಎಂ ಮತ್ತು ವಿವಿಪಿಎಟಿ(ವಿವಿಪ್ಯಾಟ್) ಇರುವ ಕಡೆ ಸೂಕ್ತ ಭದ್ರತೆ ಕಲ್ಪಿಸಬೇಕು ಎಂದರು.

ಕೊಡಗು ಜಿಲ್ಲೆಯ ಸಾಂಪ್ರದಾಯಿಕ ಮತಗಟ್ಟೆ ಸ್ವೀಪ್ ಮೂಲಕ ಸ್ಪರ್ಧಾ ಕಾರ್ಯಕ್ರಮ ಏರ್ಪಡಿಸುವುದು, ಸಖಿ ಮತಗಟ್ಟೆ ಸ್ಥಾಪಿಸುವುದು ಹೀಗೆ ಹಲವು ವಿಭಿನ್ನ ಕಾರ್ಯಗಳನ್ನು ನಿರ್ವಹಿಸುವಂತೆ ಮನೋಜ್ ಕುಮಾರ್ ಮೀನಾ ಅವರು ಸಲಹೆ ಮಾಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಮಾಹಿತಿ ನೀಡಿ ಜಿಲ್ಲೆಯಲ್ಲಿ ಮತಗಟ್ಟೆ ಪರಿಷ್ಕರಣೆ ಸಂಬಂಧ ಬಿಎಲ್‌ಒಗಳಿಗೆ ತರಬೇತಿ ನೀಡಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಮನೆ ಮನೆಗೆ ಭೇಟಿ ನೀಡಿ ಸರ್ವೇ ಕಾರ್ಯ ನಡೆಸಲಾಗಿದೆ ಎಂದರು.

ರಾಜಕೀಯ ಪಕ್ಷಗಳ ಮುಖಂಡರ ಜೊತೆ ಸಮಾಲೋಚನೆ ನಡೆಸಲಾಗಿದೆ. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಸಂಬಂಧಿಸಿದಂತೆ ಜಾಗೃತಿ ಮೂಡಿಸಲಾಗಿದೆ. ಜಿಲ್ಲೆಯ 250 ಹಾಡಿಗಳಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ ಮತ್ತಿತರ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದರು.

ಇಂದು ಹುತ್ತರಿ ಹಬ್ಬ

ಮಡಿಕೇರಿ, ಡಿ.6– ಕೊಡಗಿನಾದ್ಯಂತ ನಾಳೆ (ಡಿ.7) ಸಂಭ್ರಮದಿಂದ ಹುತ್ತರಿ ಹಬ್ಬವನ್ನು ಆಚರಿಸಲಾಗುವುದು.

ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಹುತ್ತರಿ ಹಬ್ಬಕ್ಕೆ ಮುಹೂರ್ತ ನಿಗದಿ ಮಾಡಲಾಗಿದ್ದು, ಬುಧವಾರ ರಾತ್ರಿ 7 ಗಂಟೆ 20 ನಿಮಿಷದಲ್ಲಿ ಶ್ರೀ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ನೆರೆ ಕಟ್ಟುವುದು, 8 ಗಂಟೆ 20 ನಿಮಿಷಕ್ಕೆ ಕದಿರು ತೆಗೆಯುವುದು ಬಳಿಕ ಪ್ರಸಾದ ವಿತರಣೆ ಕಾರ್ಯ ನಡೆಯಲಿದೆ. ಜಿಲ್ಲೆಯಾದ್ಯಂತ 7.50 ಗಂಟೆಗೆ ನೆರೆ ಕಟ್ಟುವುದು, 8.50ಕ್ಕೆ ಕದಿರು ತೆಗೆಯುವುದು, 9.50ಕ್ಕೆ ಪ್ರಸಾದ ಸೇವನೆ ಕಾರ್ಯಗಳು ನಡೆಯಲಿದೆ.

ಬೈಕಿಗೆ ಟಾಟಾ ಏಸ್ ಡಿಕ್ಕಿ: ಇಬ್ಬರು ಸಾವು

ಮಡಿಕೇರಿ, ಡಿ.6– ಹಾಸನ ಜಿಲ್ಲೆ ಅರಕಲಗೋಡು ಬಳಿ ದ್ವಿಚಕ್ರ ವಾಹನಕ್ಕೆ ಟಾಟಾ ಏಸ್ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ವಿರಾಜಪೇಟೆ ತಾಲೂಕಿನ ಸಿದ್ದಾಪುರದ ಇಬ್ಬರು ನಿವಾಸಿಗಳು ಮೃತಪಟ್ಟಿರುವ ಘಟನೆ ನಡೆದಿದೆ.

ಸಿದ್ದಾಪುರ ನಿವಾಸಿಗಳಾದ ಮೂರ್ತಿ(39) ಮತ್ತು ಉಮ್ಮರ್(47) ಮೃತಪಟ್ಟ ವ್ಯಕ್ತಿಗಳಾಗಿದ್ದಾರೆ. ಗಾರೆ ಕೆಲಸಗಾರ ಮೂರ್ತಿಯ ಕೈಗೆ ಪೆಟ್ಟಾಗಿದ್ದು, ಚಿಕಿತ್ಸೆಗೆಂದು ಇವರಿಬ್ಬರು ಅರಕಲಗೋಡುವಿಗೆ ತೆರಳಿದ್ದರು. ಚಿಕಿತ್ಸೆಯ ನಂತರ ಬೈಕ್‌ನಲ್ಲಿ ಸಿದ್ದಾಪುರಕ್ಕೆ ಆಗಮಿಸುತ್ತಿದ್ದ ಸಂದರ್ಭ ಅರಕಲಗೋಡು ಮಾದೀಹಳ್ಳಿ ಬಳಿ ಬೈಕಿಗೆ ಟಾಟಾ ಏಸ್ ವಾಹನ ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ಇದರಿಂದ ದ್ವಿಚಕ್ರ ವಾಹನ ಸವಾರರಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಘಟನೆ ಕುರಿತು ಅರಕಲಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮೃತದೇಹವನ್ನು ಅಲ್ಲಿನ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದ್ದು, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿರಾಜಪೇಟೆ ಪುರಸಭೆ ವಿರುದ್ಧ ಡಿ.14ರಂದು ಪ್ರತಿಭಟನೆ

ವಿರಾಜಪೇಟೆ, ಡಿ.6– ವಿರಾಜಪೇಟೆ ಪುರಸಭೆ ನಗರದ ಜನತೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲವಾಗಿರುವ ಹಿನ್ನಲೆಯಲ್ಲಿ ನಾಗರಿಕ ಸಮಿತಿ ವತಿಯಿಂದ ಡಿ,14 ರಂದು 11ಗಂಟೆಗೆ ಪುರಸಭೆ ಎದುರು ಪ್ರತಿಭಟನೆ ನಡೆಸಲಾ ಗುವುದು ಎಂದು ಸಮಿತಿಯ ಸಂಚಾಲಕ ಡಾ.ಇ.ಆರ್ ದುರ್ಗಾಪ್ರಸಾದ್ ತಿಳಿಸಿದ್ದಾರೆ.

ನಾಗರಿಕ ಸಮಿತಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಮುಖ್ಯ ರಸ್ತೆಗಳು ಹಾಗೂ 18 ವಾರ್ಡ್‌ಗಳ ಎಲ್ಲಾ ರಸ್ತೆಗಳು ಗುಂಡಿಮಯವಾಗಿದ್ದು, ವಾಹನಗಳು ಮತ್ತು ಸಾರ್ವಜನಿಕರು ಓಡಾಡಲು ಸಾಧ್ಯವಾಗುತ್ತಿಲ್ಲ. ಇದನ್ನು ನೋಡಿದರೂ ನೋಡದಂತಿರುವ ಆಡಳಿತ ಮಂಡಳಿ ವಿರುದ್ಧ ಈ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ನಾಗರಿಕ ಸಮಿತಿ ಸಹ ಸಂಚಾಲಕ ವಕೀಲ ಸೋಮ ಲೋಕನಾಥ್ ಮಾತನಾಡಿ, ವಿರಾಜಪೇಟೆ ಪಪಂ ಅನ್ನು ಮೇಲ್ದರ್ಜೆಗೇರಿಸಿ ಪುರಸಭೆ ಯಾದ ನಂತರವು ನಗರದ ರಸ್ತೆಗಳು ಸೇರಿದಂತೆ ಬಹುತೇಕ ಎಲ್ಲಾ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ. ರಸ್ತೆಗಳಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ಅಪ ಘಾತಕ್ಕೆ ಆಹ್ವಾನ ನೀಡುವಂತಾಗಿದೆ. ರಸ್ತೆ ನಿರ್ವಹಣೆ ಮಾಡುವಲ್ಲಿ ಪುರಸಭೆ ಸಂಪೂರ್ಣ ವಿಫಲವಾಗಿದೆ. ಇದರ ವಿರುದ್ಧ ಹೋರಾಟ ಅನಿವಾರ್ಯವಾಗಿರುವುದರಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಿತಿ ಸದಸ್ಯ ಪಿ.ಕೆ.ಅಬ್ದುಲ್ ರೆಹ ಮಾನ್ ಮಾತನಾಡಿ, ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸುವುದು ಸ್ಥಳೀಯ ಸಂಸ್ಥೆಗಳ ಕರ್ತವ್ಯವಾಗಿದೆ. ಆದರೆ ಪುರಸಭೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರು ಕಂದು ಮಿಶ್ರಿತ ಬಣ್ಣದಿಂದ ಕೂಡಿದ್ದು, ಕುಡಿಯಲು ಯೋಗ್ಯವಾಗಿಲ್ಲ. ಕೇಂದ್ರ ಸರ್ಕಾರ ಜಲಜೀವನ್ ಮಿಷನ್ ಅಡಿಯಲ್ಲಿ ಸುಮಾರು 65 ಕೋಟಿ ರೂಗಳ ಅನುದಾನ ಒದಗಿಸಿದ್ದರು ಪುರಸಭೆ ಸಮರ್ಪಕವಾಗಿ ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸುತ್ತಿಲ್ಲ ಎಂದು ದೂರಿದರು. ಸಭೆಯಲ್ಲಿ ಸಮಿತಿ ಸದಸ್ಯರಾದ ಅಬ್ದುಲ್ ಶರೀಫ್, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಮೇಯುತ್ತಿದ್ದ ಹಸುಗಳ ಮೇಲೆ ಗುಂಡಿನ ದಾಳಿ

ಎರಡು ಹಸುಗಳ ಸಾವು, ಮತ್ತೊಂದು ಗಂಭೀರ

ವಿರಾಜಪೇಟೆ, ಡಿ. 6– ಜಮೀನಿನಲ್ಲಿ ಮೇಯುತ್ತಿದ್ದ ಹಸುಗಳ ಮೇಲೆ ಜಮೀನಿನ ಮಾಲೀಕ ಗುಂಡಿನ ದಾಳಿ ನಡೆಸಿದ ಪರಿಣಾಮ ಎರಡು ಹಸುಗಳು ಸಾವನ್ನಪ್ಪಿ, ಮತ್ತೊಂದು ಹಸು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಗುಹ್ಯ ಗ್ರಾಮದಲ್ಲಿ ಇಂದು ಸಂಭವಿಸಿದೆ.

ನರೇಂದ್ರ ನಾಯ್ಡು ಎಂಬುವರ ಜಮೀನಿನಲ್ಲಿ ಮಣಿ ಎಂಬುವರಿಗೆ ಸೇರಿದ ಮೂರು ಹಸುಗಳು ಮೇಯುತ್ತಿದ್ದನ್ನು ಕಂಡು ಮಾಲೀಕ ನರೇಂದ್ರ ನಾಯ್ಡು ಬಂದೂಕಿನಿಂದ ಗುಂಡು ಹಾರಿಸಿದ್ದಾರೆ. ಇದರಿಂದ ಎರಡು ಹಸುಗಳು ನರಳಿ, ನರಳಿ ಸ್ಥಳದಲ್ಲೇ ಸಾವನ್ನಪ್ಪಿವೆ. ಮತ್ತೊಂದು ಹಸು ಸಾವು-ಬದುಕಿನ ನಡುವೆ ಹೋರಾಡುತ್ತಿದೆ. ತನ್ನ ಜಮೀನಿನಲ್ಲಿರುವ ಫಸಲನ್ನು ತಿಂದು ಹಾಳು ಮಾಡುತ್ತಿರುವುದನ್ನು ಕಂಡು ಕುಪಿತಗೊಂಡು ಮಾಲೀಕ ನರೇಂದ್ರ ನಾಯ್ಡು ಈ ಕೃತ್ಯವೆಸಗಿದ್ದು, ಘಟನೆ ನಂತರ ಪರಾರಿಯಾಗಿದ್ದಾರೆ. ಈ ಸಂಬಂಧ ಹಸುಗಳ ಮಾಲೀಕ ಮಣಿ ಅವರು ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ಇಂದು ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ


ಚಾಮರಾಜನಗರ, ಡಿ.6– ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಅವರು ಡಿ.7ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಬುಧವಾರ ಬೆಳಿಗ್ಗೆ 10.30 ಗಂಟೆಗೆ ಗುಂಡ್ಲುಪೇಟೆಗೆ ಆಗಮಿಸಿ ಮುಖ್ಯಮಂತ್ರಿಗಳು ಜಿಲ್ಲೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ಕಚೇರಿಯಲ್ಲಿ ಮುಖಂಡರೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 12.30 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸಿ ನಗರದ ಜಿಪಂ ಸಭಾಂಗಣದಲ್ಲಿ ಸಿಎಂ ಜಿಲ್ಲಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ ನಡೆಸುವರು.

ಮಧ್ಯಾಹ್ನ 2ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಿಎಂ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರೊಂದಿಗೆ ಚರ್ಚೆ ನಡೆಸುವರು. ಮಧ್ಯಾಹ್ನ 2.30 ಗಂಟೆಗೆ ಹಿರಿಯ ಅಧಿಕಾರಿಗಳೊಂದಿಗೆ ಕಾರ್ಯಕ್ರಮದ ಸ್ಥಳ ಪರಿಶೀಲನೆ ನಡೆಸುವರು. ಸಂಜೆ 4 ಗಂಟೆಗೆ ಹನೂರಿಗೆ ಆಗಮಿಸಿ ಸಿಎಂ ಕಾರ್ಯಕ್ರಮ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಹಿರಿಯ ಅಧಿಕಾರಿಗಳೊಂದಿಗೆ ಕಾರ್ಯಕ್ರಮದ ಸ್ಥಳ ಪರಿವೀಕ್ಷಣೆ ಮಾಡುವರು. ಸಂಜೆ 4.30 ಗಂಟೆಗೆ ಪಕ್ಷದ ಕಚೇರಿಯಲ್ಲಿ ಪಕ್ಷದ ಮುಖಂಡರೊಂದಿಗೆ ಚರ್ಚೆ ನಡೆಸುವರು.

ಚನ್ನಬಸವಣ್ಣ ನಿಧನ

ಚಾಮರಾಜನಗರ, ಡಿ.6– ತಾಲೂಕಿನ



ಉಮ್ಮತ್ತೂರು ಗ್ರಾಮದ ಚನ್ನಬಸವಣ್ಣ ಉರುಫ್ ಕಾಳಪ್ಪ(60) ಇಂದು ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿ ಮೃತರ ತೋಟದಲ್ಲಿ ನೆರವೇರಿತು. ಮೃತರು ರಸ್ತೆ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟೇಶ್ ಶಾಸ್ತ್ರಿ

ಚಾಮರಾಜನಗರ, ಡಿ.6– ನಗರದ



ಎಸ್.ವೆಂಕಟೇಶ್ ಶಾಸ್ತ್ರಿ (67) ಸೋಮವಾರ ಕೊಳದ ಬೀದಿಯಲ್ಲಿರುವ ಅವರ ನಿವಾಸದಲ್ಲಿ ನಿಧನರಾದರು. ಇವರು ಕೊಳದ ಬೀದಿಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಬಳಗ ವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶಂಕರ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ನಡೆಯಿತು.

ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನ ಆಚರಣೆ

ಅಂಬೇಡ್ಕರ್ ಚಿಂತನೆ ಅಳವಡಿಸಿಕೊಳ್ಳಲು ಜಿಲ್ಲಾಧಿಕಾರಿ ಕರೆ



ಚಾಮರಾಜನಗರ, ಡಿ.6– ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಅಪಾರವಾಗಿದ್ದು, ಅವರ ಉದಾತ್ತ ಚಿಂತನೆಗಳನ್ನು ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನ ಆಚರಣೆ ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಮಾನವ ಜನಾಂಗದ ಏಳಿಗೆಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ಮಹನೀಯರ ಆದರ್ಶ ಚಿಂತನೆಗಳನ್ನು ಮರೆಯಬಾರದು. ದೇಶ ಸಮಾಜದ ಸುಧಾರಣೆ ಹಾಗೂ ಒಳ್ಳೆಯ ದಾರಿಯಲ್ಲಿ ನಡೆಯಲು ಡಾ. ಬಿ.ಆರ್. ಅಂಬೇಡ್ಕರ್ ಅವರ ಮೌಲ್ಯಯುತ ಚಿಂತನೆಗಳನ್ನು ಅಳವಡಿಸಿಕೊಂಡು ಮುಂದೆ ಹೋಗಬೇಕೆಂದು ಜಿಲ್ಲಾಧಿಕಾರಿಯವರು ತಿಳಿಸಿದರು. ಯಾರು ಬಲಹೀನರಾಗಬಾರದು, ಪ್ರತಿಯೊಬ್ಬರಲ್ಲೂ ತಮ್ಮದೇ ಆದ ಶಕ್ತಿ ಇರುತ್ತದೆ. ನಮ್ಮಲ್ಲಿ ನಾವೇ ಶಕ್ತಿ ತುಂಬುವಂತಹ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಅಂಬೇಡ್ಕರ್ ಅವರು ಪ್ರತಿಪಾದಿಸಿದ ವಿಚಾರ ಆಲೋಚನೆ ಆದರ್ಶಗಳನ್ನು ಪಾಲಿಸಬೇಕು. ಇದಕ್ಕಾಗಿ ಪ್ರತಿಯೊಬ್ಬರು ಶಪಥ ಮಾಡಬೇಕು ಎಂದರು.

ಅಂಬೇಡ್ಕರ್ ಅವರ ಮಹತ್ತರ ಧ್ಯೇಯೋದ್ದೇಶಗಳನ್ನು ಸ್ಮರಿಸಬೇಕು. ಶಾಂತಿ, ಆರೋಗ್ಯಯುತ ಸಮಾಜ ನಿರ್ಮಾಣದ ಗುರಿ ಹೊಂದಬೇಕು. ಅರ್ಥಪೂರ್ಣ ಬದುಕು ಹಾಗೂ ಸರಿಯಾದ ದಾರಿಯಲ್ಲಿ ಮುನ್ನಡೆಯಲು ಅಂಬೇಡ್ಕರ್ ಅವರ ಮಾದರಿ ಅನುಸರಿಸಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್ ಅವರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಸರ್ವ ಜನರ ಸಮಾನತೆಗೆ ಶ್ರಮಿಸಿದವರು. ಮಾನವೀಯ ಚಿಂತನೆಗಳನ್ನು ಹೊಂದಿದ್ದ ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬರು ಸ್ಮರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರಾದ ಸಿ.ಎಂ.ನರಸಿಂಹಮೂರ್ತಿ, ಮಹೇಶ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತ ಗೀತೆಗಳನ್ನು ಹಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮಲ್ಲಿಕಾರ್ಜುನ್, ವಿವಿಧ ಸಂಘಟನೆಗಳ ಮುಖಂಡರು, ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಮೊದಲಿಗೆ ಜಿಲ್ಲಾಡಳಿತ ಭವನದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಇತರೆ ಅಧಿಕಾರಿಗಳು ವಿವಿಧ ಸಂಘಟನೆಗಳ ಮುಖಂಡರು, ಗಣ್ಯರು ಮಾಲಾರ್ಪಣೆ ಮಾಡಿದರು.

ಅಂಬೇಡ್ಕರ್ ಆದರ್ಶ ಪಾಲಿಸುವ ಸಂಕಲ್ಪ ಮಾಡೋಣ



ಚಾಮರಾಜನಗರ, ಡಿ.6– ಮಹಾ ಮಾನವತಾವಾದಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಪ್ರತಿಪಾದಿಸಿರುವ ತತ್ವ, ಆದರ್ಶಗಳನ್ನು ಅರ್ಥ ಮಾಡಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವಂತಹ ಸಂಕಲ್ಪ ಪ್ರತಿಯೊಬ್ಬರೂ ಮಾಡಬೇಕಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನದ ಅಂಗವಾಗಿ ನಗರದ ಜಿಲ್ಲಾ ವಕೀಲರ ಸಂಘದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಈ ದೇಶಕ್ಕೆ ಧ್ರುವ ತಾರೆಯಾಗಿ ಉದಯಿಸಿದ ಬಾಬಾ ಸಾಹೇಬ್ ಅಂಬೇಡ್ಕರ್ ಸಮಾಜದಲ್ಲಿ ಬದಲಾವಣೆ ಪರ್ವ ಆರಂಭಿಸಿದರು. ಸಮಾಜವನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಅಂಬೇಡ್ಕರ್ ಚಿಂತನೆಗಳು ಬುನಾದಿ ಹಾಕಿಕೊಟ್ಟಿದ್ದು, ಇಂತಹ ಮಹಾನ್ ವ್ಯಕ್ತಿಯ ಶ್ರೇಷ್ಠತೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಗತ್ತಿನ ಶ್ರೇಷ್ಠ ಚಿಂತಕರು, ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಧಾರೆಗಳು ಸಮಾಜಕ್ಕೆ ದಾರಿದೀಪವಾಗಿದೆ. ಅವರ ಜೀವಿತಾವಧಿಯ ಸಾಧನೆ, ಭಾಷಣ ಹಾಗೂ ಹೋರಾಟಗಳನ್ನು ಅರಿಯುವುದರ ಜೊತೆಗೆ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಎಂ.ಆರ್.ಲೋಕಪ್ಪ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಎಸ್.ಹೊನ್ನಸ್ವಾಮಿ, ಚಂಪಕ, ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ನಿವೇದಿತಾ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಸ್.ಮಂಜು, ಪ್ರಧಾನ ಕಾರ್ಯದರ್ಶಿ ಎನ್. ಕೆ.ವಿರೂಪಾಕ್ಷಸ್ವಾಮಿ, ಖಜಾಂಚಿ ಆರ್.ಗಿರೀಶ್, ಜಂಟಿ ಕಾರ್ಯದರ್ಶಿ ಮಲ್ಲು ಹಾಗೂ ವಕೀಲರ ಸಂಘದ ಸದಸ್ಯರುಗಳು ಇದ್ದರು. ಕಾರ್ಯಕ್ರಮದಲ್ಲಿ ವಕೀಲ ಎಸ್.ಜಿ. ಮಹಾಲಿಂಗ ಗಿರ್ಗಿ ಅಂಬೇಡ್ಕರ್ ಆಶಯ ಗೀತೆಗಳನ್ನು ಹಾಡಿದರು.

ಕೇಂದ್ರದ ಭಾರತ ಪ್ರಜಾಪ್ರಭುತ್ವ ಜನನಿ ಸುತ್ತೋಲೆ ದಹಿಸಿ ಬಿಎಸ್‌ಪಿ ಪ್ರತಿಭಟನೆ



ಚಾಮರಾಜನಗರ, ಡಿ.6– ಕೇಂದ್ರ ಸರ್ಕಾರ ಹೊರಡಿಸಿರುವ ಭಾರತ ಪ್ರಜಾಪ್ರಭುತ್ವ ಜನನಿ ಎಂಬ ಸಂವಿಧಾನ ವಿರೋಧಿ ಸುತ್ತೋಲೆಯನ್ನು ದಹಿಸಿ ಬಹುಜನ ಸಮಾಜ ಪಕ್ಷದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಮಾನವ ಸರಪಳಿ ರಚಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕೇಂದ್ರ ಸರ್ಕಾರ ಸಂವಿಧಾನ ವಿರೋಧಿ ಸುತ್ತೋಲೆಯನ್ನು ಸುಟ್ಟು ಆಕ್ರೋಶ ವ್ಯಕ್ತಪಡಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ ಮಾತನಾಡಿ, ದೇಶದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ದಲಿತ ವಿರೋಧಿ, ಹಿಂದುಳಿದ ವರ್ಗಗಳ ವಿರೋಧಿ, ಅಲ್ಪಸಂಖ್ಯಾತರ ವಿರೋಧಿ, ಕಾರ್ಮಿಕ ವಿರೋಧಿ, ರೈತ ವಿರೋಧಿ ಕಾನೂನುಗಳನ್ನು ಜಾರಿ ಮಾಡಿದ್ದು, ಬಂಡವಾಳ ಶಾಹಿಗಳ ಪರವಾಗಿ ಆಡಳಿತ ನಡೆಸುತ್ತಿದೆ ಎಂದು ದೂರಿದರು.

ಸಂವಿಧಾನದ ಆಶಯಗಳಿಗೆ ಎಂದಿಗೂ ಬದ್ಧವಾಗಿರದಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಒಂದೆಡೆಯಾದರೆ ಈ ಪಕ್ಷಗಳನ್ನು ಮೀರಿ ಬಿಜೆಪಿಯು ಸಂವಿಧಾನವನ್ನು ಬದಲಾಯಿಸಲು ಪ್ರಯತ್ನಿಸುತ್ತಲೇ ಇದೆ. ಇದೀಗ ಕೇಂದ್ರದಲ್ಲಿರುವ ಮೋದಿ ಸರ್ಕಾರವು ಸಂವಿಧಾನ ದಿನವನ್ನು ಭಾರತ ಪ್ರಜಾಪ್ರಭುತ್ವದ ಜನನಿ ಎಂದು ಘೋಷಿಸಿ ವೇದಕಾಲದಲ್ಲೇ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಇದ್ದುದಾಗಿ ಸುಳ್ಳು ಇತಿಹಾಸವನ್ನು ನಮ್ಮೆಲ್ಲರ ತಲೆಗಳ ಮೇಲೆ ಹೇರುವ ಹುನ್ನಾರ ನಡೆಸಿದೆ. ನೈಜ ಇತಿಹಾಸವನ್ನು ನಾಶ ಮಾಡಲು ಹೊರಟಿದೆ. ಈ ಹುನ್ನಾರವನ್ನು ಬಹುಜನ ಸಮಾಜ ಪಕ್ಷ ಖಂಡಿಸುತ್ತದೆ. ಕೇಂದ್ರದ ಮೋದಿ ಸರ್ಕಾರವು ಈ ಸಂವಿಧಾನ ವಿರೋಧಿ ಆದೇಶವನ್ನು ಮುಂದೆ ಜಾರಿ ಮಾಡಬಾರದೆಂದು ಎನ್.ನಾಗಯ್ಯ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಅಮಚವಾಡಿ ಪ್ರಕಾಶ್, ಸಂಯೋಜಕ ಎಸ್.ಪಿ. ಮಹೇಶ್, ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ತಾಲೂಕು ಉಪಾಧ್ಯಕ್ಷ ರಾಜು ಕೋಡಿಉಗನೆ, ಜಿಲ್ಲಾ ಖಜಾಂಚಿ ರಾಜೇಂದ್ರ ಗ್ರಾಪಂ ಸದಸ್ಯರಾದ ಶಿವಣ್ಣ, ಬಾಲರಾಜು, ಅಲೋಕ್ ಇತರರು ಭಾಗವಹಿಸಿದ್ದರು.

ಶೌರ್ಯ ದಿವಸ್ ಪ್ರಯುಕ್ತ ಆಜಾದ್ ಹಿಂದೂ ಸೇನೆಯಿಂದ ರಕ್ತದಾನ ಶಿಬಿರ



ಚಾಮರಾಜನಗರ, ಡಿ.6– ಶೌರ್ಯ ದಿವಸ್ ಪ್ರಯುಕ್ತ ಆಜಾದ್ ಹಿಂದೂ ಸೇನೆ ವತಿಯಿಂದ ರಕ್ತದಾನ ಶಿಬಿರ ಯಶಸ್ವಿಯಾಗಿ ನಡೆಯಿತು.

ನಗರದ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ನಡೆದ ರಕ್ತದಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಜಾದ್ ಹಿಂದೂ ಸೇನೆ ಅಧ್ಯಕ್ಷ ಎಂ.ಎಸ್. ಪೃಥ್ವಿರಾಜ್ ಮಾತನಾಡಿ, 600 ವರ್ಷಗಳ ಹಿಂದೆ ಶ್ರೀರಾಮನ ಜನ್ಮಸ್ಥಳವಾದ ಅಯೋಧ್ಯೆಯಲ್ಲಿ ಇದ್ದ ಭವ್ಯ ರಾಮಮಂದಿರವನ್ನು ಕೆಡವಿ ಬಾಬ್ರಿ ಮಸೀದಿ ನಿರ್ಮಿಸಿ ಪ್ರಭು ಶ್ರೀ ರಾಮಚಂದ್ರನಿಗೆ ಅಪಮಾನ ಮಾಡಿದರು. ಈ ಕಳಂಕವನ್ನು 1992 ಡಿ.6 ರಂದು ಬಾಬ್ರಿ ಮಸೀದಿ ಧ್ವಂಸಗೊಳಿಸಿ ಸಶಕ್ತ ಹಿಂದೂಗಳ ಶೌರ್ಯವನ್ನು ಜಗತ್ತಿಗೆ ಸಾರಿದ ಹೆಮ್ಮೆಯ ದಿನ ಇದಾಗಿದ್ದು, ಈ ಒಂದು ಕಳಂಕವನ್ನು ಮುಕ್ತಿಗೊಳಿಸಲು ಈ ಒಂದು ಹೋರಾಟದಲ್ಲಿ ತಮ್ಮ ರಕ್ತ ಅರ್ಪಿಸಿ ಬಲಿದಾನಗೈದ ಸಾವಿರಾರು ಹಿಂದೂ ವೀರರ ಸಲುವಾಗಿ ನಾವು ಸಹ ಅವರ ಆದರ್ಶವನ್ನು ಮೈಗೂಡಿಸಿಕೊಂಡು ರಕ್ತದಾನ ಮಾಡುವ ಮೂಲಕ ಹಿಂದೂ ವೀರರನ್ನು ಸ್ಮರಿಸೋಣ ಎಂದರು. ಹಿಂದೂಗಳ ಸಪ್ತಮೋಕ್ಷದಾಯಕ ನಗರಗಳಲ್ಲಿ ಅಯೋಧ್ಯೆಯು ಪ್ರಥಮ ಸ್ಥಾನದಲ್ಲಿದ್ದು, ಹಿಂದೂ ಶ್ರದ್ಧೆ ಕೇಂದ್ರವಾಗಿದೆ. ಭವ್ಯ ಶ್ರೀರಾಮಮಂದಿರ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಪಣತೊಟ್ಟಿದೆ. ಅದರಂತೆ ಮುಂದೆಯೂ ಕಾಶಿ ವಿಶ್ವನಾಥ ಮಂದಿರದಲ್ಲಿ ಗ್ಯಾನವಾಪಿ ಮಸೀದಿಯು ನಿರ್ಮಾಣವಾಗಿದ್ದು, ಇದನ್ನು ಸಹ ತೆರವುಗೊಳಿಸಿ ಭವ್ಯ ಈಶ್ವರ ಮಂದಿರ ನಿರ್ಮಾಣಕ್ಕೆ ಹಿಂದೂ ಪಣತೊಡಬೇಕು ಎಂದರು.

ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ ಚಾಲನೆ ನೀಡಿದರು. ತಾಲೂಕು ಅಧ್ಯಕ್ಷ ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಧು ಮಂಗಲ, ಹರದನಹಳ್ಳಿ ಕುಮಾರ್, ಕೃಷ್ಣ, ಸುರೇಶ್, ಟೌನ್ ಅಧ್ಯಕ್ಷ ಪ್ರಭು, ಯುವ ಮುಖಂಡ ಆನಂದ, ಅಭಿ, ರಾಮಸಮುದ್ರ ಚೇತು, ಅಭಿ, ಚಂದು, ಗುಂಡ್ಲುಪೇಟೆ ಸಂಜಯ್ ಇತರರು ಭಾಗವಹಿಸಿದ್ದರು.

ಅಂಬೇಡ್ಕರ್ ಸಂವಿಧಾನವೇ ದೇವರಾಗಬೇಕು

ಸಾಹಿತಿ ಪ್ರೊ. ಕೆ.ಎಸ್. ಭಗವಾನ್ ಹೇಳಿಕೆ



ಮೈಸೂರು,ಡಿ.6(ಆರ್‌ಕೆಬಿ)–ಎಲ್ಲಾ ದೇವರ ತ್ಯಜಿಸಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನವೇ ದೇವರಾಗಬೇಕು ಎಂದು ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಹೇಳಿದರು.

ಮಹಾರಾಜ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿಗಳ ಜನ ಜಾಗೃತಿ ಸಮಾವೇಶದಲ್ಲಿ ಮಾತನಾಡಿದ ಅವರು, ಇಂದಿಗೂ ಅನ್ಯಾಯ ನಿಂತಿಲ್ಲ. ಅಂಬೇಡ್ಕರ್ ಅವರು ದಲಿತರಿಗೆ ಮಾತ್ರ ಹೋರಾಡಿಲ್ಲ. ಎಲ್ಲ ವರ್ಗದ, ಸಮುದಾಯಗಳ ಏಳಿಗೆಗಾಗಿ ಶ್ರಮಿಸಿದರು. ವೈದಿಕ ಧರ್ಮವು ಶೂದ್ರ ಸಮುದಾಯಗಳಿಗೆ ವಿಧಿಸಿದ್ದ ಸಂಕೋಲೆಯನ್ನು ಸಂವಿಧಾನದಿಂದ ಕಿತ್ತು ಹಾಕಿದರು. ಆದರೆ, ಶೂದ್ರರು ಇನ್ನೂ ಗುಲಾಮಗಿರಿಯಿಂದ ಹೊರಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತ್ವ ಸಮಾಜ ಸ್ಥಾಪನೆಯಾಗಲು ಶೂದ್ರ ಸಮುದಾಯ ಸಂಘಟಿತವಾಗಬೇಕು. ಡಾ. ಅಂಬೇಡ್ಕರ್ ಹೆಸರನ್ನು ಹೇಳಿಕೊಂಡು ಓಡಾಡಿದರೆ ಕೊಳೆತ ಸಮಾಜವನ್ನು ಪರಿವರ್ತನೆ ಮಾಡಲು ಸಾಧ್ಯವಿಲ್ಲ. ಬೌದ್ಧ ಧರ್ಮ ಸ್ವೀಕರಿಸುವ ಮೂಲಕ ದಾರಿ ತೋರಿದ ಅಂಬೇಡ್ಕರ್ ಅವರನ್ನು ಅನುಸರಿಸುವ ದೃಢ ನಿರ್ಧಾರ ಮಾಡಬೇಕು. ಬೌದ್ಧ ಧರ್ಮ ಸ್ವೀಕಾರ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಹೇಳಿದ್ದ 22 ಸಂದೇಶಗಳನ್ನು ಪಾಲಿಸಬೇಕು ಎಂದು ಹೇಳಿದರು.

ದಲಿತ ಮಾನವ ಹಕ್ಕುಗಳ ವೇದಿಕೆ ರಾಜ್ಯ ಸಂಚಾಲಕ ಬಸವರಾಜ್ ಕೌತಾಳ್ ಮಾತನಾಡಿ, ಸಂವಿಧಾನದ ಆಶಯಗಳನ್ನು ನಾಶ ಮಾಡುವ ರಾಜಕೀಯ ಕುತಂತ್ರ ನಡೆಯುತ್ತಿದೆ. ಆಳುವ ಸರ್ಕಾರದಿಂದ ಪ್ರಜಾಪ್ರಭುತ್ವ ಬುಡಮೇಲು ಮಾಡಲಾಗುತ್ತಿದೆ. ಸಂವಿಧಾನದ ಬದಲು ಮನುವಾದ ಸ್ಥಾಪಿಸಲು ವ್ಯವಸ್ಥಿತವಾಗಿ ನಡೆದಿರುವ ರಾಜಕೀಯ ಶಕ್ತಿಗಳನ್ನು ಸೋಲಿಸಲು ಶೋಷಿತ ಸಮುದಾಯ ರಾಷ್ಟ್ರೀಯ ಶಕ್ತಿಯಾಗಬೇಕು ಎಂದರು. ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ನಳಂದ ಬೌದ್ಧ ವಿಹಾರದ ಬೋದಿರತ್ನ ಭಂತೇಜಿ, ದಸಂಸ ಸಮನ್ವಯ ಸಮಿತಿ ರಾಜ್ಯ ಸಂಚಾಲಕ ವೆಂಕಟಗಿರಿಯಯ್ಯ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಡಾ.ಆರ್. ಮೋಹನ್‌ರಾಜ್, ಉಪಾಧ್ಯಕ್ಷೆ ಸ್ವಪ್ನಾ ಮೋಹನ್, ಮುಖಂಡರಾದ ಎಸ್.ಆರ್. ಕಲ್ಲೂರು, ಶೇಖರ್ ಆವಂಜೆ, ಸಿದ್ದರಾಜು ಇನ್ನಿತರರು ಉಪಸ್ಥಿತರಿದ್ದರು.

ಮಹಿಳೆಯರ ಸಾಧನೆಗೆ ಡಾ.ಅಂಬೇಡ್ಕರ್ ರೂಪಿಸಿದ ಸಂವಿಧಾನದ ಹಕ್ಕುಗಳೇ ಕಾರಣ



ಮೈಸೂರು ವಿವಿ ಕುಲಸಚಿವೆ ಶೈಲಜಾ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಡಿ.6(ಎಂಟಿವೈ)–ಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡಲು ಡಾ.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕೊಟ್ಟ ಹಕ್ಕುಗಳೇ ಕಾರಣ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾದ ವಿ.ಆರ್. ಶೈಲಜಾ ತಿಳಿಸಿದ್ದಾರೆ.

ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರವು ಮಾತೃ ಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ 'ಭಾರತ ಭಾಗ್ಯ ವಿಧಾತ–ರೂಪಕ' ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಮಹಿಳೆಯರಿಗೆ ಹಕ್ಕು ಕಲ್ಪಿಸುವುದರ ಜೊತೆಗೆ ಅವರಿಗೆ ಧ್ವನಿಯಂತಿದ್ದರು. ಈ ಹಿಂದೆ ಕಲಿಕೆಯ ಅವಕಾಶ ಕೆಲವೇ ಕೆಲವು ಮಹಿಳೆಯರಿಗಷ್ಟೇ ಸೀಮಿತವಾಗಿತ್ತು. ಆದರೆ, ಇಂದು ಎಲ್ಲಾ ಸಮುದಾಯಗಳ ಮಹಿಳೆಯರು ಉನ್ನತ ಶಿಕ್ಷಣ ಪಡೆದು ಎಲ್ಲ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದಾರೆ. ಇದಕ್ಕೆ ಅಂಬೇಡ್ಕರ್ ಅವರು ನೀಡಿರುವ ಹಕ್ಕುಗಳೇ ಕಾರಣ ಎಂಬುದನ್ನು ಎಲ್ಲರೂ ಮನಗಾಣಬೇಕು ಎಂದರು.

ಇದೇ ವೇಳೆ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್, ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ನಂತರ ಸಂವಾದ ಕಾರ್ಯಕ್ರಮ ನಡೆಯಿತು. ಮಾತೃ ಮಂಡಳಿ ವಿದ್ಯಾ ಸಂಸ್ಥೆ ಅಧ್ಯಕ್ಷೆ ವಿಜಯಲಕ್ಷ್ಮೀ ಅರಸ್, ಗೌರವ ಕಾರ್ಯದರ್ಶಿ ಹೆಚ್.ಎ.ವಾಣಿ, ಡಾ.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ, ಪ್ರೊ.ಜೆ.ಸೋಮಶೇಖರ್ ಮತ್ತು ಮಾತೃಮಂಡಳಿ ವಿದ್ಯಾಸಂಸ್ಥೆ ಪ್ರಾಂಶುಪಾಲ ಸುರೇಶ್, ಪ್ರೊ.ಎನ್.ನರೇಂದ್ರಕುಮಾರ್, ದೈಹಿಕ ಶಿಕ್ಷಣ ಉಪನ್ಯಾಸಕ ವಿಶ್ವನಾಥ ಶೆಟ್ಟಿ, ಉಪನ್ಯಾಸಕಿ ಕೆ.ಆರ್.ಗಿರಿಜಮ್ಮ, ಡಾ.ಗೋಪಾಲ್ ಹಾಜರಿದ್ದರು.

ಅಂಬೇಡ್ಕರ್ ಮಹಾ ಪರಿನಿಬ್ಬಾಣ ದಿನ; ಮೈಸೂರಲ್ಲಿ ಬೆಳಗಿದ 'ಭೀಮ ಜ್ಯೋತಿ'



ಮೈಸೂರು, ಡಿ.6(ಜಿಎ)––ಮೈಸೂರಿನಲ್ಲಿ ಬೆಳಗಿದ 'ಭೀಮ ಜ್ಯೋತಿ', ಮೇಣದ ಬತ್ತಿಯನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದ ಮಕ್ಕಳು, ಹಿರಿಯರು, ಮಹಿಳೆಯರು, ವಿದ್ಯಾರ್ಥಿಗಳು ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಅಶೋಕಪುರಂ, ವಿನಾಯಕ ನಗರ(ಪಡುವಾರಹಳ್ಳಿ), ಗಾಂಧಿನಗರ ಸೇರಿದಂತೆ ನಗರದ ಬಹುತೇಕ ಬಡಾವಣೆಗಳಲ್ಲಿ ಆಯೋಜಿಸಿದ್ದ ಬಹು ಜನರ ಸಂಕಲ್ಪ ದಿನ ಹಾಗೂ ಭೀಮ ಜ್ಯೋತಿ ಮೆರವಣಿಗೆಯಲ್ಲಿ ಎಲ್ಲಾ ವಯೋಮಾನದವರು ಸಾಲಾಗಿ ಶಿಸ್ತಿನಿಂದ ಮೇಣದ ಬತ್ತಿ ಹಿಡಿದು ಸಾಗಿ ಎಲ್ಲರ ಗಮನ ಸೆಳೆದರು.

ಅಶೋಕಪುರಂನ ಡಾ.ಅಂಬೇಡ್ಕರ್ ಉದ್ಯಾನವನದ ಎದುರಿನಿಂದ ಪ್ರಾರಂಭಗೊಂಡ 'ಭೀಮ ಜ್ಯೋತಿ' ಮೆರವಣಿಗೆ 13 ಕ್ರಾಸ್‌ಗಳಲ್ಲಿ ಸಾಗಿ, ಸಿಲ್ಕ್ ಫ್ಯಾಕ್ಟರಿ, ಬಲ್ಲಾಳ್ ವೃತ್ತದಿಂದ ಪುನಃ ಅಂಬೇಡ್ಕರ್ ಉದ್ಯಾನವನದವರೆಗೆ ಸಾಗಿ ಮುಕ್ತಾಯವಾಯಿತು. ಈ ವೇಳೆ ಮೇಣದ ಬತ್ತಿಗಳನ್ನು ಹಿಡಿದು ಮೆರವಣಿಗೆ ಸಾಗಿದ ನೂರಾರು ಮಟಾಣಿಗಳು, ನಿವಾಸಿಗಳು ಸಮಾನತೆಯ ಸಂದೇಶ ಸಾರುವುದರ ಜೊತೆಗೆ ಅಂಬೇಡ್ಕರ್ ಅವರಿಗೆ ಜಯಘೋಷಗಳನ್ನು ಕೂಗಿದರು. 'ಭೀಮ ಜ್ಯೋತಿ' ಮೆರವಣಿಗೆ ಜೊತೆಗೆ ಸಾಗಿದ ಭಗವಾನ್ ಬುದ್ಧ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ವಿಶಿಷ್ಟ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದ ಸ್ತಬ್ಧಚಿತ್ರ ಎಲ್ಲರ ಗಮನ ಸೆಳೆಯಿತು.

ಅಲ್ಲದೆ ಮೆರವಣಿಗೆ ಸಾಗಿದ ಪ್ರತಿ ರಸ್ತೆಗಳಲ್ಲಿಯೂ ನಿವಾಸಿಗಳು ತಮ್ಮ ಮನೆಯ ಮುಂದೆ ಅಂಬೇಡ್ಕರ್ ಅವರ ಭಾವಚಿತ್ರ, ಪೋಸ್ಟರ್‌ಗಳನ್ನು ಅಳವಡಿಸಿ ಪುಷ್ಪಾಲಂಕಾರ ಮಾಡಿ 'ಭೀಮ ಜ್ಯೋತಿ' ಸ್ವಾಗತಿಸಿ, ಭಕ್ತಿ ಭಾವದಿಂದ ಸ್ಮರಿಸಿದರು.

ಇಲ್ಲಿನ ಉದ್ಯಾನವನದೊಳಗಿರುವ ಅಂಬೇಡ್ಕರ್ ಪತಿಮೆಗೆ ಮಾಲಾರ್ಪಣೆ ಮಾಡಿ ಜಯಘೋಷಗಳನ್ನು ಕೂಗಿ ಸ್ಮರಿಸಲಾಯಿತು. ವಿನಾಯಕನಗರ (ಪಡುವಾರಹಳ್ಳಿ)ದ ಡಾ.ಬಿ.ಆರ್.ಅಂಬೇಡ್ಕರ್ ಆಟೋ ನಿಲ್ದಾಣದ ಬಳಿ ಇರುವ ಅಂಬೇಡ್ಕರ್ ಅವರ ಪುತ್ಥಳಿ ಮುಂಭಾಗ ವಿಶೇಷ ವೇದಿಕೆಯಿಂದ ಆರಂಭವಾದ 'ಭೀಮ ಜ್ಯೋತಿ' ಮೆರವಣಿಗೆ ವಿನಾಯಕ ನಗರ ಪ್ರಮುಖ ರಸ್ತೆ ಮೂಲಕ ಸಾಗಿ ಸೆಂಟ್ ಜೋಸಫ್ ಕಾಲೇಜಿನ ವೃತ್ತಕ್ಕೆ ತಲುಪಿ ಮತ್ತೆ ಚಂದ್ರಮೌಳೇಶ್ವರ ದೇವಾಲಯದ ಮುಂಭಾಗದ ವೃತ್ತ ಮೂಲಕ ಮತ್ತೆ ಆಟೋ ನಿಲ್ದಾಣದ ಬಳಿಯ ವೇದಿಕೆಗೆ ಹಿಂದಿರುಗಿತು. ಈ ವೇಳೆ ಮೈಸೂರಿನ ಪ್ರಜ್ಞಾ ಪರಿವರ್ತನ ಕಲಾತಂಡದ ವತಿಯಿಂದ ಅಂಬೇಡ್ಕರ್ ಅವರ ಬಗ್ಗೆ ಗೀತ ಗಾಯನದ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಗಾಂಧಿನಗರದಲ್ಲಿ ಅಪಾರ ಸಂಖ್ಯೆಯ ಜನರು 'ಜ್ಞಾನ ಸೂರ್ಯರಿಗೆ ದೀಪ ನಮನ' ಎಂಬ ಕಾರ್ಯಕ್ರಮದ ಮೂಲಕ ಅಂಬೇಡ್ಕರ್ ಸರ್ಕಲ್‌ನಿಂದ 'ಭೀಮ ಜ್ಯೋತಿ' ಮೆರವಣಿಗೆ ಹೊರಟು ನಗರದ ಪುರಭವನದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ತಲುಪಿತು. ನಂತರ ಅಲ್ಲಿ ಮಾಲಾರ್ಪಣೆ ಮಾಡಿ ಜ್ಯೋತಿ ಬೆಳಗಿದರು.

ಮಹಾ ಪರಿನಿರ್ವಾಣ ದಿನದ ಹಿನ್ನೆಲೆಯಲ್ಲಿ ಸಂವಿಧಾನ ಶಿಲ್ಪಿ ಡಾ॥ ಅಂಬೇಡ್ಕರ್ ಅವರಿಗೆ

ಜಿಲ್ಲಾಡಳಿತವೂ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳಿಂದ ಗೌರವ ನಮನ



ಅಸಮಾಧಾನ ಪುರಭವನದ ಆವರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ವೇಳೆ ಕಾರ್ಯಕ್ರಮದ ವೇದಿಕೆ ಬಳಿ ಕುಳಿತಿದ್ದ ಭಂತೇಜಿ ಅವರನ್ನು ಆಹ್ವಾನಿಸದ ಕಾರಣಕ್ಕೆ ಮಾಜಿ ಮೇಯರ್ ಪುರುಷೋತ್ತಮ್ ಅಸಮಾಧಾನ ವ್ಯಕ್ತಪಡಿಸಿ, ಶಿಷ್ಟಾಚಾರ ಉಲ್ಲಂಘಿಸಲಾಗಿದೆ ಎಂದು ಕಿಡಿಕಾರಿದರು.

ಮಾಲಾರ್ಪಣೆ ಮಾಡಿ ಬರುತ್ತಿದ್ದಂತೆ ವೇದಿಕೆ ಏರಿದ ಪುರುಷೋತ್ತಮ್ ಮೈಕ್ ತೆಗೆದುಕೊಂಡು ಕಾರ್ಯಕ್ರಮದ ಆಯೋಜಕರನ್ನು ತರಾಟೆಗೆ ತೆಗೆದುಕೊಂಡರು. ಪಾಲಿಕೆ ಮಾಜಿ ಸದಸ್ಯ ವಾಸು ಸಹ ಧ್ವನಿಗೂಡಿಸಿದರು. ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಕೇವಲ ಫೋಟೋ ಸೆಷನ್‌ಗಾಗಿ ಕಾರ್ಯಕ್ರಮ ಮಾಡಬಾರದು. ಭಂತೇಜಿ ಅವರನ್ನು ಮಾಲಾರ್ಪಣೆ ಮಾಡಲು ಕರೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದನ್ನು ಗಮನಿಸಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಅಧಿಕಾರಿಗಳು ಭಂತೇಜಿ ಅವರನ್ನು ಗಮನಿಸಿಲ್ಲದಿರಬಹುದು. ಈಗ ಮತ್ತೊಮ್ಮೆ ಭಂತೇಜಿ ಅವರೊಂದಿಗೆ ಸೇರಿ ಮಾಲಾರ್ಪಣೆ ಮಾಡಬಹುದು. ಗೊಂದಲ ಸೃಷ್ಟಿಸುವುದು ಬೇಡ. ಕೂಗಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪುರುಷೋತ್ತಮ್, ನಾವು 50 ವರ್ಷದಿಂದಲೂ ಈ ಕಾರ್ಯಕ್ರಮ ಮಾಡಿಕೊಂಡು ಬರುತ್ತಿದ್ದೇವೆ. ಅಧಿಕಾರಿಗಳು ಮಾಹಿತಿ ಇಲ್ಲದೇ ಇರುವುದಿಲ್ಲ. ಉದ್ದೇಶಪೂರ್ವಕವಾಗಿ ಅಪಮಾನ ಮಾಡುವ ಧೋರಣೆಯಿಂದಲೇ ಅಧಿಕಾರಿಗಳು ಈ ರೀತಿ ವರ್ತಿಸಿದ್ದಾರೆ ಎಂದು ದೂರಿದರು. ಈ ವೇಳೆ ಭಂತೇಜಿ ಅವರು ವೇದಿಕೆಗೆ ತೆರಳಿ ಪುರುಷೋತ್ತಮ್ ಅವರನ್ನು ಸಮಾಧಾನ ಮಾಡಿದರು. ಬಳಿಕ ವೇದಿಕೆಯಲ್ಲಿದ್ದ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಭಂತೇಜಿ ಅವರೊಂದಿಗೆ ಅಧಿಕಾರಿಗಳು ಪುಷ್ಪಾರ್ಚನೆ ಮಾಡಿ, ಗೌರವ ಸಮರ್ಪಿಸಿದರು.

ಮೈಸೂರು,ಡಿ.6(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನದ ಅಂಗವಾಗಿ ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಡಳಿತ ಸೇರಿದಂತೆ ವಿವಿಧ ಸಂಘಸಂಸ್ಥೆಗಳ ವತಿಯಿಂದ ಗೌರವ ನಮನ ಸಲ್ಲಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಮರ್ಪಿಸಲಾಯಿತು. ಜಿಲ್ಲಾಡಳಿತದ ಪರವಾಗಿ ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾಲಾರ್ಪಣೆ ಮಾಡಿದರು.

ಇದೇ ವೇಳೆ ಮೇಯರ್ ಶಿವಕುಮಾರ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್, ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಶೋಷಿತ ವರ್ಗಗಳ ಹಕ್ಕಿಗಾಗಿ ಹೋರಾಡಿದ ಸಮಾಜ ಸುಧಾರಕರು. ಅವರು ತೋರಿಸಿದ ಸಮಾನತೆಯ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ದೊಡ್ಡ ಗೌರವ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಸ್.ಎ.ರಾಮದಾಸ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ, ಉಪಮೇಯರ್ ಡಾ.ಜಿ.ರೂಪಾ, ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ವತಿಯಿಂದ ಮಾಲಾರ್ಪಣೆ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಮಾಜಿ ಸಂಸದ ಆರ್.ಧ್ರುವನಾರಾಯಣ್ ಮಾತನಾಡಿ, ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನವನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದೇವೆ. ಶೋಷಿತ ಸಮುದಾಯಗಳ ಆಶಾಕಿರಣದಂತೆ ಇದ್ದ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಎಲ್ಲರಿಗೂ ಮೂಲಭೂತ ಹಕ್ಕನ್ನು ದೊರಕಿಸಿ ಕೊಟ್ಟರು. ಮೀಸಲಾತಿ ಸೌಲಭ್ಯವನ್ನು ನೀಡಿದರು. ಇದರಿಂದಾಗಿ ಪ್ರಸ್ತುತ ಶೋಷಿತ ಸಮುದಾಯಗಳು ಸ್ವಾಭಿಮಾನ ಹಾಗೂ ಗೌರವಯುತವಾಗಿ ಬದುಕಲು ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಸಂಸದ ಎಂ. ಶಿವಣ್ಣ ಮುಖಂಡರಾದ ಬಿ.ಎಂ. ರಾಮು, ಭಾಸ್ಕರ್, ಶಿವಪ್ರಸಾದ್, ಬಸವರಾಜ್, ಸಂತೋಷ್, ಹುಣಸೂರು ಬಸವಣ್ಣ, ಮಂಜು, ಮಾರುತಿ ಇತರರು ಹಾಜರಿದ್ದರು.

ಜೈ ಭೀಮ್ ಜನಸ್ಪಂದನಾ ವೇದಿಕೆ ವತಿಯಿಂದ ಡಾ.ಅಂಬೇಡ್ಕರ್(ಎಫ್‌ಟಿಎಸ್) ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಸಂಘದ ಅಧ್ಯಕ್ಷ ಚೇತನ್ ಕಾಂತರಾಜು, ಉಪಾಧ್ಯಕ್ಷರಾದ ಶೇಖರ್, ಮುಖಂಡರಾದ ಹರೀಶ್, ಶ್ರೀಕಾಂತ್, ಪ್ರತಾಪ್, ಪವಿತ್ರ ಕುಮಾರ್, ರಾಕೇಶ್, ಪಿ.ರಾಜು, ಸಾಗರ್ ಉಪಸ್ಥಿತರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ ದಿನದಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಭಾಗ್ಯಲಕ್ಷ್ಮಿ ಶ್ರೀನಿವಾಸಪ್ರಸಾದ್ ದಂಪತಿ ಅವರ ಮೈಸೂರಿನ ಭೀಮಸದನ ನಿವಾಸದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಕ್ಯಾಂಡಲ್ ಬೆಳಗಿಸಿ, ಪುಷ್ಪಾರ್ಚನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಾನತೆ ಸ್ವಾಭಿಮಾನ ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ಪದಾಧಿಕಾರಿಗಳಾದ ಡಾ.ನೀಲಗಿರಿ ತಳವಾರ್, ಪಿ.ನಂದಕುಮಾರ್, ಪ್ರಕಾಶಕರಾದ ಭರತ್ ರಾಮಸ್ವಾಮಿ, ಡಾ.ಮುಳ್ಳೂರು ನಂಜುಂಡಸ್ವಾಮಿ, ಸಿ.ಜಿ.ಶಿವಕುಮಾರ್, ಸಿಎ ಗಿರೀಶ್, ಸಂಸದರ ಆಪ್ತ ಸಹಾಯಕರಾದ ಆನಂದ್, ಪ್ರಸಾದ್ ಕುಮಾರ್ ಇನ್ನಿತರರಿದ್ದರು.



ಡಾ. ಅಂಬೇಡ್ಕರ್ ಪುಣ್ಯಸ್ಮರಣೆ ಅಂಗವಾಗಿ ಅವರ ಪ್ರತಿಮೆಗೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಬಿ.ಮಾಲತಿ, ಹಿಂದುಳಿದ ವರ್ಗಗಳ ಕಲ್ಯಾಣ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನಾ ಸಮನ್ವಯ ಅಧಿಕಾರಿ ಮುನಿರಾಜು ಹಾಗೂ ಸಿಬ್ಬಂದಿ ಮಾಲಾರ್ಪಣೆ ಮಾಡಿದರು.

ಅಸ್ಪೃಶ್ಯತೆ ನಿರ್ಮೂಲನೆಗೆ ಹೋರಾಡಿದ ಮಹಾನ್ ಚೇತನ ಡಾ.ಅಂಬೇಡ್ಕರ್

ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನಾಚರಣೆಯಲ್ಲಿ ಶಾಸಕ ಎಲ್.ನಾಗೇಂದ್ರ ಸ್ಮರಣೆ



ಮೈಸೂರು, ಡಿ.6(ಪಿಎಂ)– ಅಸ್ಪೃಶ್ಯತೆ ನಿರ್ಮೂಲನೆಗಾಗಿ ಹೋರಾಡಿದ ಮಹಾನ್ ಚೇತನ ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಪ್ರಪಂಚದಲ್ಲಿಯೇ ಅತ್ಯಂತ ಶ್ಲಾಘನೀಯವಾದ ಸಂವಿಧಾನ ಕೊಟ್ಟಿದ್ದಾರೆ ಎಂದು ಶಾಸಕ ಎಲ್.ನಾಗೇಂದ್ರ ಸ್ಮರಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹ ಆವರಣದಲ್ಲಿನ ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 66ನೇ ಮಹಾಪರಿನಿಬ್ಬಾಣ ದಿನಾಚರಣೆಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಇಡೀ ಜೀವನವನ್ನು ಶೋಷಿತರ ಏಳಿಗೆಗಾಗಿ ಮುಡುಪಾಗಿಟ್ಟಿದ್ದರು. ಸಂಪನ್ಮೂಲಗಳ ಹಂಚಿಕೆಯಲ್ಲಿ ಸಮಾನತೆ ಇರಬೇಕೆಂದು ಆರ್ಥಿಕ ಪ್ರಜಾಪ್ರಭುತ್ವ ಪ್ರತಿಪಾದಿಸಿದ್ದರು ಎಂದರು.

ದಲಿತ ಸಮುದಾಯದ ದಶಕಗಳ ಬೇಡಿಕೆಯಾದ ಮೀಸಲಾತಿ ಹೆಚ್ಚಿಸುವ ಐತಿಹಾಸಿಕ ನಿರ್ಣಯವನ್ನು ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ಕೈಗೊಂಡಿದೆ. ಅದಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಿ ಕೊಟ್ಟ ಮಾತಿನಂತೆ ನಮ್ಮ ಸರ್ಕಾರ ನಡೆದುಕೊಂಡಿದೆ. ಎಸ್‌ಸಿ–ಎಸ್‌ಟಿ ಸಮುದಾಯದ ಬಗ್ಗೆ ಬಿಜೆಪಿ ಸರ್ಕಾರ ಅಪಾರವಾದ ಕಾಳಜಿ ಹೊಂದಿದೆ ಎಂದರು.

ಈ ಸಂದರ್ಭದಲ್ಲಿ ನಗರಪಾಲಿಕೆ ನಾಮ ನಿರ್ದೇಶಿತ ಸದಸ್ಯ ಎಂ.ಚಿಕ್ಕವೆಂಕಟು, ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಪರಮಾನಂದ, ದಿ ಸಿಟಿ ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಚಾಮರಾಜ ಕ್ಷೇತ್ರದ ಎಸ್‌ಸಿ ಮೋರ್ಚಾ ಅಧ್ಯಕ್ಷ ಸ್ವಾಮಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ, ಮುಖಂಡರಾದ ಗಿರೀಶ್, ಕುಮಾರ್, ಹನುಮಂತಯ್ಯ, ನಾಗು, ದಾಸು, ಮೋಹನ್, ಮಹೇಶ್, ಚಲುವರಾಜು, ಕಿರಣ ಇನ್ನಿತರರಿದ್ದರು.



ಅಂಬೇಡ್ಕರ್ ಪರಿನಿರ್ವಾಣ ದಿನದ ಪ್ರಯುಕ್ತ ಟೌನ್‌ಹಾಲ್ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಧನಗಳ್ಳಿ ಸ್ವಾಮಿ, ಇಲವಾಲ ಚಾಮರಾಜ, ಮಳವಳ್ಳಿ ಚಂದ್ರು, ಚಿಟ್ಟಿಹುಂಡಿ ಸುನಿಲ್, ಹೆಚ್.ಡಿ.ಕೋಟೆ ಸ್ವಾಮಿ ಉಪಸ್ಥಿತರಿದ್ದರು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸ್ಥಗಿತ ಮಾಡಿಲ್ಲ: ಸರ್ಕಾರದ ಸ್ಪಷ್ಟನೆ



ಬೆಂಗಳೂರು: ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸ್ಥಗಿತ ಮಾಡಿಲ್ಲ ಅಂತ ವಿವಾದಕ್ಕೆ ಸರ್ಕಾರ ಸ್ಪಷ್ಟನೆ ನೀಡಿದೆ. ಈ ಕುರಿತು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಪ್ರಕಟಣೆ ಬಿಡುಗಡೆ ಮಾಡಿದ್ದು, 1–8ನೇ ತರಗತಿ SC-ST ವಿದ್ಯಾರ್ಥಿಗಳಿಗೆ ನೀಡುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸ್ಥಗಿತ ಮಾಡಿಲ್ಲ. ಸ್ಥಗಿತ ಮಾಡಿದ್ದಾರೆ ಎಂಬುದು ಸುಳ್ಳು ಅಂತ ಸ್ಪಷ್ಟಪಡಿಸಿದ್ದಾರೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮ ಸರ್ಕಾರದ ಯೋಜನೆಯಾಗಿದೆ. ವಿದ್ಯಾರ್ಥಿವೇತನ ಯೋಜನೆ ಮುಂದುವರೆಯಲಿದೆ. ಯಾವುದೇ ಕಾರಣಕ್ಕೂ ಯೋಜನೆ ನಿಲ್ಲಿಸೋದಿಲ್ಲ ಎಂದು ತಿಳಿಸಿದ್ದಾರೆ. 1–5ನೇ ತರಗತಿಗೆ ಬಾಲಕರಿಗೆ 1 ಸಾವಿರ, ಬಾಲಕಿಯರಿಗೆ 1,100 ರೂ. ನೀಡಲಾಗುತ್ತಿದೆ. 6–7ನೇ ತರಗತಿಯವರಿಗೆ ಬಾಲಕರಿಗೆ 1,150 ಮತ್ತು ಬಾಲಕಿಯರಿಗೆ 1,250 ರೂ. ನೀಡಲಾಗುತ್ತಿದೆ. 8ನೇ ತರಗತಿ ಬಾಲಕರಿಗೆ 1,250 ಮತ್ತು ಬಾಲಕಿಯರಿಗೆ 1,350 ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. 9 ಮತ್ತು 10ನೇ ತರಗತಿ ಮಕ್ಕಳಿಗೂ ವಿದ್ಯಾರ್ಥಿವೇತನ ಕೇಂದ್ರ ಹಾಗೂ ರಾಜ್ಯದ ನಡುವೆ 60:40 ಅನುಪಾತದಲ್ಲಿ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುತ್ತಿದೆ ಎಂದು ಸಚಿವರು ಸ್ಪಷ್ಟನೆ ನೀಡಿದ್ದಾರೆ.

ಇತ್ತೀಚೆಗೆ ಸ್ವಾಮೀಜಿಗಳನ್ನು ರಾಜಕೀಯಕ್ಕೆ ಎಳೆತರುತ್ತಿರುವ ಬಿಜೆಪಿ

ಯೋಗಿ ಆದಿತ್ಯನಾಥ್ ಆಯ್ತು... ಈಗ ಒಕ್ಕಲಿಗರ ಮಠಾಧಿಪತಿ ನಿರ್ಮಲಾನಂದನಾಥ ಶ್ರೀಗಳ ಸೆಳೆಯಲು ಯತ್ನ

ಕಾಂಗ್ರೆಸ್ ಭವನದಲ್ಲಿ ಡಾ.ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆಯಲ್ಲಿ ಪ್ರೊ.ಮಹೇಶ್ ಚಂದ್ರ ಗುರು ಆರೋಪ



ಮೈಸೂರು,ಡಿ.6(ಆರ್‌ಕೆಬಿ)–ಇತ್ತೀಚಿನ ದಿನಗಳಲ್ಲಿ ಸ್ವಾಮೀಜಿಗಳನ್ನು ರಾಜಕೀಯಕ್ಕೆ ಕರೆತರಲಾಗುತ್ತಿದ್ದು, ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ಅವರನ್ನು ಕರೆತಂದು ಮುಖ್ಯಮಂತ್ರಿ ಮಾಡಲಾಗಿತ್ತು. ಈಗ ನಮ್ಮ ರಾಜ್ಯದಲ್ಲೂ ಒಕ್ಕಲಿಗರ ಮತಗಳನ್ನು ಸೆಳೆಯಲು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಕರ್ನಾಟಕದ ಮುಖ್ಯಮಂತ್ರಿಯನ್ನಾಗಿ ಮಾಡಲು ಬಿಜೆಪಿ ಮುಂದಾಗಿದೆ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ. ಮಹೇಶ್ ಚಂದ್ರಗುರು ಇಂದಿಲ್ಲಿ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿ, ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿಯನ್ನು ಮುಂದಿನ ಮುಖ್ಯಮಂತ್ರಿ ಮಾಡಲು ಬಿಜೆಪಿ ಸಿದ್ಧತೆ ನಡೆಸಿದೆ ಎಂದು ಬಹಿರಂಗಪಡಿಸಿದರು.

ಬಿಜೆಪಿಯ ಈ ಪ್ರಯೋಗ ಯಶಸ್ವಿಯಾಗಲಿದೆ. ಆದರೆ ಆ ರೀತಿ ಆಗಬಾರದು. ಏಕೆಂದರೆ ಆದಿಚುಂಚನಗಿರಿ ಕ್ಷೇತ್ರಕ್ಕೆ ದೊಡ್ಡ ಇತಿಹಾಸವೇ ಇದೆ. ಹಾಗಾಗಿ ಶ್ರೀಗಳು ಅಂತಹ ಆಮಿಷಗಳಿಗೆ ಒಳಗಾಗಬಾರದು. ಅಲ್ಲದೆ ಶ್ರೀಗಳ ರಾಜಕೀಯ ಪ್ರವೇಶ ಸೂಕ್ತವೂ ಅಲ್ಲ. ಈಗಾಗಲೇ ನಾನು ಶ್ರೀಗಳನ್ನು ಭೇಟಿ ಮಾಡಿ, ರಾಜಕೀಯಕ್ಕೆ ಬರಬೇಡಿ ಎಂದು ಮನವಿ ಮಾಡಿದ್ದೇನೆ ಎಂದು ಮಹೇಶ್‌ಚಂದ್ರಗುರು ತಿಳಿಸಿದರು.

ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆ ರಾಜ್ಯದಲ್ಲಿ ಬುಲ್ಡೋಜರ್ ಸಂಸ್ಕೃತಿ ತಂದಿದ್ದಾರೆ. ಅದನ್ನು ಎಲ್ಲ ಕಡೆ ತರುವ ಹುನ್ನಾರ ಬಿಜೆಪಿ ನಡೆಸುತ್ತಿದೆ. ಎನ್‌ಡಿಎ ಸರ್ಕಾರ ಭಾವನಾತ್ಮಕವಾಗಿ ಜನರನ್ನು ದಾರಿ ತಪ್ಪಿಸುತ್ತಿದೆ. ಮತಕ್ಕಾಗಿ ಏನನ್ನಾದರೂ ಮಾಡಲು ಇದು ಸಿದ್ಧವಾಗಿದೆ. ಕಾಂಗ್ರೆಸ್ ಪಕ್ಷ ಗರೀಬಿ ಹಟಾವೋ ಎಂದರೆ, ಬಿಜೆಪಿಯವರು ಗರೀಬೋಂಕೊ ಹಟಾವೋ ಎನ್ನುತ್ತಿದ್ದಾರೆ. ಬಡತನ ನಿರ್ಮೂಲನೆ ಮಾಡುವ ಬದಲು ಬಡವರನ್ನೇ ನಿರ್ಮೂಲನೆ ಮಾಡಲು ಬಿಜೆಪಿಯವರು ಹೊರಟಿದ್ದಾರೆ ಎಂದೂ ಆರೋಪಿಸಿದರು.

ಸರ್ವಶ್ರೇಷ್ಠವಾದ ಗ್ರಂಥ ಸಂವಿಧಾನ. ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂಬುದು ಸಂವಿಧಾನದ ಘೋಷಣೆ. ಆದರೆ ಅದನ್ನು ಬಾಯಲ್ಲಿ ಹೇಳುತ್ತಾ, ಬಿಜೆಪಿಯವರು ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಹಿಂದುತ್ವದ ಕಾರ್ಡ್ ಮುಂದಿಟ್ಟುಕೊಂಡು ಮತಗಳನ್ನು ಪಡೆಯುತ್ತಿದ್ದಾರೆ ಎಂದು ದೂರಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ವಾಸು, ಜಿಪಂ ಮಾಜಿ ಅಧ್ಯಕ್ಷರಾದ ಬಿ.ಎಂ.ರಾಮು, ಕೆಮರೀಗೌಡ, ಪಕ್ಷದ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಪದಾಧಿಕಾರಿಗಳಾದ ಶಿವಣ್ಣ, ಈಶ್ವರ ಚಕ್ಕಡಿ, ಭಾಸ್ಕರ್‌ಗೌಡ, ಗಿರೀಶ್, ಕೆ.ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ವಿಚಾರಧಾರೆಗಳು ಇಂದಿಗೂ ಜೀವಂತ

66ನೇ ಪರಿನಿಬ್ಬಾಣ, ನುಡಿನಮನ ಕಾರ್ಯಕ್ರಮದಲ್ಲಿ ಶಾಸಕ ಬಿ.ಹರ್ಷವರ್ಧನ್



ನಂಜನಗೂಡು, ಡಿ.6– ಡಾ.ಬಿ.ಆರ್.ಅಂಬೇಡ್ಕರ್ ಅವರ ಹೋರಾಟದ ಬದುಕು, ಅವರ ವಿಚಾರಧಾರೆಗಳು ಇಂದಿಗೂ ಜೀವಂತ. ಅವರ ಆಶಯಗಳನ್ನು ರಾಜಕೀಯ ಭಾಷಣಕ್ಕೆ ಸೀಮಿತಗೊಳಿಸದೆ ಅನುಷ್ಠಾನಗೊಳಿಸುವುದು ನಮ್ಮೆಲ್ಲರ ಆದ್ಯತೆಯಾಗಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಏರ್ಪಡಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ, ಸಂಕಲ್ಪಗಳೊಂದಿಗೆ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಪರಿನಿಬ್ಬಾಣದ ದಿನದಂದು ಅವರ ಹೋರಾಟದ ಬದುಕು, ಅಸ್ಪೃಶ್ಯತೆ, ನೋವುಗಳನ್ನು ಸಹಿಸಿ ಆ ನೋವುಗಳನ್ನು ಹೇಳಿಕೊಳ್ಳಲಾಗದ ಸಂದರ್ಭ ಬರುತ್ತವೆ. ಇಂತಹ ಕಹಿ ಅನುಭವಗಳು ನಮಗೆ ಬಾರದಂತೆ ಸಂವಿಧಾನದ ಮೂಲಕ ನಮ್ಮೆಲ್ಲರನ್ನು ರಕ್ಷಣೆ ಮಾಡಿದ್ದಾರೆ. ಅವರ ಶಿಕ್ಷಣ ಸಂಘಟನೆ ಹೋರಾಟ ಎಂಬ ಆಶಯಗಳು, ಸಂದೇಶಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಸಂವಿಧಾನದ ಸಂರಕ್ಷಣೆ ನಮ್ಮ ಮೊದಲ ಆದ್ಯತೆಯಾಗಬೇಕಿದೆ. ಕಾಲಕಾಲಕ್ಕೆ ಸಂವಿಧಾನದ ತಿದ್ದುಪಡಿಗಳು ಒಳ್ಳೆಯ ಬೆಳವಣಿಗೆ. ಹಲವು ಬಾರಿ ಸಂವಿಧಾನದ ಶ್ರೇಷ್ಠತೆ ಕಾಪಾಡಿಕೊಂಡು ತಿದ್ದುಪಡಿ ಮಾಡಲಾಗಿದೆ ಎಂದರು.

ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಾಮಾಜಿಕ ಅಸಮಾನತೆಯನ್ನು ಸ್ವತಃ ಅನುಭವಿಸಿ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯ ರಥ ಎಳೆದು ನಿಲ್ಲಿಸಿದ್ದಾರೆ. ಅವರ ತತ್ವ ಆದರ್ಶಗಳು ನಮ್ಮ ಬದುಕಿನ ದಾರಿದೀಪವಾಗಬೇಕು ಎಂದರು.

ಸಮಾರಂಭದಲ್ಲಿ ನಗರಸಭಾಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್, ಕಾರ್ಯದರ್ಶಿ ರಘು, ನಗರಸಭಾ ಸದಸ್ಯ ಪ್ರದೀಪ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಪದವಿ ಕಾಲೇಜಿನ ಪ್ರಾಂಶುಪಾಲ ರಾಮೇಗೌಡ, ಕಸಾಪ ತಾಲೂಕು ಅಧ್ಯಕ್ಷೆ ಮುದ್ದುಮೋಹನ್, ದಸಂಸ ಸಂಚಾಲಕರಾದ ಚಿಕ್ಕಣ್ಣ, ಸುರೇಶ್, ಯಶವಂತ ಕುಮಾರ್, ನವೀನ್‌ಕುಮಾರ್, ಶಿವಕುಮಾರ್, ಅನಿಲ್ ಕುಮಾರ್, ನಟೇಶ್ ಸೇರಿದಂತೆ ಹಲವರಿದ್ದರು.

ಉಮ್ಮತ್ತೂರು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹುಣಸೂರು, ಡಿ.6– ತಾಲೂಕಿನ ಉಮ್ಮತ್ತೂರು ಗ್ರಾಪಂ ಅಧ್ಯಕ್ಷರಾಗಿ ನಿವೃತ್ತ ಸೈನಿಕ ರಾಮಕೃಷ್ಣ, ಉಪಾಧ್ಯಕ್ಷೆಯಾಗಿ ರಾಣಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಈ ಹಿಂದಿನ ಅಧ್ಯಕ್ಷ ರವಿ ಹಾಗೂ ಉಪಾಧ್ಯಕ್ಷೆ ಅನುಸೂಯ ಆಂತರಿಕ ಒಪ್ಪಂದದಂತೆ ತಮ್ಮ ರಾಜೀನಾಮೆ ನೀಡಿದ್ದರು. ಅವರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ರಾಮಕೃಷ್ಣ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರಾಣಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಿಡಬ್ಲ್ಯೂಡಿ ಎಇಇ ಭೋಜರಾಜ್ ಘೋಷಿಸಿದರು.

ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಅಭಿನಂದಿಸಿದರು. ಈ ವೇಳೆ ಮಾತನಾಡಿದ ಅವರು, ಗ್ರಾಪಂ ಅನ್ನು ಮಾದರಿಯಾಗಿಸುವ ಜೊತೆಗೆ, ಸೂರಿಲ್ಲದ ಬಡವರಿಗೆ ಸೂರು ಕಲ್ಪಿಸುವುದು ಸೇರಿದಂತೆ ಸಾರ್ವಜನಿಕರ ಮೂಲ ಸೌಕರ್ಯಕ್ಕೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಕಾಂತರಾಜು, ಅಮಾಸಮ್ಮ, ಚಂದ್ರೇಗೌಡ, ರವಿ, ಕಾವ್ಯ, ಮಂಜುಳಾ, ಶಿವರಾಜು, ಸೋನಿ, ರವಿ, ಶೇಖರ್, ಅನುಸೂಯ, ನಂಜುಂಡ, ಜೆಡಿಎಸ್ ಮುಖಂಡರಾದ ರಾಮೇಗೌಡ, ಅಣ್ಣಯ್ಯ, ಮಹೇಶ್, ವೆಂಕಟೇಶ್ ಸೇರಿದಂತೆ ಇತರರಿದ್ದರು.

ಇಂದಿರಾ ಕಾಲೋನಿ ಅಭಿವೃದ್ಧಿಗೆ ಒತ್ತು: ಶಾಸಕ ಯತೀಂದ್ರ



ತಿ.ನರಸೀಪುರ, ಡಿ.6– ಪುರಸಭೆ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಪ್ರತಿನಿಧಿಸುವ ಪಟ್ಟಣದ 11ನೇ ವಾರ್ಡ್‌ನ ಇಂದಿರಾ ಕಾಲೋನಿ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, 2.05 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗಿದೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಪುರಸಭಾ ವ್ಯಾಪ್ತಿಯ ಇಂದಿರಾ ಕಾಲೋನಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಅಲ್ಪ ಸಂಖ್ಯಾತರ ನಿಗಮ ಹಾಗೂ ಕಾವೇರಿ ನೀರಾವರಿ ನಿಗಮದಿಂದ ಸಿಸಿ ರಸ್ತೆ ಚರಂಡಿ ನಿರ್ಮಾಣ ಹಾಗೂ ಕೊಳಚೆ ಅಭಿವೃದ್ಧಿ ನಿಗಮದ ವತಿಯಿಂದಲೂ ಮನೆಗಳ ನಿರ್ಮಾಣಕ್ಕೆ ಒತ್ತು ನೀಡಿರುವುದಾಗಿ ತಿಳಿಸಿದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಆದರೆ ಬಿಜೆಪಿ ಸರ್ಕಾರ ಅವಧಿಯಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುತ್ತಿಲ್ಲ. ಬಿಜೆಪಿ ಶಾಸಕರಿರುವ ಕಡೆ ಹೆಚ್ಚಿನ ಅನುದಾನ ನೀಡಿ ಕಾಂಗ್ರೆಸ್ ಶಾಸಕರಿಗೆ ಅನುದಾನ ಕಡಿತ ಮಾಡುತ್ತಿದೆ ಎಂದು ಆರೋಪಿಸಿದ ಅವರು, ದೊರೆತ ಅನುದಾನದಲ್ಲಿಯೇ ಅಗತ್ಯ ಇರುವೆಡೆ ಆದ್ಯತೆ ಮೇರೆಗೆ ಅಭಿವೃದ್ಧಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದರು.

ವಾರ್ಡ್ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ನಮ್ಮ ವಾರ್ಡ್‌ಗೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿಕೊಡುವಂತೆ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿರುವುದರಿಂದ ಸಮುದಾಯ ಭವನ, ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಕೊಡಿಸುವಂತೆ ಶಾಸಕರಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಪುರಸಭೆ ಉಪಾಧ್ಯಕ್ಷೆ ನಾಗರತ್ನ, ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಅಹಮದ್, ಸದಸ್ಯರಾದ ಸೋಮಣ್ಣ, ತುಂಬಲ ಪ್ರಕಾಶ್, ಮೆಡಿಕಲ್ ನಾಗರಾಜು, ಸಿಸ್ಟಮ್ ಸಿದ್ದು, ಮುಖಂಡರಾದ ಬಿ.ಮರಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ, ತಾಲೂಕು ಕುರುಬರ ಸಂಘದ ಕಾರ್ಯಾಧ್ಯಕ್ಷ ಮಾದೇಶ್, ರಮೇಶ್, ರಾಘವೇಂದ್ರ ಹೇಮಂತ್, ಸ್ವಾಮಿ, ರಂಗಸ್ವಾಮಿ, ರಾಜು, ವಿನೋದ್, ಮುನ್ನ, ನಂದನ್, ಶಾಂತಕುಮಾರ್, ರೂಮನ್, ಸಿದ್ದಿಕ್, ಅಕ್ಬರ್, ಸೌಕತ್ ಅಲಿ, ರಂಗಸ್ವಾಮಿ, ಕುಮಾರಸ್ವಾಮಿ, ದೇವರಾಜು, ನವೀನ, ಪರಮೇಶ, ಸಾಲುಂಡಿ ನಟರಾಜು ಇದ್ದರು.

ಹುಣಸೂರಲ್ಲಿ ಇಂದು ಅದ್ದೂರಿ ಹನುಮ ಜಯಂತಿ



ಹುಣಸೂರು, ಡಿ.6– ನಗರದಲ್ಲಿ ಇಂದು (ಡಿ.7) ಸಾವಿರಾರು ಹನುಮ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಹನುಮ ಜಯಂತಿ ನಡೆಯಲಿದೆ ಎಂದು ಹನುಮಂತೋತ್ಸವ ಆಚರಣಾ ಸಮಿತಿ ಅಧ್ಯಕ್ಷ ವೆಂಕಟನಾರಾಯಣ್‌ದಾಸ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಹನುಮ ಜಯಂತಿಯನ್ನು ಸರಳವಾಗಿ ಆಚರಿಸಲಾಗಿತ್ತು. ಆದರೆ ಈ ಬಾರಿ ಅದ್ದೂರಿಯಾಗಿ ಆಚರಿಸಲು ಜಿಲ್ಲಾಡಳಿತ ಅನುಮತಿ ನೀಡಿರುವುದರಿಂದ ಸುಮಾರು 15 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸುವ ನಿರೀಕ್ಷೆ ಇದೆ. ಈ ಹಿಂದೆ ನಿರ್ಬಂಧಿಸಿದ್ದ ಪ್ರಮುಖ ರಸ್ತೆಗಳನ್ನು ಈ ಬಾರಿ ತೆರವುಗೊಳಿಸಲಾಗಿದೆ ಎಂದರು.

ಹನುಮಂತೋತ್ಸವ ಮೆರವಣಿಗೆಯಲ್ಲಿ 10 ರಿಂದ 15 ಜಾನಪದ ತಂಡಗಳು, 8 ರಿಂದ 10 ಸ್ತಬ್ದ ಚಿತ್ರಗಳು, ಉಡುಪಿಯ ಆಂಜನೇಯ ವೇಷಧಾರಿ ಗೌತಮ್ ಹಾಗೂ ರಾಮ ಮಂದಿರಗಳ ಹನುಮ ಭಕ್ತರು, ಎಲ್ಲಾ ಗರಡಿಯ ಹನುಮ ಭಕ್ತರು, ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಗೌರವಾಧ್ಯಕ್ಷ ಬಿ.ಎಸ್.ಯೋಗಾನಂದಕುಮಾರ್ ಮಾತನಾಡಿ, ಜಿಲ್ಲಾಡಳಿತ, ತಾಲೂಕು ಆಡಳಿತ ಸೇರಿದಂತೆ ಪೊಲೀಸ್ ಅಧಿಕಾರಿಗಳು ನಾಲ್ಕೈದು ಬಾರಿ ಸಭೆ ನಡೆಸಿ ಚರ್ಚಿಸಿ ಹನುಮ ಜಯಂತಿ ಆಚರಣೆಗೆ ಅವಕಾಶ ಕಲ್ಪಿಸಿದ್ದಾರೆ. ಜಿಲ್ಲಾಡಳಿತದ ಮಾರ್ಗಸೂಚಿ ಅನುಸರಿಸುವ ಮೂಲಕ ಅದ್ದೂರಿಯಾಗಿ ಹನುಮ ಜಯಂತಿ ಆಚರಿಸುತ್ತೇವೆ ಎಂದರು.

ಮೆರವಣಿಗೆ ನಗರದ ರಂಗನಾಥ ಬಡಾವಣೆಯಿಂದ ಬೆಳಗ್ಗೆ 11 ಗಂಟೆಗೆ ಹೊರಟು ಸೇತುವೆ, ಸಂವಿಧಾನ ಸರ್ಕಲ್, ಎಸ್.ಜೆ.ರಸ್ತೆ ಕೋಟೆ ಸರ್ಕಲ್, ಜೆ.ಎಲ್.ಬಿ.ರಸ್ತೆ, ಕಾರ್ಖಾನೆ ರಸ್ತೆ, ಬಜಾರ್ ರಸ್ತೆ, ಅಕ್ಷಯ ಭಂಡಾರ್, ಕಲ್ಪತರು ವೃತ್ತದ ಮೂಲಕ ಸಂಜೆ 5 ಗಂಟೆಗೆ ಮಂಜುನಾಥಸ್ವಾಮಿ ದೇವಸ್ಥಾನ ತಲುಪಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ಅನಿಲ್, ಉಪಾಧ್ಯಕ್ಷ ಗಿರೀಶ್, ಸದಸ್ಯ ಸಚಿನ್ ಉಪಸ್ಥಿತರಿದ್ದರು.

ಹನುಮ ಜಯಂತಿ ಯಶಸ್ವಿಗೊಳಿಸಿ: ಶಾಸಕ ಸಾ.ರಾ.

ಕೆ.ಆರ್.ನಗರ, ಡಿ.6– ಪ್ರಾಣದೇವರು ಆಂಜನೇಯಸ್ವಾಮಿ ಜೀವಂತವಾಗಿದ್ದು ನಮ್ಮನ್ನು ಕಾಯುತ್ತಿದ್ದಾರೆ ಎಂಬುದು ನಮ್ಮೆಲ್ಲರ ಭಾವನೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಪಟ್ಟಣದ ಆಂಜನೇಯ ಬಡಾವಣೆಯ ಶ್ರೀಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀಮಾರುತಿ ಯುವಕರ ಸಂಘದಿಂದ ಆಯೋಜಿಸಿರುವ 9 ದಿನಗಳ ಹನುಮ ಜಯಂತಿ ಕಾರ್ಯಕ್ರಮಕ್ಕೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಹಿಂದೂ ಸಂಸ್ಕೃತಿಯಲ್ಲಿ ನಾವು ಮಾಡುವ ಯಾವುದೇ ಕೆಲಸದಲ್ಲಿ ಜಯ ತಂದುಕೊಡಲಿ ಎಂದು ಆಂಜನೇಯಸ್ವಾಮಿಯನ್ನು ಪೂಜಿಸಿ ಬೇಡಿಕೊಳ್ಳುತ್ತೇವೆ ಎಂದರು. ಹನುಮ ಜಯಂತಿಯನ್ನು ಎಲ್ಲಾ ಕಡೆ ಆಚರಿಸುತ್ತಿದ್ದು, ಇಲ್ಲೂ ಸಹ ಶಾಂತಿ ಹಾಗೂ ಸಡಗರದಿಂದ ಎಲ್ಲರೂ ಒಗ್ಗಟ್ಟಿನಿಂದ ಆಚರಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದು ಮನವಿ ಮಾಡಿದರು. ಈ ವೇಳೆ ಪುರಸಭಾ ಮಾಜಿ ಸದಸ್ಯರಾದ ಎನ್.ಶಿವಕುಮಾರ್, ಎಸ್.ಯೋಗಾನಂದ್, ಜೆಡಿಎಸ್ ನಗರ ಕಾರ್ಯದರ್ಶಿ ರುದ್ರೇಶ್, ಮುಖಂಡರಾದ ಮುಬಾರಕ್, ಹರ್ಷಿತ್ ಕುಮಾರ್, ಶ್ರೀ ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್, ಖಜಾಂಚಿ ಕೆಂಚಿ ಮಂಜುನಾಥ್, ಸದಸ್ಯರಾದ ಗೋಪಿ, ಲೋಕೇಶ್, ವಿನಯ್, ಪುನೀತ್, ಮನು, ಎಸ್‌ಐ ಚಂದ್ರಹಾಸ ಇನ್ನಿತರರಿದ್ದರು.

ಪಿಡಿಓ ಬೇಜವಾಬ್ದಾರಿ ವರ್ತನೆ ಖಂಡಿಸಿ ಪ್ರತಿಭಟನೆ



ಬೈಲಕುಪ್ಪೆ ಡಿ.6– ಪಿಡಿಓ, ಸಿಬ್ಬಂದಿಗಳ ಬೇಜವಾಬ್ದಾರಿ ವರ್ತನೆ ಖಂಡಿಸಿ ದೊಡ್ಡ ಕಮರವಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಗ್ರಾಪಂ ಎದುರು ಜಮಾಯಿಸಿದ ಗ್ರಾಮಸ್ಥರು ಪಿಡಿಓ ಶಿಲ್ಪಶ್ರೀ ಅವರನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿ, ಪಿಡಿಓ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪಿಡಿಓ ಶಿಲ್ಪಶ್ರೀ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗುತ್ತಿಲ್ಲ. ಇದರಿಂದ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸ ನಡೆಯುತ್ತಿಲ್ಲ. ಅಭಿವೃದ್ಧಿ ಕಾಮಗಾರಿಗಳ ಬಿಲ್ ಪಾವತಿಸುತ್ತಿಲ್ಲ. ಗ್ರಾಮಸ್ಥರ ಸಮಸ್ಯೆಗೂ ಸ್ಪಂದಿಸುತ್ತಿಲ್ಲ. ಪ್ರತಿಯೊಂದು ಕೆಲಸಕ್ಕೂ ದುಡ್ಡು ಕೊಟ್ಟರೆ ಮಾತ್ರ ಈ ಪಂಚಾಯಿತಿಯಲ್ಲಿ ಕೆಲಸ ನಡೆಯುತ್ತದೆ ಎಂದು ಗ್ರಾಪಂ ಸದಸ್ಯರು ಹಾಗೂ ಗ್ರಾಮಸ್ಥರು ಆರೋಪಿಸಿದರು.

ಫೋನ್ ಮಾಡಿ ಕೇಳಿದರೆ ನಾನು ಅಲ್ಲಿದ್ದೇನೆ ಇಲ್ಲಿದ್ದೇನೆ ನಾನು ಏಕೆ ಬರಲಿ ಅದರಿಂದ ನನಗೇನು ಲಾಭ ಎಂದು ಬೇಜವಾಬ್ದಾರಿಯಿಂದ ಉತ್ತರಿಸುತ್ತಾರೆ ಎಂದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಿರಿಯಾಪಟ್ಟಣ ನರೇಗಾ ಸಹಾಯಕ ನಿರ್ದೇಶಕ ಅಧಿಕಾರಿ ಕರುಣಾಕರ್ ಪ್ರತಿಭಟನಾಕಾರರ ಸಮಸ್ಯೆ ಆಲಿಸಿದರು. ಈ ವೇಳೆ ಗ್ರಾಪಂ ಸದಸ್ಯರು ಮತ್ತು ಗ್ರಾಮಸ್ಥರು ಪಿಡಿಓ ಅವರನ್ನು ಬೇರೆಡೆ ವರ್ಗಾಯಿಸುವಂತೆ ಅಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.

ಚಿರತೆ ದಾಳಿಗೆ ಹಸು ಬಲಿ



ಮಲ್ಲುಂಡಿ, ಡಿ.6– ಚಿರತೆ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಮಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚನ್ನಪ್ಪ ಎಂಬುವರು ತಮ್ಮ ಮನೆ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಹಸುವಿನ ಮೇಲೆ ಚಿರತೆ ದಾಳಿ ಮಾಡಿ ಅರೆಬರೆ ತಿಂದು ಪರಾರಿಯಾಗಿದ್ದು, ಇದರಿಂದ ರೈತ ಚನ್ನಪ್ಪ ಅವರಿಗೆ ಸಾವಿರಾರು ರೂ. ನಷ್ಟ ಸಂಭವಿಸಿದೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ತಿ.ನರಸೀಪುರ, ಡಿ.6– ರೈತರ ಕೃಷಿ ಚಟುವಟಿಕೆಗೆ ಅನುಕೂಲವಾಗುವ ರೀತಿ ಗುಣಮಟ್ಟದ ರಸ್ತೆ ನಿರ್ಮಿಸಿಕೊಡುವಂತೆ ಶಾಸಕ ಎಂ.ಅಶ್ವಿನ್ ಕುಮಾರ್ ಗುತ್ತಿಗೆದಾರರಿಗೆ ಸೂಚಿಸಿದರು.

ತಾಲೂಕಿನ ಕುರುಬೂರು ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನೀರಾವರಿ ಇಲಾಖೆಯಿಂದ ನಿರ್ಮಿಸುವ ಸರ್ವಿಸ್ ರಸ್ತೆ ಹಾಗೂ ಕುರುಬೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ನಾಲಾ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗುತ್ತಿಗೆದಾರರು ಗುಣಮಟ್ಟದ ರಸ್ತೆ ನಿರ್ಮಿಸುವ ಮೂಲಕ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬೇಕು. ಸಣ್ಣ ಪುಟ್ಟ ಸಮಸ್ಯೆಗಳಿದ್ದಲ್ಲಿ ಗ್ರಾಮಸ್ಥರ ಸಮ್ಮುಖದಲ್ಲಿ ಬಗೆಹರಿಸಿ ಯಾರಿಗೂ ತೊಂದರೆಯಾಗದ ರೀತಿ ರಸ್ತೆ ನಿರ್ಮಾಣ ಮಾಡಬೇಕು ಎಂದು ಸೂಚಿಸಿದರು.

ಕೃಷಿ ಚಟುವಟಿಕೆಗಳಿಗೆ ಟ್ರ್ಯಾಕ್ಟರ್, ಎತ್ತು, ಟಿಲ್ಲರ್, ಭತ್ತ ಕಟಾವು ಯಂತ್ರ ಸಾಗಿಸಲು ರೈತರಿಗೆ ಉತ್ತಮವಾದ ರಸ್ತೆ ಅವಶ್ಯಕತೆ ಇದೆ. ಸರ್ಕಾರ ಹೆಚ್ಚಿನ ಅನುದಾನ ನೀಡದಿದ್ದರೂ, ರೈತರ ಸಮಸ್ಯೆ ಕುರಿತಂತೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ವಿಶೇಷ ಅನುದಾನ ತಂದು ಉತ್ತಮ ರಸ್ತೆ ಕಲ್ಪಿಸಲು ಪ್ರಯತ್ನಿಸಿದ್ದೇನೆ. ಮುಂದಿನ ದಿನಗಳಲ್ಲಿ ಕೃಷಿ ಚಟುವಟಿಕೆಗಳಿಗೆ ಮತ್ತಷ್ಟು ಅನುದಾನ ತಂದು ರೈತರ ಹಿತ ಕಾಯಲು ಬದ್ಧನಾಗಿದ್ದೇನೆ. ಇದಕ್ಕೆ ಗ್ರಾಮಸ್ಥರ ಸಹಕಾರ ಬೇಕು. ಶಾಸಕನಾದ ಬಳಿಕ ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ಮುಂದೆ ಇದೇ ರೀತಿ ಬೆಂಬಲ ನೀಡಿದಲ್ಲಿ ಕ್ಷೇತ್ರವನ್ನು ಮಾದರಿ ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ವೇಳೆ ಕುರುಬೂರು ಡೈರಿ ಅಧ್ಯಕ್ಷ ಕೆ.ಸಿ.ವೀರೇಶ್, ಜಿಪಂ ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ಜೈಪಾಲ್ ಭರಣಿ, ಶಿವಕುಮಾರ್, ಮಹದೇವ್, ಮಾವಿನಹಳ್ಳಿ ರಾಜೇಶ್, ಬೇವಿನಹಳ್ಳಿ ಸತೀಶ್, ಗೌಡ್ರ ಜಗದೀಶ್, ಶಿವಮೂರ್ತಿ, ಕುರುಬೂರು ನಂದೀಶ್ ಮತ್ತಿತರರಿದ್ದರು.

ಶೋಷಿತ ಸಮಾಜಗಳು ಒಗ್ಗೂಡಿದರೆ ದೇಶ ಆಳಬಹುದು

ರಾಜನಹಳ್ಳಿ ಗುರುಮಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅಭಿಪ್ರಾಯ



ಹೆಚ್.ಡಿ.ಕೋಟೆ, ಡಿ.6– ಶತಮಾನಗಳಿಂದ ಶೋಷಣೆಗೆ ಒಳಗಾಗಿರುವ ಸಮಾಜಗಳು ಒಗ್ಗಟ್ಟಾದರೆ ದೇಶ ಆಳಬಹುದು ಎಂದು ರಾಜನಹಳ್ಳಿ ಗುರುಮಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾನವ ಹಕ್ಕುಗಳನ್ನು ನೀಡಲು ಮಹಾನ್ ಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಶ್ರಮಿಸಿದರೇ, ಭಾರತದಲ್ಲಿ ಸಮ ಸಮಾಜ ನಿರ್ಮಾಣ ಮಾಡಲು ದಾಸ ಶ್ರೇಷ್ಠರು, ಸಮಾಜ ಸುಧಾರಕರು ನಿರಂತರವಾಗಿ ಶ್ರಮಿಸಿದ್ದಾರೆ ಎಂದರು.

ಚಿತ್ರದುರ್ಗದ ರಾಜನಹಳ್ಳಿಯಲ್ಲಿ 2023ರ ಫೆ.8, 9ರಂದು ನಡೆಯುವ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಸಮುದಾಯದ ಎಲ್ಲರೂ ಆಗಮಿಸಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಸ್ವಾಮೀಜಿಯವರ 257 ದಿನಗಳ ಧರಣಿ ಫಲವಾಗಿ ರಾಜ್ಯದಲ್ಲಿ ದಲಿತರಿಗೆ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಹೆಚ್ಚಳವಾಗಿದೆ ಎಂದರು.

ವಿವಿಧ ಮೇಲ್ವರ್ಗದವರು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದರೂ ಸಹ ಸ್ವಾಮೀಜಿಯೊಬ್ಬರು ಧರಣಿ ನಡೆಸಿ ನಮ್ಮ ದಲಿತರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಕೊಡಿಸಿರುವುದು ಅಭಿನಂದನೀಯ ಎಂದರು.

ಮಾಜಿ ಶಾಸಕ ಚಿಕ್ಕಣ್ಣ ಮಾತನಾಡಿ, ಸಮುದಾಯದ ಒಗ್ಗಟ್ಟು ಪ್ರದರ್ಶಿಸಲು ಪ್ರತಿಯೊಬ್ಬರೂ ಜಾತ್ರೆಗೆ ತಪ್ಪದೇ ಆಗಮಿಸಬೇಕು. ಸ್ವಾಮೀಜಿಗಳ ಬೆಂಬಲಕ್ಕೆ ನಿಲ್ಲಬೇಕು. ಸಮುದಾಯದ ಹಿತಕ್ಕಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಅವರು ಧರಣಿ ನಡೆಸಿ ಸಮುದಾಯಕ್ಕೆ ಮೀಸಲಾತಿ ಕೊಡಲು ಯಶಸ್ವಿಯಾಗಿದ್ದಾರೆ. ಅವರ ಬೆನ್ನೆಲುಬಾಗಿ ಸಮಾಜದ ಮುಖಂಡರು ನಿಲ್ಲಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ, ಮಾಜಿ ಅಧ್ಯಕ್ಷ ಶಂಭುಲಿಂಗನಾಯಕ, ಗೌರವಾಧ್ಯಕ್ಷ ಮರಿತಿಮ್ಮನಾಯಕ, ಉಪಾಧ್ಯಕ್ಷ ಜಯಪ್ರಕಾಶ್ ಚಿಕ್ಕಣ್ಣ, ಕಾರ್ಯದರ್ಶಿ ಕೃಷ್ಣ ಖಜಾಂಚಿ ಅಂಕನಾಯಕ, ರತ್ನಾಕರ ವಾಲ್ಮೀಕಿ ವೇದಿಕೆ ಅಧ್ಯಕ್ಷ ರಾಜು, ಪುರಸಭಾ ಅಧ್ಯಕ್ಷೆ ಅನಿತಾ , ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮಿಲ್ ನಾಗರಾಜು, ಪ್ರೇಮ್ ಸಾಗರ್, ಮುದ್ದು ಮಲ್ಲಯ್ಯ, ನಾಗನಾಯ್ಕ ನಾಗರಾಜು, ರಾಜನಾಯಕ, ಸಿದ್ದನಾಯ್ಕ ಸೂರಿ ಇದ್ದರು.

ಮೈಸೂರು ಚಳಿಗಾಲದ ರೇಸುಗಳು



4ನೇ ದಿನ, ಬುಧವಾರ 07-12-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಬಿಜಾಪುರ ಪ್ಲೇಟ್ ಡಿ2– 1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ವಿಜಯಸುರಭಿ 2. ದಿವಾ ಇನ್ ಗೋಲ್ಡ್ 3. ಶಿವಾಲಿಕ ಎಂಪರರ್

II. ಕೆಆರ್‌ಎಸ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ವಂದನ್ 2. ವಿಂಡ್ ವಿಶಲರ್ 3. ಕ್ಯಾಲಿಫೋರ್ನಿಯಾ ಗೋಲ್ಡ್

III. ಬಿಜಾಪುರ ಪ್ಲೇಟ್ ಡಿ1– 1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಕಂಟ್ರೀಸ್‌ಮೇಜರ್ 2 ಫಿಫ್ಟಿ ಗ್ರಾಂಡ್ 3. ಕಮ್ ಅಲೈವ್

IV. ಪಾಂಡವಪುರ ಪ್ಲೇಟ್ ಡಿ2– 1200 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ಲಕ್ಕಿಓನ್ 2. ಈವಾಂಡರ್ 3. ಸನ್ ಅಂಡ್ ಲಾಫ್ಟರ್

V. ಮೇಕೆದಾಟು ಪ್ಲೇಟ್– 1200 ಮೀ ರೇಟೆಡ್ 40 ರಿಂದ 65. ಮ.3.30ಕ್ಕೆ
1. ಡಿ ಜಾನಿ 2. ಕ್ರೀಮ್‌ಸನ್ ಫ್ಲೈರ್ 3. ಬಯೋಮೆಟ್ರಿಕ್

VI. ನಾಗಾರ್ಜುನ ಸಾಗರ ಟ್ರೋಫಿ– 1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಒ ಆ್ಯನ್‌ಸಿನಿ 2. ಕೋಸ್ಟಲ್ ಕ್ರೂಸಿ 3. ವೈಲ್ಡ್‌ಸ್ಪೆಲ್

VII. ಶ್ರೀರಂಗಪಟ್ಟಣ ಪ್ಲೇಟ್– 1600 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಅಮೆಜೋನಿಯಾ 2. ಮ್ಯಾಜಿಕ್ ಸರ್ಕಲ್ 3. ಡ್ರುಸಿಲ್ಲಾ

VIII. ಪಾಂಡವಪುರ ಪ್ಲೇಟ್ ಡಿ1– 1200 ಮೀ. ರೇಟೆಡ್ 00 ರಿಂದ 25. ಸಂ.5.00ಕ್ಕೆ
1. ವಿಜಯಫಾಲ್ಕನ್ 2. ಐ ದಿ ಮೈಂಡ್ 3. ಮಿಸ್ಟಿಕ್ ಡಿವೈನ್

ದಿನದ ಅತ್ಯುತ್ತಮ	: ಒ ಆ್ಯನ್‌ಸಿನಿ
ಡಬ್ಬಲ್	: ವಂದನ್, ಡಿ ಜಾನಿ
ಜಾಕ್‌ಪಾಟ್	: 4, 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4 ಮತ್ತು 5
III ಟ್ರಿಬಲ್	: 6, 7 ಮತ್ತು 8
ಎಕ್ಸಲಕ್ಟ್	: 7 ಮತ್ತು 8

ಟಿಪ್‌ಸ್ಟರ್ ಪಿಜಿಸಿ

ಎಚ್.ಎಸ್.ಗಣೇಶ್ ನಿಧನ



ಬೆಟ್ಟದಪುರ, ಡಿ.6– ಪಿರಿಯಾಪಟ್ಟಣ ತಾಲೂಕು ಬೋರ್ಡ್ ಮಾಜಿ ಸದಸ್ಯ ದಿ.ಶಿವಣ್ಣ ಅವರ ಪುತ್ರ ಹರದೂರು ಗ್ರಾಮದ ಎಚ್.ಎಸ್. ಗಣೇಶ್ (52) ಮಂಗಳವಾರ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಬುಧವಾರ (ನಾಳೆ) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೌಸ್ ಆಫ್ ಕಂಫರ್ಟ್
ಹೆಬ್ಬಾಳ್ ರಿಂಗ್ ರೋಡ್, ಮೈಸೂರು
ನಿಮ್ಮ ಕನಸಿನ ಮನೆಯ ವೆಚ್ಚವನ್ನು ನಿಯಂತ್ರಿಸಿ
ಟೈಲ್ಸ್ 600x1200mm ಬೆಲೆ ಪ್ರಾರಂಭವಾಗುತ್ತದೆ ರೂ. 42.50*
ಇತರ ಉತ್ಪನ್ನಗಳ ಶ್ರೇಣಿಗಳು:
- ಡಿಜಿಟಲ್ ಬಾತ್ರೂಮ್ ಟೈಲ್ಸ್
- ಎಲಿವೇಶನ್ ಟೈಲ್ಸ್
- ಪಾರ್ಕಿಂಗ್ ಟೈಲ್ಸ್
- ವಿಟ್ರಿಫೈಡ್ ಟೈಲ್ಸ್
- ಅಲ್ಟ್ರಾಟೆಕ್ ಟೈಲ್‌ಫಿಕ್ಸೊ
Call: 94496 29059 / 80736 12295

BUILDING CONSTRUCTION
Starts from Rs. 1699/- sq.ft.,
Call : 76767 68868


REQUIRED
DRIVER
Salary : Rs.15,000/-
Location : Mysore
Food & Accommodation is free need to stay
Call : 81230 81238

MUDA APPROVED SITE FOR SALE
Near Christ School, BOGADI
Call: 90719 66999

HOUSES FOR SALE
HOUSES IN YADAVAGIRI
60x40 W/F, 150x60 E/F
Vyshak Raman 77606 49855
Brokers Excuse



ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ಶ್ರೀ ಚನ್ನಬಸಪ್ಪ ನವರು

ಇವರು ದಿನಾಂಕ: 26.11.2022 ಶನಿವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 07.12.2022 ಬುಧವಾರ ಮೃತರ ಶಿವಗಣಾರಾಧನಾ ಕಾರ್ಯವನ್ನು, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಮ.ನಿ.ಪ್ರ. ಡಾ|| ಕರಿವೃಷಭ ಶಿವಯೋಗೀಶ್ವರ ಮಹಾಸ್ವಾಮಿಗಳು, ಶ್ರೀ ಕಾಡಸಿದ್ದೇಶ್ವರ ಮಠ, ಇವರ ಪಾದಪೂಜೆಯೊಂದಿಗೆ ಮತ್ತು ಹರಗುರು ಚರ ಮೂರ್ತಿಗಳ ಸಾನಿಧ್ಯದಲ್ಲಿ ಬೆಳಗ್ಗೆ 10.30 ಗಂಟೆಗೆ ಮೃತರ ಸ್ವಗೃಹ ಜ್ಯೋತಿಗೌಡನಪುರ, ಚಂದಕವಾಡಿ ಹೋ|| ಚಾಮರಾಜನಗರ ತಾ|| ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಶ್ರೀಮತಿ ಗೌರಮ್ಮ, ಶ್ರೀಮತಿ ಯಮುನ ಮತ್ತು ಡಾ|| ಜೆ.ಸಿ.ನಾಗೇಂದ್ರ, ಶ್ರೀಮತಿ ರತ್ನ ಮತ್ತು ಜೆ.ಸಿ.ನಂಜುಂಡಸ್ವಾಮಿ, ಶ್ರೀಮತಿ ಮಹದೇವಮ್ಮ ಮತ್ತು ಶ್ರೀ ಸುಬ್ಬಣ್ಣ, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

ಭೋಜನ: ಮ.1.00ಕ್ಕೆ ಭಜನೆ: ಬೆಳಗ್ಗೆ 10.30ಕ್ಕೆ

SANKALP
Mysuru's Trusted Real Estate Developer
25+ years & 35+ Completed Projects
INVITING LANDOWNERS
For Joint Venture or Outright Sale
a. 3 Acres and above, on the Ring Road or surrounding areas
b. 10,000sqft. and above at prime locations within city limits
APARTMENTS
ROWHOUSES | VILLAS
Call : +91 89040 41222

ಜೀವನದಲ್ಲಿ ಸುಖ ಹಾಗೂ ನೆಮ್ಮದಿ ಕಾಣುವ ಸುವರ್ಣಾವಕಾಶ
ನಮ್ಮಲ್ಲಿ ತಮಗೆ ಸರಿಹೊಂದುವ ರತ್ನವನ್ನು ನಮ್ಮ ನುರಿತ ಜ್ಯೋತಿಷ್ಯರಿಂದ ವೈಜ್ಞಾನಿಕ ರೀತಿಯಲ್ಲಿ ಸಲಹೆ ಪಡೆದು NPG LUCKY STONE ಧರಿಸಿ ಯಶಸ್ಸು ಕಾಣಿರಿ
ಎನ್.ಪಿ.ಜಿ. ಲಕ್ಕಿ ಸ್ಟೋನ್ಸ್ ಎನ್.ಪಿ.ಜಿ. ಹೈದರಾಬಾದ್ ಪರ್ಲ್ಸ್
NPG Lucky Stones (A unit of Narayana Pearls & Gems) Enlighting Your Life
NPG Hyderabad Pearls (A unit of Narayana Pearls & Gems)
ವೈಜ್ಞಾನಿಕ ಜ್ಯೋತಿಷ್ಯ ಶಾಸ್ತ್ರ, ಅದೃಷ್ಟ ಹರಳುಗಳು ಹಾಗೂ ಹೈದರಾಬಾದ್ ಪರ್ಲ್ಸ್ ಶೋರೂಂ
50% FLAT DISCOUNT ON FASHION JEWELLERY
ಫೀಸ್ ಕೇವಲ ರೂ. 300/-, ಜೀವನ ಪರ್ಯಂತ ಉಚಿತ ಜ್ಯೋತಿಷ್ಯ
ಸೂಚನೆ : ಇದು ಸಾಧಾರಣ ಜ್ಯೋತಿಷ್ಯವಲ್ಲ, ಅಪ್ಪಟ ವೈಜ್ಞಾನಿಕ ಪದ್ಧತಿ.
ಎಲ್ಲಾ ತರಹದ ಮೈಕ್ರೋಫಾರ್ಮಿಂಗ್ ವಿಧಾನದಲ್ಲಿ ತಯಾರಿಸಲ್ಪಟ್ಟ ಅತ್ಯಾಕರ್ಷಕ ಆಭರಣಗಳು ಲಭ್ಯ.
ಇಂದೇ ಭೇಟಿ ಕೊಡಿ
ನಂ. 239, ಅಶೋಕ ರಸ್ತೆ, ಮೈಸೂರು - 570 001.
ಫೋನ್ : 9448958522 / 0821-4269517
WANTED SALES GIRLS

INDIA'S BIGGEST EVER DISCOUNT OFFER
ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ ಮಾರಾಟ
ಭಾರತದ ವಿವಿಧ ರೇಷ್ಮೆ ಸಮೂಹಗಳಿಂದ ಸಂಗ್ರಹಿಸಿದ
ಕಾಟನ್, ರೇಷ್ಮೆ, ಫ್ಯಾನ್ಸಿ ಸೀರೆಗಳು ಮತ್ತು ಕುರ್ತಿಗಳು
ಸೀರೆ ಮತ್ತು ಕುರ್ತಿಗಳ ಬೃಹತ್ ಪ್ರದರ್ಶನ
ಪಾರಸ್ ಕ್ರಿಯೇಷನ್ಸ್ ಪ್ರಸ್ತುತಪಡಿಸುತ್ತಿದೆ
ಕಾಟನ್ ಫ್ಯಾನ್ಸಿ ಡ್ರೆಸ್ ಮೆಟೀರಿಯಲ್
ಮೆಗಾ ಸೀರೆ ಮತ್ತು ಕುರ್ತಿ ಮೇಳ
ಆರ್ಥಿಕ ಶ್ರೇಣಿ ರೂ.180, ರೂ. 250, ರೂ.300, ರೂ.400
ನವೀನ ಶ್ರೇಣಿ ರೂ.500, ರೂ.550, ರೂ.650, ರೂ.800
ಪಾರ್ಟಿ ವೇರ್ ಸೀರೆಗಳು ರೂ.1000 ಮತ್ತು ಮೇಲ್ಪಟ್ಟು
ಜೈಪುರಿ ಮತ್ತು ಲಕ್ನೋ ಚಿಕನ್‌ಕರಿ ಕುರ್ತಿ
ರೂ. 200, 300, 400 ಮತ್ತು ಮೇಲ್ಪಟ್ಟು
ಜೈಪುರ ಫ್ಯಾನ್ಸಿ ಬೆಡ್ ಶೀಟ್‌ಗಳು ದಿಲ್ಲೋ/ಕುಶನ್ ಕವರ್, ಸೋಫಾ ಬ್ಯಾಕ್
ಮಾರಾಟ 5 ದಿನಗಳು ಮಾತ್ರ 11-12-2022 ವರೆಗೆ ಭಾನುವಾರ ಕಡೆಯ ದಿನ
ಸ್ಥಳ : ನಂಜರಾಜ ಬಹದ್ದೂರ್ ಛತ್ರ
ಮೆಟ್ರೋಪೋಲ್ ಸರ್ಕಲ್ ಹತ್ತಿರ, ವಿನೋಬಾ ರಸ್ತೆ, ಮೈಸೂರು–01

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಪುಣ್ಯ ಸ್ಮರಣೆ

ದಿನಾಂಕ ರಂದು : 07-12-2022



ದಿ|| ಶ್ರೀ ವಿ. ವೆಂಕಟಗಿರಿ
ನಿಧನ : 07-12-2011
ಸದಾ ನೆನಪಿನಲ್ಲಿ ಪತ್ನಿ : ಶ್ರೀಮತಿ ದೇವು (ಅಧ್ಯಕ್ಷರು)
ಸದಾ ನೆನಪಿನಲ್ಲಿ ಮಗ : ವಿ. ಬಾಲು (ಕಾರ್ಯದರ್ಶಿ)
ವಿ. ವೆಂಕಟಗಿರಿ ಎಜುಕೇಷನ್ ಟ್ರಸ್ಟ್.
ಶಿಕ್ಷರ್ಣಿ ಸೆಂಟ್ರಲ್ ಸ್ಕೂಲ್
ಶಿಕ್ಷರ್ಣಿ ಹೈಸ್ಕೂಲ್
236/ 1, 236/ 2, 1ನೇ ಹಂತ, ಹೆಬ್ಬಾಳು, ಮೈಸೂರು - 16.
ಮೊ : 6360849548 / 8217069961

HERITAGE HOMES
MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
30x40 | 30x50
40x60 | 50x80
ಕೇವಲ ₹550/ ಪ್ರತಿ ಚದರ ಅಡಿ ಸುಲಭ 4 ಕಂತುಗಳ ಸೌಲಭ್ಯವಿದೆ
ಆಧುನಿಕ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಅಧ್ವಿಕಾ ವೆಂಚರ್ಸ್
8884528004, 9071386615

ಕರ್ನಾಟಕ ಸರ್ಕಾರ
CADA
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕಾಡಾ ನಂ–2 ವಿಭಾಗ, ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
ದೂರವಾಣಿ ಸಂಖ್ಯೆ: 0821–2414090 email- eecada2mysore@gmail.com
ಟೆಂಡರ್ ಪ್ರಕಟಣೆ ಸಂಖ್ಯೆ:08/2022–23 ದಿನಾಂಕ: 05.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮದ್ದೂರು, ಚಾಮರಾಜನಗರ, ಕೆ.ಆರ್. ನಗರ, ಮಂಡ್ಯ ಹಾಗೂ ಮೈಸೂರು ತಾಲ್ಲೂಕು ವ್ಯಾಪ್ತಿಯಲ್ಲಿ ಆಯಕಟ್ಟು ರಸ್ತೆ – 05 ಮತ್ತು ವಸತಿ – 01 ಕಾಮಗಾರಿಗಳಿಗೆ ಕೆಡಬ್ಲ್ಯೂ–1ರ ಪ್ರಕಾರ ಇ–ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಅನ್ನು ಏಕಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಇ–ಪೋರ್ಟಲ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 08.12.2022 ರಿಂದ ಟೆಂಡರ್‌ದಾರರು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.12.2022ರ ಸಂಜೆ 4.00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 17.12.2022 ಸಂಜೆ 4.30 ಗಂಟೆಯ ನಂತರ. ಹೆಚ್ಚಿನ ಮಾಹಿತಿಗಾಗಿ ಕೆಳಗೆ ಸಹಿ ಮಾಡಿರುವ ಅಧಿಕಾರಿರವರ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಕಾಡಾ ನಂ.2 ವಿಭಾಗ, ಕಾಜಯೋ, ಮೈಸೂರು.
ವಾಸಾಸಂಇ/ಮೈಸೂರು/ಕಾಡಾ ಸಾಮಾ/737/2022–23

WANTED EXPERIENCED TEACHERS
FOR CBSE SCHOOL - GRADE 10
- Physics Teacher
- Chemistry Teacher
- Mathematics Teacher
- Social Science Teacher
Note: Minimum of 2-3 years of experience is expected, preferably in CBSE English Medium School
Place : Nanjangud
8150857937 / 7676110063

G9 projects
REQUIRED
SALES EXECUTIVE
Quali : Graduate / Diploma Holders
Smart /Hardworking and ambitious
Experience : 0-5 Years
Walk in with your resume on 7/12/2022 from 10.30 AM - 5 PM
G9 Projects, #136, 2nd floor, Kalidasa Road, Jayalakshmipuram, Mysore.
Landmark : Chandrakala Hospital
Contact : 94483 09081

Kumuda Spa
Best price guaranteed in Hair & Salon services.
SPA & Massage packages available in most reasonable price.
10% Discount on all Package
0821-4193567/9632769550

SITE FOR SALE
- BHIMA KRITIKA LAKE VIEW LAYOUT
- 30 X 40 & 30 X 50
- EAST & WEST FACING
- OFF NANJANGUD ROAD
- NEAR APMC
CONTACT
9035379769

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಹಾಸನ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ.
ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:16/2022–23
ದಿನಾಂಕ:05.12.2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಅರಸೀಕೆರೆ ತಾಲ್ಲೂಕಿಗೆ 2022–23ನೇ ಸಾಲಿನ 5054 ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ–ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ 1) ಅರಸೀಕೆರೆ ತಾ: ಬಾಗೀವಾಳು, ಕರಿಮಾರನಹಳ್ಳಿ ಹಾಗು ಉಗ್ರನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3364) ಟೆಂಡರ್ ಮೊತ್ತ ರೂ 48.08 ಲಕ್ಷಗಳಿಗೆ (2)ಅರಸೀಕೆರೆ ತಾ: ಚಿಕ್ಕಯರಗನಾಳು, ಮಂಚೇನಹಳ್ಳಿಯಿಂದ ಟಿಡಿ ರಸ್ತೆ, ಮಂಚೇನಹಳ್ಳಿ ಹಾಗು ಮಹದೇವರಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3358) ಟೆಂಡರ್ ಮೊತ್ತ ರೂ 43.55 ಲಕ್ಷಗಳಿಗೆ (3) ಅರಸೀಕೆರೆ ತಾ: ಗುತ್ತಿನಕೆರೆ, ದೊಡ್ಡೇನಹಳ್ಳಿ, ಬಾಳೇನಹಳ್ಳಿ ಮತ್ತು ಎಸ್. ಮಾಕನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ ಟೆಂಡರ್ ಮೊತ್ತ ರೂ 44.17 ಲಕ್ಷಗಳಿಗೆ (4) ಅರಸೀಕೆರೆ ತಾ: ಕುಡುಕುಂದಿ, ದೊಡ್ಡಯರಗನಾಳು, ನಾಗರಹಳ್ಳಿ ಮತ್ತು ಬೊಮ್ಮಿಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3362) ಟೆಂಡರ್ ಮೊತ್ತ ರೂ 48.01 ಲಕ್ಷಗಳಿಗೆ (5) ಅರಸೀಕೆರೆ ತಾ: ನಾಗತಿಹಳ್ಳಿ, ಕಾಟಿಕೆರೆ ಮತ್ತು ಹೊಸಕಲ್ಲನಾಯ್ಕನಹಳ್ಳಿ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3361) ಟೆಂಡರ್ ಮೊತ್ತ ರೂ 48.34 ಲಕ್ಷಗಳಿಗೆ (6) ಅರಸೀಕೆರೆ ತಾ: ಜಾಡಘಟ್ಟ, ಬೆಲವತ್ತಹಳ್ಳಿ, ಹುಲ್ಲೇನಹಳ್ಳಿ ಹಾಗು ಚೆಲ್ಲಾಪುರ ಗ್ರಾಮಗಳಲ್ಲಿ ನಿರ್ಮಿಸಲಾಗುತ್ತಿರುವ ಕಾಂಕ್ರೀಟ್ ರಸ್ತೆ & ಚರಂಡಿ ಕಾಮಗಾರಿಗಳಿಗೆ ನಿರ್ಮಾಣ ಸಾಮಗ್ರಿಗಳನ್ನು ಹಾಗು ಯಂತ್ರೋಪಕರಣಗಳನ್ನು ಒದಗಿಸುವ ಬಗ್ಗೆ (INDENT-3288) ಟೆಂಡರ್ ಮೊತ್ತ ರೂ 48.23 ಲಕ್ಷಗಳಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಸಾಮಾಗ್ರಿಗಳನ್ನು ಪೂರೈಸಲು ನೊಂದಣೀಯಾಗಿರುವ ಮಾರಾಟದಾರರಿಂದ & ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರುಗಳು ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ–ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ದಿನಾಂಕ: 07.12.2022ರಿಂದ ದಿನಾಂಕ:13.12.2022ರ ಸಂಜೆ 5.00ಘಂಟೆಯವರೆಗೆ ಟೆಂಡರ್‌ನ್ನು, ನಿಗಧಿತ ನಮೂನೆಗಳನ್ನು www.eproc.karnataka.gov.inನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 13.12.2022ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ: 12.12.2022ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 15.12.2022ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ–ಪ್ರಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜನಿಯರ್, ಪ.ರಾಜ್.
ಇಂ.ವಿಭಾಗ, ಚನ್ನರಾಯಪಟ್ಟಣ.
ವಾಸಾಸಂಇ/ಹಾಸನ/802/2022–23

ಭಾವಪೂರ್ಣ ಶ್ರದ್ಧಾಂಜಲಿ




ಇವರು ದಿ: 6.12.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯ ಕ್ರಿಯೆಯನ್ನು ದಿ:07.12.2022 ಬುಧವಾರ, ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು: ಕುಟುಂಬ ವರ್ಗದವರು, ಹಾಗೂ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗ, ಮೈಸೂರು.
ಶಿವಸ್ವಾಮಿ.ಎಂ
ಜನನ:14.05.1966 ನಿಧನ: 06.12.2022
ಅಗ್ನಿಶಾಮಕ ಠಾಣಾಧಿಕಾರಿ, ಬನ್ನಿಮಂಟಪ ಅಗ್ನಿಶಾಮಕ ಠಾಣೆ, ಮೈಸೂರು

10ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ಜೀವನ ಮಾಡುತ್ತಿರುವ ನಿಮ್ಮ ಪ್ರೀತಿಯ ಕುಟುಂಬವರ್ಗ
ದುಃಖತಪ್ತರು ಧರ್ಮಪತ್ನಿ ನಾಗರತ್ನ ಹಾಗೂ ಕುಟುಂಬವರ್ಗ
ಮಂಜಣ್ಣ ಇಟ್ಟಿಗೆಗೂಡು, ಮೈಸೂರು
ನಿಧನ: 06.12.2012

SAD DEMISE



S.N. Nanda Kumar
Retd., Officer, BARC
D.O.B: 12.7.1946 - D.O.D: 05.12. 2022
A Resident of Ramakrishna Nagar, Mysore
Grieving: Wife, Son, Daughter, Relatives and Friends.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

SET SAIL ON THE AGNIPATH
BECOME AN AGNIVEER



JOIN INDIAN NAVY

Indian Navy invites online applications from unmarried male and unmarried female candidates (who fulfil eligibility conditions as laid down by the Government of India) for Agniveer 01/2023 (May 23) Batch

Entry	Educational Qualification	Vacancies	Born Between (Both Date Inclusive)
AGNIVEER (Senior Secondary Recruit)	Qualified in 10+2 examination with Maths & Physics and at least one of these subjects:- Chemistry/ Biology/ Computer Science from the Boards of School Education recognised by Ministry of Education, Govt. of India	1400 (including a maximum of 280 female)	01 May 2002 to 31 Oct 2005
AGNIVEER (Matric Recruit)	Passed Matriculation Examination from the Boards of School Education recognised by Ministry of Education, Govt. of India	100 (including a maximum of 20 female)	

Online application window is open from 08 Dec 22 to 17 Dec 22

For eligibility criteria and details for the batch, visit www.joinindiannavy.gov.in and Employment News dated 03 Dec 22.

For queries contact Help Desk : Email - sailor@navy.gov.in, Telephone - 011 21410669

Scan this QR Code to apply online

CBC10701/13/0011/2223